೧೯೮೮ರ ಕರ್ನಾಟಕದ ಅರಣ್ಯ (ತಿದ್ದುಪಡಿ) ವಿಧೇಯಕ
ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ. ರಾಚಯ್ಯ (ಕೃಷಿ ಹಾಗೂ ಅರಣ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ೧೯೮೮ರ ಅರಣ್ಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

(ಪ್ರಸ್ತಾವವನ್ನು ಮಂಡಿಸಲಾಯಿತು)

ಶ್ರೀ ಬಿ. ರಾಚಯ್ಯ.—ಸನ್ಮಾನ್ಯ ಅಧ್ಯಕ್ಷರೇ, ೧೯೬೩ರ ಫಾರೆಸ್ಟ್ ಆಕ್ಟ್‌ಗೆ ಕೆಲವು ತಿದ್ದುಪಡಿಗಳನ್ನು ತಂದಿದ್ದೇವೆ. ಈ ಬಿಲ್‌ನ್ನು ಈಗಾಗಲೇ ಸಭೆಯ ಮುಂದೆ ಇಟ್ಟಿದ್ದೇನೆ. ಮಾನ್ಯ ಸಭೆ ಈ ಬಿಲ್ಲನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ೧೯೬೩ನೇ ಇಸವಿಯಲ್ಲಿ ಈ ಆಕ್ಟ್ ಮಾಡಿದ ಮೇಲೆ ಡಿಪಾರ್ಟ್‌ಮೆಂಟಿನಲ್ಲಿ ಚೀಫ್ ಕನ್ಸರ್‌ವೇಟರ್ ಮತ್ತು ಕನ್ಸರ್‌ವೇಟರ್ ಎಂದು ಇತ್ತು. ಈಗ ಅದನ್ನು ಪ್ರಿನ್ಸಿಪಾಲ್ ಚೀಫ್ ಕನ್‌ಸರ್‌ವೇಟರ್ ಮತ್ತು ಅಡಿಷನಲ್ ಚೀಫ್ ಕನ್‌ಸರ್‌ವೇಟರ್ ಎಂದು ಸೇರಿಸಬೇಕೆಂದು ಈ ಆಕ್ಟ್‌ನಲ್ಲಿ ಇದೆ. (2) in clause (7), in sub-clause (a), after the word 'resin' the words rubber latex, cocobeans or pods shall be inserted ಈಗ ರಬ್ಬರ್ ಪ್ಲಾಂಟೇಷನ್ ಬೆಳೆಯುತ್ತಿರುವುದರಿಂದ ಈ ಪದಗಳನ್ನು ಸೇರಿಸಬೇಕೆಂದು ತಿದ್ದುಪಡಿಯನ್ನು ತಂದಿದ್ದೇವೆ. (3) in clause (15), after the words 'flakes or pulp' the words but does not include sandalwood manufactured in the from of sandalwood handicraft articles' shall be inserted'. ಏಕೆಂದರೆ, ಗುಡಿಗಾರರು ಸ್ಯಾಂಡಲ್‌ವುಡ್‌ನ್ನು ಕೆಲಸ ಮಾಡುವುದಕ್ಕಾಗಿ ಇಟ್ಟುಕೊಳ್ಳಬೇಕಾಗುತ್ತದೆ ಆದ್ದರಿಂದ ಅದನ್ನೂ ಸೇರಿಸಬೇಕೆಂದು ತಿದ್ದುಪಡಿ ತಂದಿದ್ದೇವೆ ಆಮೇಲೆ, ಈಗ ರೆವಿನ್ಯೂ ಅಪಲೇಟ್ ಟ್ರಿಬ್ಯುನಲ್ ಎಂದು ಇದೆ. ಅದನ್ನು ಕರ್ನಾಟಕ ಅಪಲೇಟ್ ಟ್ರಿಬ್ಯುನಲ್ ಒಂದು ಸೇರಿಸುವುದಕ್ಕೆ ತಿದ್ದುಪಡಿ ತಂದಿದ್ದೇವೆ. ಇವೆಲ್ಲಾ ಟೆಕ್ನಿಕಲ್ ಇಷ್ಯೂಸ್ ಆಗಿದೆ. ಇದರಲ್ಲಿ ಮುಖ್ಯವಾಗಿ ಇರುವುದೇನೆಂದರೆ. ೧೯೦೮ರಲ್ಲಿ ಇಂಡಿಯನ್ ಲಿಮಿಟೇಷನ್ ಆಕ್ಟ್ ಎಂದು ಇತ್ತು. ಕಾಲಕ್ರಮೇಣ ಕಾನೂನುಗಳನ್ನು ಆಗಿಂದಾಗ್ಗೆ ಸಂದರ್ಭಕ್ಕೆ ತಕ್ಕಂತೆ ಬದಲಾವಣೆ ಮಾಡಬೇಕಾಗುತ್ತದೆ. ಆದ್ದರಿಂದ ಈಗ ಕೆಲವು ತಿದ್ದುಪಡಿಗಳನ್ನು ಈ ಅರಣ್ಯ ವಿಧೇಯಕದಲ್ಲಿ ತಂದಿದ್ದೇವೆ. ೧೯೮೧ರಲ್ಲೂ ಸಹ ಒಂದು ಸಾರಿ ತಿದ್ದುಪಡಿಯಾಗಿತ್ತು. ತಿದ್ದುಪಡಿಯಾದ ಮೇಲೆ Amendment of section 101-A-To sub-section (1) of section 101-A of the principal Act, the following provisios shall be deemed to have been added, with effect from the 23rd day of Feb. 1981, namely:

> "Provided that no seigniorge value shall be payable in respect of bark for the period from the 19th day of Feb. 1981 to the 31st day of August 1983"

ಬಾರ್ಕ್ (ಮರದ ತೊಗಟೆ ಗಳಿಗೆ ಚಾರ್ಜ್ ಕೊಡುವುದಕ್ಕಾಗುವುದಿಲ್ಲವೆಂದು ಕೆಲವು ಪ್ರೈವೇಟ್ ಇಂಡಸ್ಟ್ರೀಯವರು ಕೋರ್ಟ್‌ಗೆ ಹೋಗಿದ್ದರು. ಇದರ ಜೊತೆಗೆ ಪಬ್ಲಿಕ್ ಅಕೌಂಟ್ ಕಮಿಟಿಯವರೂ ಕೆಲವು ಟೀಕೆಗಳನ್ನು ಮಾಡಿದ್ದರು. ಇದರ ಬಗ್ಗೆ ಒಂದು ಕಾನೂನನ್ನು ಮಾಡುವುದಕ್ಕೆ ಲಾ ಡಿಪಾರ್ಟ್‌ಮೆಂಟನವರಿಗೆ ನಾವು ತಿಳಿಸಿದ್ದೆವು. ಈ ಹಿಂದೆ ಪ್ರೈವೇಟ್ ವುಡ್ ಇಂಡಸ್ಟ್ರಿಯವರು ಉಪಯೋಗಿಸಿಕೊಂಡ ಬಾರ್ಕ್ ಮೇಲೆ ನಾವು ಚಾರ್ಜ್‌ನ್ನು ವಸೂಲು ಮಾಡಲಾಗಿಲ್ಲ. ಈಗ ಈ ವಿಧೇಯಕವನ್ನು ತಂದಿರುವುದರಿಂದ ಇನ್ನು ಮುಂದೆ ಬಾರ್ಕ್ ಮೇಲೆ ಚಾರ್ಜ್‌ನ್ನು ವಸೂಲು ಮಾಡಬಹುದು.

೧.೩೦ ಪಿ. ಎಂ.

ಹರಿಹರ ಪಾಲಿಫೈಬರ್ಸ್‌ನವರಿಂದ ಒಂದು ಲಕ್ಷ ಟನ್‌ಗೆ ಅಂದಾಜು ೪೫.೧೦ ೦೦೦–ರೂಪಾಯಿಗಳು ಬರಬೇಕಾಗಿತ್ತು. ಮೈಸೂರು ಪೇಪರ್‌ಮಿಲ್ಸ್‌ನವರಿಂದ ೩೦ ಸಾವಿರ ಟನ್‌ಗೆ ೧೫,೫೩,೦೦೦ ರೂ.ಗಳು ಬರಬೇಕಾಗಿತ್ತು ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್‌ನವರಿಂದ ೬ ಸಾವಿರ ಟನ್‌ಗಳಿಗೆ ೨,೭೦,೬೦೦ ರೂ.ಗಳು ವಸೂಲು ಆಗಬೇಕಾಗಿತ್ತು. ಹಾಗೆಯೇ ಪ್ಲೈವುಡ್ ಇಂಡಸ್ಟ್ರೀಸ್ ಮತ್ತು ಮ್ಯಾಚ್ ಇಂಡಸ್ಟ್ರೀಸ್‌ಗಳಿಂದ ೧,೩೪,೫೦೭ ಟನ್‌ಗಳಿಗೆ ೪೭,೬೭ ೮೫೦–ರೂ.ಗಳು ಬರಬೇಕಾಗಿತ್ತು.

ಆ ಆಕ್ಟನ್ನು ರೆಟ್ರೊಸ್ಪೆಕ್ಟಿವ್‌ನಿಂದ ಮಾಡುವುದಕ್ಕೆ ಆಗುವುದಿಲ್ಲ ಎಂದು ಸಂಬಂಧಪಟ್ಟವರು ಕೋರ್ಟಿಗೆ ಹೋಗಿರುವುದರಿಂದ ಮುಂದೆ ೧೯೬೧ ರಿಂದ ಏನು ಆಕ್ಟ್ ಇತ್ತೊತ್ತು, ಜಾರಿಗೆ ಬಂದಿದೆ, ಹೊಸ ರೇಟು ಹಿಂದೆ ಕಡಿಮೆ ಇದ್ದುದ್ದನ್ನು ಈಗ ಹೆಚ್ಚಿಗೆ ಮಾಡಿದ್ದಾರೆ. ಮಾನ್ಯ ಗುಂಡೂರಾಯರ ಕಾಲದಲ್ಲಿ ಆ ಆಕ್ಟನ್ನು ರಿವೈಸ್ ಮಾಡಿ ಹೆಚ್ಚಿಗೆ ಮಾಡಿದ್ದರು, ಹೀಗೆ ಹೆಚ್ಚಿಗೆ ಮಾಡಿದ್ದುದನ್ನು ಒಂದೇ ಸಾರಿ ಕೊಡುವುದಕ್ಕೆ ಆಗುವುದಿಲ್ಲ ಎಂದು ತಕರಾರು ಮಾಡಿದರು. ಮುಂದೆ ಹೆಚ್ಚುವರಿ ಆಗಿರತಕ್ಕಂಥ ರೇಟ್‌ನ್ನು ಕೊಡುವುದಕ್ಕೆ ಒಪ್ಪುವುದಾದರೆ ಒಂದ ವರ್ಷ ವೇವ್ ಮಾಡುತ್ತೇವೆ ಎಂದು ಹೇಳಿದ್ದರು. ಅದನ್ನು ರೆಕ್ಟಿಫೈ ಮಾಡುವುದಕ್ಕೋಸ್ಕರವಾಗಿ ಇದನ್ನು ತಂದಿದ್ದೇವೆ. ದಯವಿಟ್ಟು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಅಧ್ಯಕ್ಷರೇ, ಈ ಒಂದು ತಿದ್ದುಪಡಿಯನ್ನು ಏಳು ಉದ್ದೇಶಗಳಿಗಾಗಿ ತಂದಿದ್ದೇವೆ ಎನ್ನತಕಂಥಾದ್ದನ್ನು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ಇದರಲ್ಲಿ ನನ್ನ ಒಂದು ಮುಖ್ಯವಾದ ಅಬ್‌ಜೆಕ್ಷನ್ ಏನೆಂದರೆ, ಸೆಕ್ಷನ್ ೬೪ ಎ-ಇದರಲ್ಲಿ ಏನಾಗಿದೆ ಅಂದರೆ,

> "(1) in the heading, after the words," reserved forest "thewords" or any land in a protected forest and certain other lands" shall be inierted.
>
> (2) in sub-section (1), for the words" any land in reserved forest" the words "any land in a reserved forest or protected forest, or any other land entrusted to the forest Department for the purpose of afforestation "shall be substituted"

ಈಗಾಗಲೇ ತಮಗೆ ಗೊತ್ತಿರುವ ಹಾಗೆ ರೆಗ್ಯುಲೈಸೇಷನ್ ಆಫ್ ಲ್ಯಾಂಡ್ ರೆವಿನ್ಯೂ ಆಕ್ಟ್ ತಂದು ಅಮೆಂಡ್‌ಮೆಂಟ್ ಕೂಡ ಬಂದಿದೆ, ಅಲ್ಲಿಯೂ ಕೂಡ ರೆಗ್ಯುಲರೈಸ್ ಮಾಡಿ ಸ್ಮಾಲ್ ಫಾರ್ಮರ್ಸ್, ಮಾರ್ಜಿನಲ್ ಫಾರ್ಮರ್ಸ್, ಮತ್ತು ಉಳಿದ ಎಲ್ಲರಿಗೂ ಈ ಭೂಮಿಯನ್ನು ಕೊಡಬೇಕೆನ್ನುವ ಒಂದು ಉದ್ದೇಶದಿಂದ ಸರಕಾರದವರು ಈ ಒಂದು ಕಾನೂನನ್ನು ತಂದಿದ್ದಾರೆ. ಅದರಲ್ಲಿಯೂ ಕೂಡ ಅನೇಕ ಕಡೆ ಫಾರೆಸ್ಟ್ ಲ್ಯಾಂಡ್‌ನಲ್ಲಿಯೂ ಕೂಡ ಕೆಲವು ಬಡವರು ಎನ್‌ಕ್ರೋಚ್ ಮಾಡಿಕೊಂಡಿದ್ದಾರೆ. ಕೆಲವು ಕಡೆ 'ಬಿ' ಕ್ಲಾಸ್ ಲ್ಯಾಂಡ್‌ನ್ನು ಕೂಡ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಹ್ಯಾಂಡ್ ಓವರ್ ಮಾಡಿದ್ದಾರೆ. ಆದರೆ ಇದು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನ ಲ್ಯಾಂಡ್ ಅಲ್ಲ. ಇದು ಅಫೋರೆಸ್ಟೇಷನ್ ಮಾಡಬೇಕೆಂದು ಕೆಲವು ರೆವಿನ್ಯೂ ಲ್ಯಾಂಡ್‌ನ್ನು ಡಿಪಾರ್ಟ್‌ಮೆಂಟ್‌ಗೆ ಹ್ಯಾಂಡ್ ಓವರ್ ಮಾಡಿದ್ದರು, ಅಂತಹ ಕಡೆಗಳಲ್ಲಿ ಅನೇಕ ಕಡೆಗಳಲ್ಲಿ ಈಗಾಗಲೇ ಎನ್‌ಕ್ರೋಚ್‌ಮೆಂಟ್ ಆಗಿದೆ. ಅಂದಿನ ಆಜ್ಞೆಯ ಪ್ರಕಾರ ರೆಗ್ಯುಲರೈಸ್ ಮಾಡಿದ್ದರೆ ಆ ಜಮೀನು ಕೂಡ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಹೋಗುತ್ತಾ ಇರಲಿಲ್ಲ. ಹೀಗೆ ಬಡವರಿಗೆ ಸಿಕ್ಕಿದ್ದನ್ನು ಅಂದಿನ ಅಧಿಕಾರಿಗಳು ರೆಗ್ಯುಲರೈಸ್ ಮಾಡದ ಕಾರಣ, ಅಲ್ಲಿಯ ಅಧಿಕಾರಿಗಳಾದ ಎ. ಸಿ. ಡಿ. ಸಿ. ಮುಂತಾದ ಯಾರೋ ಮಾಡಿದ ತಪ್ಪಿರಬಹುದು ಹಾಗಾಗಿ ಉಳಿದುಕೊಂಡಿತು. ಅನಂತರ ಸುಯೋ ಮೋಟೋ ಸೆಂಟ್ರಲ್ ಆಕ್ಟ್ ಬಂದಮೇಲೆ ಎಲ್ಲಾ ಜಮೀನನ್ನು ಹ್ಯಾಂಡ್ ಓವರ್ ಮಾಡಿದರು. ಅಧಿಕಾರಿಗಳು 'ಡಿ' ಕ್ಲಾಸ್ ಲ್ಯಾಂಡ್ ಎಂದು ಸರ್ವೆ ನಂಬರ್ ಬರೆದರು ಒಂದು ಪಟ್ಟಿಯನ್ನು ತಯಾರು ಮಾಡಿ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಹ್ಯಾಂಡ್ ಓವರ್ ಮಾಡಿದರು. ಅಲ್ಲಿ ಬಡವರು ಎನ್‌ಕ್ರೋಚ್ ಮಾಡಿಕೊಂಡು ಅನ್‌ಆಥರೈಸ್ಡ್ ಕಲ್ಟಿವೇಶನ್ ಮಾಡಿಕೊಂಡು ಕುಳಿತಿದ್ದಾರೆ. ಈಗ ಇಲ್ಲಿ ನಾವು ಬಿಲ್ ಪಾಸ್ ಮಾಡುವುದರಿಂದ ಅಲ್ಲಿಯ ಬಡವರೆಲ್ಲರನ್ನೂ ಹೊರಗೆ ಹಾಕಿದ ಹಾಗೆ ಆಗುತ್ತದೆ. ಯಾರೋ ಅಧಿಕಾರಿಗಳು ಮಾಡಿದ ತಪ್ಪಿಗೆ ಈ ಬಡಜನರು ತೊಂದರೆಗೆ ಸಿಕ್ಕಿ ಹಾಕಿಕೊಂಡಂತಾಗುತ್ತದೆ. ಅದಕ್ಕಾಗಿ ಈ ಬಿಲ್ ಬಗ್ಗೆ ನಾವು ಚಿಂತನೆ ಮಾಡಬೇಕಾಗುತ್ತದೆ. ಬಡವರಿಗೆ ನಾವು ತೊಂದರೆ ಆಗುವ ಹಾಗೆ ಮಾಡಕೂಡದು. 'ಡಿ' ಕ್ಲಾಸ್ ಲ್ಯಾಂಡ್ ನಿಮಗೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನಿಂದ ನೇರವಾಗಿ ಬಂದಿರತಕ್ಕಂಥಾದ್ದು. ಅಲ್ಲ. ನಾವು ಇದನ್ನು ಒಪ್ಪಿಕೊಂಡರೆ ನಾಳೆಯೇ ಆ ಜನರಿಗೆ ತೊಂದರೆ

ಆಗುತ್ತದೆ. ಆದುದರಿಂದ ದಯವಿಟ್ಟು ಇದರ ಬಗ್ಗೆ ಪುನರ್ ಪರಿಶೀಲನೆ ಮಾಡತಕ್ಕಂಥ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ.

In the Statement of Objects and reasons, you have stated.

"(i) to include sandalwod handicraft articles from the definition of the term "sandalwood" to give relief to the artisans"

ಇದನ್ನು ಆರ್ಟಿಸನ್ಸ್‌ಗೆ ಸಹಾಯ ಮಾಡಬೇಕೆಂದು ಮಾಡಿದ್ದೀರಿ. ಎರಡನೆಯದು,

(ii) to prohibit unauthorised occupation of land in reserved forest and district forest, for any purpose.

ಇದರಲ್ಲಿ ಏನು ಹೇಳಿದ್ದಾರೆ ಎಂದರೆ ೬೮ (ಎ) ನಲ್ಲಿ ರಿಸರ್ವ್ ಫಾರೆಸ್ಟ್ ಮೊದಲು ಏನಿದೆ ಅಲ್ಲಿ ಎನ್‌ಕ್ರೋಚ್‌ಮೆಂಟಾಗಿದ್ದರೆ ಅದನ್ನು ತೆಗೆದು ಹಾಕಿ. ಅದಕ್ಕೆ ನಮ್ಮ ಅಬ್ಜೆಕ್ಷನ್ ಇಲ್ಲ. ಆದರೆ ಹೊಸದಾಗಿ ನೀವು ಏನು ಪದ ಸೇರಿಸುತ್ತಿದ್ದೀರಿ.

"any land in a reserved forest or protected forest or any other land entrusted to the Forest Department for the purpose of afforestation"

ಇಲ್ಲೇ ಬರುವುದು ವಾದ. ರೆವಿನ್ಯೂ ಇಲಾಖೆಯವರಿಗೆ ಏನು ಎನ್‌ಟ್ರಸ್ಟ್ ಮಾಡಿದ್ದರೋ ಅದನ್ನು ಕಸಿದುಕೊಂಡರೆ ಶಿವಮೊಗ್ಗ ಚಿಕ್ಕಮಗಳೂರು ಮುಂತಾದ ಕಡೆಗಳಲ್ಲಿರುವ ಸಾವಿರಾರು ಜನ ಬಡವರಿಗೆ ತೊಂದರೆ ಆಗುತ್ತದೆ. ಅವರಿಗೆ ಪ್ರೊಟೆಕ್ಷನ್ ಕೊಡುವ ದೃಷ್ಟಿಯಿಂದ ತಾವು ಏನು ಮಾಡಿದಿರಿ, ಅದನ್ನು ೧೯೭೭ ರ ಗವರ್ನ್‌ಮೆಂಟ್ ಎಕ್ಸಿಕ್ಯೂಟಿವ್ ಆರ್ಡರ್ ಏನಿತ್ತು ಅದರ ಪ್ರಕಾರ ಅಂದಿನ ಅಧಿಕಾರಿಗಳು ರೆಗ್ಯುಲರೈಸ್ ಮಾಡಿದ್ದರೆ ನೀವು ಈಗ ತೆಗೆದುಕೊಳ್ಳುತ್ತಿರಲಿಲ್ಲ. ಅವರು ಏನು ಮಾಡಿದರು ಎಂದು ಪಟ್ಟಿ ಮಾಡಿದರು, ಇಷ್ಟು ಡಿ. ಕ್ಲಾಸ್ ಲ್ಯಾಂಡಿನಲ್ಲಿ ಇಷ್ಟು ಜಮೀನಿದೆ, ಇಷ್ಟು ಸರ್ವೆ ನಂಬರಿದೆ ಎಂದು ಪಟ್ಟಿ ಮಾಡಿ ನಮಗೆ ಕೊಟ್ಟರು, ಅಲ್ಲಿ ನಿಜವಾಗಿಯೂ ಜಮೀನಿದೆ ಎಂದು ತಿಳಿದುಕೊಂಡು ಜಮೀನು ಬಿಡಿ ಎಂದು ಹೇಳುತ್ತಿದ್ದೀರಿ. ಆದರೆ ಆ ಜಮೀನುಗಳಲ್ಲಿ ೨೦-೩೦ ವರ್ಷಗಳಿಂದ ಎನ್‌ಕ್ರೋಚ್ ಆಗಿದೆ ಕೆಲವು ಅಧಿಕಾರಿಗಳ ತಪ್ಪಿನಿಂದ ಅದು ಹಿಂದೆಯೇ ರೆಗುಲರೈಸಾಗುವುದು ತಪ್ಪಿಹೋಗಿದೆ ಇದನ್ನು ಹೇಗೆ ಬಗೆಹರಿಸುತ್ತೀರಿ ? ಮೂರನೆಯದು.

"to provide penalty for unauthorisedly taking possession of any land in protected forest for the land entrusted to the Forest Department for the purpose of afforestation."

ಇಲ್ಲಿ ಏನಾಗುತ್ತದೆ ಎಂದರೆ ಯಾರಿಗೆ ದುಡ್ಡಿದೆಯೋ ಇನ್‌ಫ್ಲುಯೆನ್ಸಿದೆಯೋ ಅವರೆಲ್ಲ ರೆಗ್ಯುಲರೈಸ್ ಮಾಡಿಕೊಂಡಿದ್ದಾರೆ. ಆದರೆ ಯಾರಿಗೆ ದಿಕ್ಕಿಲ್ಲವೋ ಅವರು ಮಾಡಿಸಿಕೊಂಡಿಲ್ಲ, ಅಂಥವರನ್ನು ಹಿಡಿದು ಪೆನಾಲ್ಟಿ ಹಾಕಿ ಜೈಲಿಗೆ ಕಳಿಸ್ತೀನಿ ಎನ್ನುತ್ತೀರಿ ಅಲ್ಪಸ್ವಲ್ಪ ಜಮೀನಿನವರನ್ನು ಜೈಲಿಗೆ ಕಳಿಸುತ್ತೇನೆ ಎನ್ನುವುದು ಸಮಂಜಸವಲ್ಲ. ಇದರ ಬಗ್ಗೆ ಪುನಃ ಪರಿಶೀಲನೆ ಮಾಡಬೇಕೆಂದು ಕೋರುತ್ತೇನೆ. ನಾಲ್ಕನೆಯದು.

"to make it obligatory to obtain licence for possession or storing of sandal wood oil also"

ಅದಕ್ಕೆ ನಮ್ಮ ಅಭ್ಯಂತರ ಇಲ್ಲ.

Then. (v) says :

"to provide for levy and remittance of Forest Development Tax on the forest produce disposed of or by a

corporation owned or controlled, or a body notified by the State Government.''

ಇದೊಂದು ಕಾರ್ಪೊರೇಷನ್‌ಗೆ ಕೊಡುವುದು. ನಿಮಗೆ ಗೊತ್ತಿರಬಹುದು. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಲಾಸ್ಟ್ ಟೈಮ್ ಒಂದು ರಿಪೋರ್ಟ್ ಕೊಟ್ಟು ಕಾರ್ಪೊರೇಷನ್‌ನಲ್ಲಿ ಜಮೀನು ಸಮ ಮಾಡಬೇಕು ಅಂತ ೩೪ ಲಕ್ಷ ಖರ್ಚು ಮಾಡಿ ಒಂದು ಬುಲ್‌ಡೋಜರ್ ತಂದರು. ಅದಕ್ಕೆ ರೀಫರ್ಸ್ ಅನ್ನು ಯೂಸ್ ಮಾಡದೆ ಆಗ್ರೋ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನವರು ೬ ಲಕ್ಷ ರೂ. ರೆಂಟ್ ಮೇಲೆ ತಂದು ತಮ್ಮ ಜಮೀನುಗಳನ್ನು ಸಮಾ ಮಾಡಿಕೊಂಡರು. ಅಂಥ ಕಾರ್ಪೊರೇಷನ್‌ಗೆ ಮತ್ತೆ ಸವಲತ್ತು ಕೊಡಬೇಕಂತೆ ಹೊರಟಿದ್ದೀರಿ. ಕೊಡಿ, ಬೇಡ ಎನ್ನುವುದಿಲ್ಲ, ಅದು ಗವರ್ನಮೆಂಟ್ ಇಂಡಸ್ಟ್ರೀಸ್, ನೀವು ಕೊಡಬೇಕು, ಆದರೆ ಅಲ್ಲಿ ಏನು ನಡೀತಿದೆ ಎಂದು ನೋಡುವ ಸೌಜನ್ಯ ಕೂಡ ಸರ್ಕಾರಕ್ಕೆ ಇಲ್ಲ ಅಂದರೆ ಯಾವ ರೀತಿ ಆಡಳಿತ ನೀವು ನಡೆಸ್ತೀರಿ ಎನ್ನುವುದು ಗೊತ್ತಾಗುತ್ತದೆ, ಈ ಇಲಾಖೆಯಲ್ಲಿ ೩೪ ಲಕ್ಷ ರೂಪಾಯಿಯ ಬುಲ್‌ಡೋಜರ್ ಇದ್ದರೂ ಕೂಡ ಆಗ್ರೋ ಇಂಡಸ್ಟ್ರೀಸ್ ಇಲಾಖೆಯಿಂದ ರೆಂಟ್ ಮೇಲೆ ತೆಗೆದುಕೊಂಡು ಆರು ವರ್ಷ ನಡೆಸಿದ್ದು ಅದಕ್ಕೆ ೬ ಲಕ್ಷ ರೂಪಾಯಿಯನ್ನು ನೀಡಿದ್ದಾರೆ. ಆರು ವರ್ಷಗಳ ಕಾಲ ಆ ಬುಲ್‌ಡೋಜರ್ ಐಡಲ್ ಆಗಿ ಹಾಗೇ ಬಿದ್ದಿತ್ತು ಎಂದು ಹೇಳುವುದಾದರೆ ಇದಕ್ಕೆ ನಾವೇನು ಹೇಳಬೇಕು. ಐಡಲ್ ಆಗಿ ಈ ಮಿಷಿನರಿಯನ್ನು ಯಾರು ಆರು ವರ್ಷಗಳ ಕಾಲ ಇಟ್ಟಿದ್ದರು ಅವರ ಮೇಲೆ ಕ್ರಮ ತೆಗೆದುಕೊಳ್ಳಿ. You take action against them. Why they have kept the machinery idle after spending Rs. 34 lakhs ? ಇದಲ್ಲದೆ ೬ ಲಕ್ಷ ರೂಪಾಯಿ ಬಾಡಿಗೆ ಕೊಟ್ಟು ಕೆಲಸ ಮಾಡಿಸಿದ್ದಾರೆ. ಅರಣ್ಯ ಇಲಾಖೆಯಲ್ಲಾಗಲೀ, ಫಾರೆಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನಲ್ಲಿಯಾಗಲೀ ಏನು ನಡೆದಿದೆ ಎಂಬುದರ ಬಗ್ಗೆ ವಿಚಾರ ಮಾಡಬೇಕು. ಇದು ಸರಕಾರದ ಬೊಕ್ಕಸಕ್ಕೆ ಒಂದು ಹೊರೆಯಾಗಿದೆ ಇದು ಬಡವರ ಹಣ. ನಾವು ವರದಿಯನ್ನು ಕೊಟ್ಟಿದ್ದೇವೆ ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು. ಫಾರೆಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನಲ್ಲಿ ಎರಡು ಬುಲ್‌ಡೋಜರ್‌ಗಳನ್ನು ನೆಲ ಸಮ ಮಾಡಬೇಕು, ಹಾಗೂ ಅರಣ್ಯ ಬೆಳೆಸಬೇಕು ಎಂದು ಪರ್ಚೇಸ್ ಮಾಡಿದರು. ಆದರೆ ಅದನ್ನು ಐಡಲ್ ಆಗಿ ಹಾಗೇ ಇಟ್ಟಿದ್ದಾರೆ ರಿಪೇರ್ಸ್ ಸಪ್ಲೈ ಮಾಡಿಲ್ಲವೆಂದು ಆರು ವರ್ಷದಿಂದ ಹಾಗೇ ಇಟ್ಟು ಆಗ್ರೋ ಇಂಡಸ್ಟ್ರೀಸ್‌ನಿಂದ ರೆಂಟ್ ಮೇಲೆ ತೆಗೆದುಕೊಂಡು ನೆಲ ಸಮ ಮಾಡಿ ಅರಣ್ಯ ಬೆಳೆಸಿದ್ದೇವೆಂದು ಹೇಳಿದರು. ಇಲಾಖೆಯ ಬುಲ್‌ಡೋಜರ್ ಇದ್ದರೂ ಕೂಡ ರೆಂಟ್‌ಗೆ ತೆಗೆದುಕೊಂಡು ಮಾಡಬೇಕಾದಂತಹ ಪರಿಸ್ಥಿತಿ ಬಂದಿದೆ. ನಾವು ಇದಕ್ಕೆಂದು ಸಬ್ಸಿಡಿ ಕೊಡುವಾಗ ಇನ್ನಿತರ ಕೆಲವು ಸವಲತ್ತುಗಳನ್ನು ಕೊಡುವಾಗ ಆ ಇಲಾಖೆಯು ಏನು ಕೆಲಸ ಮಾಡುತ್ತದೆ ಎಷ್ಟರ ಮಟ್ಟಿಗೆ ಅದು ಜಾಗೃತವಾಗಿದೆ ಎಂದು ನೋಡುವುದು ನಮ್ಮ ಕರ್ತವ್ಯ ನಿಮಗೆ ಎಂಟ್ರಸ್ಟ್ ಮಾಡುವಂತಹ ಜಮೀನನ್ನು ಬಡವರಿಗೆ ಎಷ್ಟರ ಮಟ್ಟಿಗೆ ಉಳಿಸಿಕೊಡುತ್ತೀರಿ ಯಾವ ರೀತಿ ಅವರಿಗೆ ಅನುಕೂಲ ಮಾಡಿಕೊಡುತ್ತೀರಿ ಎಂಬ ಬಗ್ಗೆ ಸ್ಪಷ್ಟವಾಗಿ ತಮ್ಮ ಹೇಳಿಕೆಯಲ್ಲಿ ಹೇಳಬೇಕು. ಈ ಬಿಲ್ ಚಿಕ್ಕದಾದರೂ ಇದರಲ್ಲಿ ಅನೇಕ ವಿಷಯಗಳು ಇದೆ. ಇದರ ಬಗ್ಗೆ ಸ್ಪಷ್ಟವಾದ ಮಾಹಿತಿಯನ್ನು ಈ ಸದನಕ್ಕೆ ಕೊಡಬೇಕು ಎಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಫಾರೆಸ್ಟ್ ಅಮೆಂಡ್‌ಮೆಂಟ್ ಬಿಲ್ ೧೯೭೮ ಅನ್ನು ಏನು ನಮ್ಮ ಮುಂದೆ ಮಂಡಿಸಿದ್ದಾರೆ ಈ ಮಸೂದೆ ನೋಡುವುದಕ್ಕೆ ಚಿಕ್ಕದಾಗಿದ್ದರೂ ಹಾಗೇ ಇದಕ್ಕೆ ಒಪ್ಪಿಗೆ ಕೊಡಬಹುದೆಂದು ಮೇಲು ನೋಟಕ್ಕೆ ಕಂಡರೂ ಕೂಡ ಮಾನ್ಯ ಖರ್ಗೆಯವರು ಸೆಕ್ಷನ್ ೬೪-ಎ ಬಗ್ಗೆ ಏನು ಮಾತನಾಡಿದರು ಇದು ಬಹಳ ಅಪಾಯಕಾರಿಯಾದಂತಹ ತಿದ್ದುಪಡಿ ಎಂದು ನನ್ನ ಅನಿಸಿಕೆಯಾಗಿದೆ. ಈಗಿರತಕ್ಕಂತಹ ಮುಖ್ಯ ಮಂತ್ರಿಗಳು ಹಿಂದೆ ಕಂದಾಯ ಮಂತ್ರಿಗಳಾಗಿದ್ದಾಗ ಈ ಮನೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ ಅದರಲ್ಲಿ 'ಸಿ' ಮತ್ತು 'ಡಿ' ವರ್ಗದ ಭೂಮಿ ರಾಜ್ಯದಲ್ಲಿ ಏನು ಇದೆ ಆ ಭೂಮಿಯನ್ನು ೧೯೭೭ನೇ ಇಸವಿಯಲ್ಲಿ ಕಂದಾಯ ಇಲಾಖೆಯವರು ಅರಣ್ಯ ಇಲಾಖೆಗೆ ಏನು ವರ್ಗ ಮಾಡಿದ್ದಾರೆ. ಆ ಭೂಮಿಯನ್ನು ಮತ್ತೆ ಅವರಿಂದ ವಾಪಸ್ ತೆಗೆದುಕೊಂಡು ಅದನ್ನು ರೈತರಿಗೆ ಹಂಚುತ್ತೇವೆಂದು ಆಶ್ವಾಸನೆಯನ್ನು

ಕೊಟ್ಟಿದ್ದಾರೆ. ಆದರೆ ಇಲ್ಲಿ ಇವರು ಕೊಟ್ಟಿರತಕ್ಕಂತಹ ತಿದ್ದುಪಡಿ ೬೪–ಎ ಏನು ಇದೆ ಅದು ಏನು ಹೇಳುತ್ತದೆಂಬುದನ್ನು ನೋಡೋಣ :–

(1) in the heading, after the words "reserved forest" the words "or any land in a protected forest and certain other lands" shall be inserted;

(2) in sub–section (1), for the words "any land in reserved forest" the words "any land in a reserved forest or protected forest, or any other land entrusted to the Forest Department for the purpose of afforestation" shall be substituted.

ಉದಾಹರಣೆಗೆ ಹೇಳುವುದಾದರೆ ಸರಕಾರ ಕೊಟ್ಟ ಅಂಕಿ ಅಂಶದ ಪ್ರಕಾರ ೧೩ ಸಾವಿರ ಎಕರೆ 'ಸಿ' ವರ್ಗದ ಜಮೀನು ೯ ಸಾವಿರ 'ಡಿ' ವರ್ಗದ ಜಮೀನನ್ನು ೧೯೭೮ರನೇ ಇಸವಿಯಲ್ಲಿ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗ ಮಾಡಿಕೊಂಡಿದ್ದಾರೆ. ಒಂದೇ ಒಂದು ತಾಲ್ಲೂಕಿನಲ್ಲಿ ೨೨ ಸಾವಿರ ಎಕರೆ ಭೂಮಿಯನ್ನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಕೊಟ್ಟಿದ್ದಾರೆ. ಹತ್ತು ವರ್ಷಗಳಾದರೂ ಅರಣ್ಯ ಇಲಾಖೆಯವರು ಇಲ್ಲಿ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಜನರು, ಹಿಂದುಳಿದ ವರ್ಗಗಳ ಜನರು ಭೂರಹಿತರು ಅದನ್ನು ಸಾಗುವಳಿ ಮಾಡುತ್ತಿದ್ದಾರೆ. ಈ ತಿದ್ದುಪಡಿಯನ್ನು ನಾವು ಇಲ್ಲಿ ಪಾಸ್ ಮಾಡಿಕೊಟ್ಟರೆ ನಾಳೆ ಆ ಭೂಮಿ ಮೇಲಿರತಕ್ಕಂತಹ ರೈತರನ್ನು ಅರಣ್ಯ ಇಲಾಖೆಯವರು ಒದ್ದು ಓಡಿಸುತ್ತಾರೆ. ಅಲ್ಲಿ ಸಾಗುವಳಿ ಮಾಡತಕ್ಕಂತಹ ರೈತರ ಮೇಲೆ ಈಗಾಗಲೇ ಕೇಸ್ ಅನ್ನು ಹಾಕಿದ್ದಾರೆ. ಸಂಡೂರು ತಾಲ್ಲೂಕಿನ ಕೂಡ್ಲಿಗಿಯಲ್ಲಿ, ಚಿತ್ರದುರ್ಗ, ಹೊಸದುರ್ಗ ಮುಂತಾದ ಕಡೆಗಳಲ್ಲಿ ಇದರ ಬಗ್ಗೆ ಗಲಾಟೆಯಾಗಿದೆ. ಅಷ್ಟೇ ಅಲ್ಲ ರಾಜ್ಯದ ಎಲ್ಲಾ ಕಡೆ ಇದು ಪ್ರಾರಂಭವಾಗಿದೆ.

ಒಂದು ಕಡೆ ಕಂದಾಯ ಇಲಾಖೆಗೆ ಸಂಬಂಧಪಟ್ಟಿರತಕ್ಕಂಥ ಈ ತಿದ್ದುಪಡಿ ಏನು ನಮ್ಮ ಮನೆಯ ಮುಂದೆ ಇದೆ, ಅದು ಪಾಸಾಗಿಲ್ಲ. ಈ ಲ್ಯಾಂಡ್ ರೆವಿನ್ಯೂ ಆ್ಯಕ್ಟ್ ಸೆಕ್ಷನ್ ೯೪ (ಎ) ಏನು ಇದೆ, ಇಲ್ಲಿ ತಂದಿರತಕ್ಕಂದಿದ್ದಕ್ಕೂ ಇದಕ್ಕೂ ಎರಡಕ್ಕೂ ನೇರವಾದಂಥ ಸಂಬಂಧ ಇದೆ. ಹೀಗಿರುವುದರಿಂದ ಒಂದು ವೇಳೆ ಈ ಬಿಲ್ಲನ್ನು ಏನಾದರೂ ಪಾಸ್ ಮಾಡಿಕೊಟ್ಟರೆ ಅರಣ್ಯ ಇಲಾಖೆಯವರು ಎಷ್ಟು ಲಕ್ಷ ಎಕರೆ ಭೂಮಿಯನ್ನು ರೈತರುಗಳಿಂದ ಎವಿಕ್ಟ್ ಮಾಡಿಸುತ್ತಾರೋ ಎನ್ನುವುದು ಗೊತ್ತಿಲ್ಲ. ಬೀದರ್ ಒಂದು ಜಿಲ್ಲೆಯನ್ನು ಮಾತ್ರ ಬಿಟ್ಟರೆ ನಿಮ್ಮ ಧಾರವಾಡ ಜಿಲ್ಲೆ ಸಮೇತ ಸೇರಿ ಒಂದು ಲಕ್ಷ ಎಕರೆಗಿಂತಲೂ ಮಿಗಿಲಾದ ಜಮೀನನ್ನು ಮೀರಿ 'ಸಿ' ಮತ್ತು 'ಡಿ' ವರ್ಗದ ಭೂಮಿಯನ್ನು ರೈತರುಗಳಿಂದ ಎವಿಕ್ಟ್ ಮಾಡಿಸುತ್ತಾರೆ. ೧೯೭೮ರನೇ ಇಸವಿಯಲ್ಲಿ ಕಂದಾಯ ಇಲಾಖೆಯವರು ಒಂದು ಲಕ್ಷ ಎಕರೆಗೂ ಮೀರಿ ಜಮೀನನ್ನು ಅರಣ್ಯ ಇಲಾಖೆಯವರಿಗೆ ಕೊಟ್ಟಿದ್ದಾರೆ. ಕಳೆದ ಸಲ ನನಗೆ ಅಂಕಿಅಂಶಗಳನ್ನು ಕೊಟ್ಟಿದ್ದರು. ನನಗೆ ನೆನಪಿದೆ, ಈಗ ಮತ್ತೇ ರೈತರುಗಳು ಒಂದು ಲಕ್ಷ ಎಕರೆಗೂ ಮೀರಿ ಸಾಗುವಳಿಯನ್ನು ಮಾಡುತ್ತಿದ್ದಾರೆ. ಅದರಲ್ಲಿ ಮುಖ್ಯವಾದವುಗಳು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ನನಗೆ ಗೊತ್ತಿರುವ ಪ್ರಕಾರ ಬೆಳಗಾಂ, ಧಾರವಾಡ, ಶಿವಮೊಗ್ಗ ಜಿಲ್ಲೆಯಲ್ಲಿ 'ಸಿ' ಮತ್ತು 'ಡಿ' ಲ್ಯಾಂಡ್‌ನಲ್ಲಿ ರೈತರುಗಳು ಹಲವಾರು ವರ್ಷಗಳಿಂದ ಅಲ್ಲಿ ಸಾಗುವಳಿಯನ್ನು ಮಾಡುತ್ತಿದ್ದಾರೆ, ಅವರನ್ನು ಒಕ್ಕಲೆಬ್ಬಿಸುವುದಿಲ್ಲ ಎಂದು ಹಿಂದೆ ಕಂದಾಯ ಮಂತ್ರಿಗಳೇ ಆಶ್ವಾಸನೆಯನ್ನು ಕೊಟ್ಟಿದ್ದರು. ಈ ಆಶ್ವಾಸನೆಯನ್ನು ಇದೇ ಮನೆಯಲ್ಲಿ ಕೊಟ್ಟಿದ್ದಾರೆ. ಮತ್ತು ಇದೇ ಮನೆಯಲ್ಲಿ ಅರಣ್ಯ ಇಲಾಖೆಯ ತಿದ್ದುಪಡಿ ಬರುತ್ತಿದೆ. ಯಾವುದೇ ಭೂಮಿಯನ್ನು ನಾವು ಅರಣ್ಯ ಇಲಾಖೆಗೆ ಅಫೋರೆಸ್ಟೇಷನ್ ಪ್ರೋಗ್ರಾಮ್ ಮಾಡುವುದಕ್ಕೆ ಕೊಟ್ಟಿರುವಾಗ ಎನ್‌ಕ್ರೋಚ್ ಮಾಡಿದರೆ ಪೆನಾಲ್ಟಿಯನ್ನು ಹಾಕುತ್ತೇವೆಂದು ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ ಅಂಡ್ ರೀಸನ್ಸ್‌ನಲ್ಲಿ ಹೇಳಿದ್ದಾರೆ. ಅದು ಈ ರೀತಿ ಇದೆ ;

"(ii) to prohibit unauthorised occupation of land in reserved forest and district forest, for any purpose

(iii) to provide penalty for unauthorisedly taking possession of any land in protected forest for the land entrusted to the forest department for the purpose of afforestation, "

ಇದರಲ್ಲಿ ಪ್ರೊಟೆಕ್ಟೆಡ್ ಫಾರೆಸ್ಟ್ land handed over to Forest Department for any purpose ಎಂದರೆ ಇದರ ಅರ್ಥ ಏನು ? ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಯಾವುದೇ ಭಾಗ, ಅಥವಾ ಯಾವುದೇ ಭೂಮಿಯನ್ನು ಕೊಟ್ಟಿದ್ದರೂ ಕೂಡಾ ಆ ಭೂಮಿಯನ್ನು ಎಷ್ಟೇ ವರ್ಷಗಳ ಕಾಲ ರೈತರುಗಳ ಸಾಗುವಳಿಯನ್ನು ಮಾಡಿಕೊಂಡಿದ್ದರೂ ಪೆನಾಲ್ಟಿಯನ್ನು ಇಂಪೋಸ್ ಹಾಕಬಹುದು, ಕೇಸ್ ಹಾಕಬಹುದು ಭೂಮಿಯನ್ನು ಬಿಡಿಸಬಹುದು ಎಂದು ಈ ರೀತಿಯ ಒಂದು ಅರ್ಥವನ್ನು ಈ ಕ್ಲಾಸ್ ಕೊಡುತ್ತದೆ. ಇದು ಚಿಕ್ಕ ತಿದ್ದುಪಡಿ ಎಂದು ಗಣನೆಗೆ ತೆಗೆದುಕೊಳ್ಳುವುದಾದರೆ ಇದು ಸಾವಿರಾರು ರೈತರ ಜೀವನಕ್ಕೆ ತೊಂದರೆಯಾಗುತ್ತದೆ. ಈ ತಿದ್ದುಪಡಿ ಏನು ಇದೆ ಇದನ್ನು ಕಂದಾಯ ಇಲಾಖೆಯ ಜೊತೆಯಲ್ಲಿ ಸಮಾಲೋಚನೆಯನ್ನು ನಡೆಸಿ ಇದು ತೊಂದರೆಯಾಗತಕ್ಕಂಥ ವಿಚಾರವಿರುವುದರಿಂದ ಇದರ ಬಗ್ಗೆ ಕೂಲಂಕಷವಾಗಿ ನೋಡಬೇಕೆಂದು ಹೇಳುತ್ತೇನೆ. ಹಿಂದಿನ ಕಂದಾಯ ಮಂತ್ರಿಗಳು ಈವತ್ತು ಮುಖ್ಯಮಂತ್ರಿಗಳಾಗಿರುವುದರಿಂದ ಮಾನ್ಯ ಸಚಿವರು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿ. ದಯವಿಟ್ಟು ಈ ಮಸೂದೆಯನ್ನು ಪಾಸ್ ಮಾಡುವುದಕ್ಕೆ ಪ್ರೆಸ್ ಮಾಡಬೇಡಿ. ನಾವು ಇದನ್ನು ಪಾಸ್ ಮಾಡಿಯೇ ಮಾಡುತ್ತೇವೆ ಎಂದು ಹೇಳುವುದಾದರೆ ನೀವು ನಿಜವಾಗಿ ಜನವಿರೋಧಿ ಹಣೆಪಟ್ಟಿಯನ್ನು ಕಟ್ಟಿಕೊಳ್ಳ ಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಐ. ಬಿ, ಶಂಕರ್(ಚಿಕ್ಕಮಗಳೂರು).—ಸನ್ಮಾನ್ಯ ಅಧ್ಯಕ್ಷರೇ, ಈಗತಾನೇ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಭೂಪತಿಯವರು ಏನು ಹೇಳಿದ್ದಾರೆ, ಅದನ್ನು ನಾನು ನಿಜವಾಗಿಯೂ ಅನುಮೋದಿಸುತ್ತೇನೆ. ಏಕೆಂದರೆ ಚಿಕ್ಕಮಗಳೂರು ಜಿಲ್ಲೆಯ ಒಂದು ಹೋಬಳಿಯಲ್ಲಿ 'ಸಿ' ಮತ್ತು 'ಡಿ' ವರ್ಗದ ಭೂಮಿ ಏನು ಇದೆ, ಅದನ್ನು ೩೦-೪೦ ವರ್ಷಗಳಿಂದಲೂ ರೈತರುಗಳು ಸಾಗುವಳಿ ಮಾಡಿಕೊಂಡು ಜೀವನವನ್ನು ಸಾಗಿಸಿಕೊಂಡು ಬರುತ್ತಿದ್ದಾರೆ. ಈಗ ಅವರನ್ನು ಬಿಡಿಸುವಂಥ ಒಂದು ಪ್ರಯತ್ನ ನಡೆಯುತ್ತಿದೆ. 'ಸಿ' ಮತ್ತು 'ಡಿ' ವರ್ಗದ ಭೂಮಿಯನ್ನು ಭೂ ರಹಿತರಿಗೆ ಮತ್ತು ಪರಿಶಿಷ್ಟ ವರ್ಗದವರಿಗೆ ಕೊಡಬೇಕು ಎಂಬ ನಿಲುವನ್ನು ಸರ್ಕಾರ ಪ್ರಕಟಿಸಿತ್ತೋ ಅದೇ ರೀತಿಯಲ್ಲಿ ಕೆಲವು ಭಾಗಗಳನ್ನು ಸ್ಥಳಾಂತರ ಮಾಡುವುದಕ್ಕೆ ಅರಣ್ಯ ಇಲಾಖೆಯವರು ಪ್ರಯತ್ನವನ್ನು ಮಾಡುತ್ತಿದ್ದಾರೆ. ಏಕೆಂದರೆ ರೈತರುಗಳ ಪ್ರಶ್ನೆ ಇಲ್ಲಿದೆ ಈ ಕಾನೂನನ್ನು ಜಾರಿಗೆ ತರುವುದಾದರೆ 'ಸಿ' ಮತ್ತು 'ಡಿ' ವರ್ಗದ ಜಮೀನನ್ನು ಹೊರತುಪಡಿಸಿ ಇದನ್ನು ತರುವುದಾದರೆ ತರಬಹುದು. ಅದನ್ನು ಇಟ್ಟುಕೊಂಡು ಮಾಡುವುದಾದರೆ ನಿಜವಾಗಿಯೂ ಬಹಳ ಜನ ಬಡವರು ಪರಿಶಿಷ್ಟ ವರ್ಗದವರಿಗೆ ಮತ್ತು ಭೂ ರಹಿತರಿಗೆ ಅನ್ಯಾಯವಾಗುತ್ತದೆ. ದಯವಿಟ್ಟು ಈ 'ಸಿ' ಮತ್ತು 'ಡಿ' ವರ್ಗದ ಭೂಮಿಯನ್ನು ಬಿಟ್ಟು ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್(ಗದಗ).—ಈಗ ಫಾರೆಸ್ಟ್ ಬಿಲ್ ಸಣ್ಣದು ಆದ್ದರಿಂದ ಇದರ ಬಗ್ಗೆ ನಾನು ಏನು ಮಾತನಾಡಬಾರದು ಎಂದು ಇದ್ದೆ. ಆದರೆ ನನ್ನ ಸ್ನೇಹಿತರಾದ ಖರ್ಗೆಯವರು ಕೆಲವು ಮಾತುಗಳನ್ನು ಎತ್ತಿದರು ಮತ್ತು ಅದೇ ರೀತಿ ಮಾನ್ಯ ಭೂಪತಿಯವರೂ ಸಹಾ ಹೇಳಿದರು. ಅವರು ಬಡವರ ಬಗ್ಗೆ ಕಳಕಳಿಯನ್ನು ತೋರಿಸಿದ್ದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಣೆ ಮಾಡುತ್ತಿದ್ದೇನೆ. ಅವರು ಹೇಳಿದ್ದನ್ನು ಕೇಳಿ ನಾನೂ ಮಾತನಾಡಬೇಕೆಂದು ನಿಂತಿದ್ದೇನೆ. ಬಡವರ ಹೆಸರಿನಲ್ಲಿ ರಾಜ್ಯಕ್ಕೆ ಅನ್ಯಾಯವಾಗಬಾರದು, ಅದನ್ನು ಲಕ್ಷ್ಯದಲ್ಲಿಡಬೇಕು. ಇವತ್ತು ಫಾರೆಸ್ಟ್‌ನಲ್ಲಿ ಏನಾಗಿದೆ ಎಂದರೆ ಕರ್ನಾಟಕ ರಾಜ್ಯ ಒಂದಲ್ಲ ಒಂದು ಕಾಲದಲ್ಲಿ ಫಾರೆಸ್ಟ್ ಬಗ್ಗೆ ಅತ್ಯಂತ ಹೆಸರು ವಾಸಿಯಾದಂಥ ರಾಜ್ಯ. ಉತ್ತರ ಕರ್ನಾಟಕದಲ್ಲಿ ೬೬ ಪರ್ಸೆಂಟ್ ಅರಣ್ಯ, ಮಿನಿಮಮ್ ಇರಬೇಕು ಎಂದು ನಿಯಮ ಇದೆ, ಆದರೆ ಕಡೇ ಪಕ್ಷ ೪೦ ಪರ್ಸೆಂಟ್ ಬೇಡ, ೩೩ ಪರ್ಸೆಂಟ್ ಆದರೂ ಇರಬೇಕು.

ಆದರೆ ನಮ್ಮದು ಎಲ್ಲಿಯವರೆಗೆ ಬಂದಿದೆ ಅಂದರೆ ೧೩ ಪರ್ಸೆಂಟ್ ಫಾರೆಸ್ಟ್‌ಗೆ ಬಂದಿದೆ, ೧೩ ಪರ್ಸೆಂಟ್ ಫಾರೆಸ್ಟ್ ಇದ್ದಾಗ ಅದನ್ನು ಬಿಡಬೇಕು, ಇದನ್ನು ಬಿಡಬೇಕು, ಜನಗಳ ವಿರೋಧ ಆಗುತ್ತದೆ ಎಂದು ಹೇಳಿದರೆ ಇನ್ನು ಕೆಲವು ದಿವಸಗಳ ಮೇಲೆ ಬಂಜರು ಆಗುವ ಪರಿಸ್ಥಿತಿ ಬರುತ್ತದೆ. ಇವೊತ್ತು ನನ್ನ ಅಭಿಪ್ರಾಯದಲ್ಲಿ ಇಷ್ಟೇ ಅಲ್ಲ ಪ್ರತಿಯೊಬ್ಬ ವ್ಯವಸಾಯಗಾರನಿಗೂ ಸಹಿತ ಮೂರನೇ ಒಂದಂಶ ಫಾರೆಸ್ಟ್ ಅನ್ನು ಬೆಳೆಯಲೇ ಬೇಕು ಎಂದು ಕಡ್ಡಾಯವಾದ ನಿಯಮವನ್ನು ತರಬೇಕು. ಇವೊತ್ತು ಈ ದೃಷ್ಟಿಯಿಂದ ವಿಚಾರ ಮಾಡಬೇಕು ಇವೊತ್ತು ಹೊಲ ಯಾರದಾದರೂ ಫಾರೆಸ್ಟ್‌ಗೆ ಹತ್ತಿಕೊಂಡಿದ್ದರೆ ಅದನ್ನು ಮಾತ್ರ ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಕೊಟ್ಟಿದ್ದಾರೆ ಹೊರತು ಯಾವುದೇ ಸಾಗುವಳಿಗೆ ಬರತಕ್ಕ ಭೂಮಿಯನ್ನು ಕೊಟ್ಟಿಲ್ಲ ಎಂಬ ಕಾರಣದಿಂದ ಅವರು ತಂದಂತಹ ಬೇಡಿಕೆಗೆ ನಾನು ಹೃತ್ಪೂರ್ವಕವಾದ ಬೆಂಬಲವನ್ನು ಕೊಡುತ್ತೇನೆ. ಬಡವರಿಗೆ ಅನ್ಯಾಯ ಆಗದಂತೆ ನೋಡಿಕೊಳ್ಳಲಿಕ್ಕೆ ಮಾನ್ಯ ರಾಚಯ್ಯನವರು ಸಮರ್ಥರಾಗಿದ್ದಾರೆ. ಎಲ್ಲಿಯಾದರೂ ಬಡವರಿಗೆ ಅನ್ಯಾಯ ಆಗುವಂತಹ ಪ್ರದೇಶದಲ್ಲಿ ನೀವು ಠರಾವನ್ನು ತರಬಹುದು. ಕೇಂದ್ರ ಸರ್ಕಾರದ ಪರವಾನಗಿಯನ್ನು ತೆಗೆದುಕೊಳ್ಳಬಹುದು, ತಗದುಕೊಂಡು ಅವರಿಗೆ ಹೊಲವನ್ನು ಕೊಡುವುದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ನಿಜವಾಗಿ ಅರಣ್ಯ ಬದಿಗೆ ಹತ್ತಿ ಯಾವುದೇ ಎನ್‌ಕ್ರೋಚ್‌ಮೆಂಟ್ ಮಾಡುತ್ತಿದ್ದೇವೆ ಎಂದರೆ ಅವರು ಬಡವರೇ ಇರಲಿ ಶ್ರೀಮಂತರೇ ಇರಲಿ, ಎಂತಹವರೇ ಇರಲಿ ರಾಷ್ಟ್ರದ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಒಬ್ಬ ವ್ಯಕ್ತಿಗೆ ಅನ್ಯಾಯ ಆದರೂ ಸಹನೆ ಮಾಡಬೇಕೆಂದು ಹೇಳಿ ನಾನು ಇದನ್ನು ಅನುಮೋದನೆ ಮಾಡುತ್ತೇನೆ.

ಶ್ರೀ ಬಿ ಎ. ಜೀವಿಜಯ (ಕುಶಾಲನಗರ).—ಮಾನ್ಯ ಅಧ್ಯಕ್ಷರೇ, ಸರ್ಕಾರವು ಅರಣ್ಯ ಇಲಾಖೆಯ ತಿದ್ದುಪಡಿಯನ್ನು ತಂದಿದ್ದಾರೆ. ಅದರಲ್ಲಿ 'ಸಿ' ಅಂಡ್ 'ಡಿ' ಜಮೀನನ್ನು ವರ್ಗ ಮಾಡುವ ಬಗ್ಗೆ ಕೆಲವು ಮಾನ್ಯ ಸದಸ್ಯರು ಆಕ್ಷೇಪಣೆಗಳನ್ನು ಎತ್ತಿದ್ದಾರೆ. ಈ ಮನೆಯ ಮಾನ್ಯ ಸದಸ್ಯರಾದ ಶ್ರೀ ಬಸವಲಿಂಗಪ್ಪನವರ ಕಾಲದಲ್ಲಿ ೮ ಲಕ್ಷ ಹೆಕ್ಟೇರ್ 'ಸಿ' ಅಂಡ್ 'ಡಿ' ವರ್ಗದ ಜಮೀನನ್ನು ಅರಣ್ಯ ಇಲಾಖೆಗೆ ವರ್ಗ ಮಾಡಿದ್ದಾರೆ ಅದರಲ್ಲಿ ೧೯೭೮ನೇ ಇಸವಿಯಿಂದ ಅರಣ್ಯ ಇಲಾಖೆಯವರು ಸಾಕಷ್ಟು ಜಮೀನನ್ನು ಸರ್ವೆ ಮಾಡಿದ್ದಾರೆ. ೪ ಮತ್ತು ೧೭ನೇ ನೋಟಿಫಿಕೇಷನ್ ಏನು ಆಗಿದೆ ಅದನ್ನು ಮಾತ್ರ ಅರಣ್ಯ ಇಲಾಖೆಗೆ ವರ್ಗ ಮಾಡಲಾಗಿದೆ. ಇನ್ನು ಉಳಿದುದಕ್ಕೆ ಸರ್ವೆ ಆಗುತ್ತಿದೆ. ಸರ್ವೆ ಮಾಡುವ ಸಂದರ್ಭದಲ್ಲಿ ಕೂಡ ಅರಣ್ಯ ಇಲಾಖೆಯವರು ಎಲ್ಲಿ ಅತಿಕ್ರಮಣ ಆಗಿದೆ ಅದನ್ನು ಬಿಟ್ಟು ಸರ್ವೆ ಮಾಡಿದ್ದಾರೆ. ಯಾರು ಸಾಗುವಳಿ ಮಾಡಿದ್ದಾರೆ ಆ ಸಾಗುವಳಿ ಮಾಡಿದ ಜಮೀನನ್ನು ಅರಣ್ಯ ಇಲಾಖೆಯವರು ಅರಣ್ಯ ಇಲಾಖೆಗೆ ಪಡೆದುಕೊಂಡಿರುವುದನ್ನು ಬಿಟ್ಟು ಉಳಿಕ್ಕಿದ್ದನ್ನು ಸರ್ವೆ ಮಾಡಿದ್ದಾರೆ. ಹಿರಿಯ ಸದಸ್ಯರಾದ ಶ್ರೀಮಾನ್ ಕೆ. ಹೆಚ್. ಪಾಟೀಲ್ ರವರು ಹೇಳಿದ ಹಾಗೆ ನಮ್ಮ ರಾಷ್ಟ್ರದ ಅರಣ್ಯ ನೀತಿಯಂತೆ ೩೩ರಷ್ಟು ಅರಣ್ಯ ಇರಲೇಬೇಕು. ಅರಣ್ಯಕರಣಕ್ಕಾಗಿ ಕೋಟ್ಯಾಂತರ ಹಣವನ್ನು ಖರ್ಚು ಮಾಡುತ್ತಿದ್ದೇವೆ ಭವಿಷ್ಯದಲ್ಲಿ ಸಂಪೂರ್ಣ ಬದಲಾವಣೆ ಆಗಿದೆ. ಇಂತಹ ಸಂದರ್ಭದಲ್ಲಿ ಏನು ಮಸೂದೆಯನ್ನು ತಂದಿದ್ದಾರೆ ಇದರಿಂದ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಆಗುವುದಿಲ್ಲ. ಸನ್ಮಾನ್ಯ ಬಂಗಾರಪ್ಪನವರು ಶರಾವತಿ ಮುಳುಗಡೆ ಪ್ರದೇಶದಲ್ಲಿ ಕೂಡ ಆಕ್ಷೇಪಣೆಗಳನ್ನು ಎತ್ತಿದ್ದಾರೆ. ೫ ಸಾವಿರ ಎಕರೆಯನ್ನು ಪುನರ್ ವಸತಿಗಾಗಿ ಕೊಟ್ಟಾಗ ೭ ಸಾವಿರ ಎಕರೆಯನ್ನು ಬಗರ್‌ಹುಕುಂ ಮಾಡಿದ್ದಾರೆ. ಈಗ ಮಾನ್ಯ ಕೆ. ಹೆಚ್. ಶ್ರೀನಿವಾಸ್‌ರವರು ಏನು ಒಂದು ಸಮಸ್ಯೆಯನ್ನು ಈ ಸದನದಲ್ಲಿ ಎತ್ತಿದ್ದರು ಅದಕ್ಕೆ ಸರ್ಕಾರದಿಂದ ಆಶ್ವಾಸನೆಯನ್ನು ಕೊಡಲಾಗಿದೆ ೧೯೭೮ನೇ ಇಸವಿಯ ಪೂರ್ವದಲ್ಲಿ ಏನು ಅತಿಕ್ರಮಣ ಆಗಿದೆ, ಅದು ಅರಣ್ಯ ಇಲಾಖೆಗೆ ಸಂಬಂಧಪಟ್ಟಿದ್ದು ಆಗಿದ್ದರೆ ಅದಕ್ಕೆ ಕೇಂದ್ರದವರು ಅನುಮತಿಯನ್ನು ಕೊಡಬೇಕು. ಆದರೆ ಸರ್ಕಾರಿ ಜಮೀನು ಆಗಿ ರೆವೆನ್ಯೂ ಇಲಾಖೆಗೆ ಸೇರಿದ ಜಮೀನು ಆಗಿದ್ದರೆ ಅದಕ್ಕೆ ದಾಖಲೆಗಳನ್ನು ಹಾಜರು ಪಡಿಸಿದರೆ ಅಂಥದಕ್ಕೆ ಕಮಿಟಿಯನ್ನು ರಚನೆ ಮಾಡಬೇಕು ಎಂದು ಸರ್ಕಾರ ಒಂದು ಕಮಿಟಿಯನ್ನು ರಚನೆ ಮಾಡಿದೆ. ಈಗ ಏನು ಒಂದು ತಿದ್ದುಪಡಿ ತಂದಿದ್ದೇವೆ. ಅದರಿಂದ ಇದಕ್ಕೇನೂ ಬಾಧಕ ಏನೂ ಆಗುವುದಿಲ್ಲ. ಕಮಿಟಿಯನ್ನು ಏರ್ಪಾಡು ಮಾಡಿದ್ದಾರೆ. ಅಂಥದ್ದಕ್ಕೆ ಆಗದೇ ಇದ್ದರೆ ೧೯೭೮ರ ಪೂರ್ವ ದಾಖಲೆಗಳನ್ನು ಹಾಜರು ಮಾತು ಪಡಿಸಿದರೆ ಅದು ಅರಣ್ಯ ಇಲಾಖೆಗೆ ಸೇರಿದ ಜಮೀನು ಇದ್ದರೆ ಅದನ್ನು ಸಕ್ರಮಗೊಳಿಸುವುದಕ್ಕೆ ಬರುತ್ತದೆ. ಅರಣ್ಯವನ್ನು ಅತಿಕ್ರಮಣ ಮಾಡಿದ್ದರೆ ಅದು ಕೇಂದ್ರ ಸರ್ಕಾರದ ಪರ್ಮಿಷನ್ ಇಲ್ಲದೆ ರಾಜ್ಯ ಸರ್ಕಾರಕ್ಕೆ ಸಕ್ರಮಗೊಳಿಸಲು ಹಕ್ಕು ಇಲ್ಲ. ಇದನ್ನು ನ್ಯಾಷನಲ್ ಇಂಟರೆಸ್ಟ್‌ನಿಂದ ನೋಡ

ಬೇಕೇ ಹೊರತು ಅರಣ್ಯವನ್ನು ಅತಿಕ್ರಮಣ ಮಾಡುವುದಕ್ಕೆ ಆಸ್ಪದ ಕೊಡುತ್ತಾ ಹೋದರೆ, ಶೇಕಡ ೩೩ರಷ್ಟು ಅರಣ್ಯೀಕರಣ ರಾಷ್ಟ್ರದಲ್ಲಿ, ರಾಜ್ಯದಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ತಿದ್ದುಪಡಿಯನ್ನು ಏನು ತಂದಿದ್ದಾರೆ ಅದು ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಬರುವುದಿಲ್ಲ, ಪ್ರಾಸ್ಪೆಕ್ಟೀವ್ ಮಾತ್ರ ಬರುತ್ತದೆ. ಆದುದರಿಂದ ಈ ತಿದ್ದುಪಡಿಯನ್ನು ಒಪ್ಪಲೇಬೇಕೆಂದು ಆಗ್ರಹ ಪಡಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಸುಮಾರು ಆರೇಳು ಮುಖ್ಯವಾಗಿರುವಂತಹ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ತಿದ್ದುಪಡಿ ಮಸೂದೆಯನ್ನು ಈ ಸದನದ ಒಪ್ಪಿಗೆಗಾಗಿ ಮಂಡನೆ ಮಾಡಿದ್ದಾರೆ. Statement of objects and reasons ನಲ್ಲಿ ಇದರ ಬಗ್ಗೆ ಹೇಳಿದ್ದಾರೆ. ಮುಖ್ಯವಾಗಿ ಅರಣ್ಯಾಭಿವೃದ್ಧಿ ಸಲುವಾಗಿ ತೆರಿಗೆ ಹಾಕುವ ಬಗ್ಗೆ ಇಲ್ಲಿ ಯಾರೂ ಸಹ ತಕರಾರು ಮಾಡುವುದಿಲ್ಲ. ಇದರಲ್ಲಿರುವಂತಹ ಕೆಲವು ಅಂಶಗಳನ್ನು ನಾವು ಒಪ್ಪಬಹುದು. ಆದರೆ ಮತ್ತೆ ಕೆಲವು ಅಂಶಗಳು ಸರಿಯಿಲ್ಲ ಎಂದು ನನ್ನ ಭಾವನೆ ಇಲ್ಲಿ Sandalwood handicraft articles ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆರ್ಟಿಜಾನ್ಸ್‌ಗೆ ರಿಲೀಫ್ ಕೊಡುವ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ಮೊದಲನೆಯದಾಗಿ "to include sandalwood handicraft articles from the definitions of the "Sandalwood" to give relief to the artisans'. ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಸಭಾಧ್ಯಕ್ಷರಿಗೂ ಗೊತ್ತಿರುವಂತೆ ನಮ್ಮ ಅಖಂಡ ಭಾರತದಲ್ಲಿಯೇ ನಮ್ಮ ಕರ್ನಾಟಕ ರಾಜ್ಯ ಗಂಧದ ಮರದ ಕೆತ್ತನೆಯಲ್ಲಿ ಬಹಳ ಹೆಸರು ಪಡೆದಿದೆ. ಸೊರಬ ಮತ್ತು ಸಾಗರ ತಾಲ್ಲೂಕುಗಳು ಈ ಬಗ್ಗೆ ಒಳ್ಳೆಯ ಹೆಸರನ್ನು ಪಡೆದಿವೆ. ಕಾರವಾರ ಜಿಲ್ಲೆಯ ಕುಮಟಾದಲ್ಲಿ ಸಹ ಈ ಕೆತ್ತನೆ ಕೆಲಸ ಮಾಡುವ ಜನರು ಇದ್ದಾರೆ. ಕಳೆದ ನೂರಾರು ವರ್ಷಗಳಿಂದ ಅಲ್ಲಿನ ಜನರು ಇದನ್ನು ತಮ್ಮ ಮನೆತನದ ಕಸಬನ್ನಾಗಿ ಮಾಡಿಕೊಂಡು ಬಂದಿದ್ದಾರೆ. ನಮ್ಮ ರಾಜ್ಯದಲ್ಲಿ ನಮಗೆ ಸ್ವಾತಂತ್ರ್ಯ ಬರುವುದಕ್ಕೆ ಮೊದಲು ಯಥೇಚ್ಛವಾಗಿ ಗಂಧದ ಮರಗಳು ಸಿಗುತ್ತಿದ್ದವು. ಸ್ವಾತಂತ್ರ್ಯ ಬಂದಮೇಲೂ ಸಹ ಸುಮಾರು ೮–೧೦ ವರ್ಷಗಳವರೆಗೆ ನಮಗೆ ಗಂಧದ ಮರಗಳು ಸಿಗುತ್ತಿದ್ದವು, ಶಿಕಾರಿಪುರ, ಸೊರಬ, ಹಿರೇಕೆರೂರು, ಹಾನಗಲ್ ಆನವಟ್ಟಿ ಈ ಕಡೆಗಳಲ್ಲಿ ನಮಗೆ ವಿಪರೀತ ಗಂಧದ ಮರಗಳು ಸಿಗುತ್ತಿದ್ದವು. ಸಾವಿರಾರು ದಪ್ಪದಪ್ಪ ಗಂಧದ ಮರಗಳು ಇಲ್ಲೆಲ್ಲಾ ಇದ್ದವು. ಆದರೆ ಕಳೆದ ಹತ್ತು ಹದಿನೈದು ವರ್ಷಗಳಿಂದೀಚೆಗೆ ಅವುಗಳೆಲ್ಲಾ ಮಾಯವಾದವು. ಅರಣ್ಯ ಇಲಾಖೆಯವರು ಎಷ್ಟು ಮರಗಳನ್ನು ಕಡಿದರೋ ಅದರ ನೂರರಷ್ಟು ಮರಗಳನ್ನು ಬೇರೆ ಖಾಸಗಿಯವರು ಕದ್ದು ಕಡಿದು ಮಾರಾಟ ಮಾಡಿದ್ದಾರೆ. ನಾವು ಹಿಂದೆ ಈ ಮರಗಳನ್ನು ನೋಡಲು ಕಾಡಿನ ಒಳಭಾಗಕ್ಕೆ ಹೋಗಬೇಕಾಗಿರಲಿಲ್ಲ. ಟಾರ್ ರಸ್ತೆಯ ಎಡ ಮತ್ತು ಬಲ ಬದಿಗಳಲ್ಲಿಯೇ ಇವುಗಳನ್ನು ನೋಡಬಹುದಾಗಿತ್ತು. ಆದರೆ ಅವುಗಳನ್ನು ಹಗಲು ಮತ್ತು ರಾತ್ರಿ ಎನ್ನದೆ ಎಲ್ಲ ಕಾಲದಲ್ಲಿಯೂ ಕಡಿದು ಸಾಗಿಸಿದರು. ಈಗ ಏನಿದ್ದರೂ ಅಲ್ಲಿ ಸಣ್ಣಸಣ್ಣ ಮರಗಳು ಮಾತ್ರ ಉಳಿದಿವೆ. ಈಗ ನೀವು ಸ್ವಲ್ಪ ಬಿಗಿಯಾದ ಕ್ರಮ ತೆಗೆದುಕೊಂಡ ಮೇಲೆ ಸ್ವಲ್ಪ ಮರಗಳು ಉಳಿದುಕೊಂಡಿವೆ. ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ನಾವು ಇಲ್ಲಿ ಅನೇಕ ಸಲ ಹೇಳಿದ್ದೇವೆ. ಈ ಮೊದಲು ನನ್ನ ತಾಲ್ಲೂಕ್‌ನಿಂದ, ಶಿಕಾರಿಪುರ ತಾಲ್ಲೂಕ್‌ನಿಂದ, ಹಾನಗಲ್, ಆನವಟ್ಟಿ ಮುಂತಾದ ಕಡೆಗಳಿಂದ ಕಳ್ಳತನದಲ್ಲಿ ಗಂಧದ ಮರಗಳನ್ನು ಕಡಿದು ಮುಂಬೈಗೆ ಸಾಗಿಸಿದ್ದಾರೆ. ಇದರಲ್ಲಿ ಮುಚ್ಚುಮರೆ ಏನೂ ಇಲ್ಲ. ಅಧಿಕಾರಿಗಳಿಗೆ ಲಂಚ ಕೊಟ್ಟು ಲಾರಿಗಳಲ್ಲಿ ಸಾಗಿಸಿದರೆಂದು ನಾವು ಕೇಳಿದ್ದೇವೆ. ಇದ್ದಂಥ ದೊಡ್ಡದೊಡ್ಡ ಮರಗಳನ್ನು ಕಡಿದು ಸಾಗಿಸಿಬಿಟ್ಟರು. ಆದರೆ ಈಗ ಅಂತಹ ಮರಗಳನ್ನು ಬೆಳೆಸುವುದು ಕಷ್ಟವಿದೆ. ಈ ಮರಗಳನ್ನು ಬೆಳೆಸಲು ಸರ್ಕಾರದವರು ಹೆಚ್ಚಿನ ಉತ್ತೇಜನವನ್ನು ಕೊಡಬೇಕು. ಏಕೆಂದರೆ ದೊಡ್ಡದೊಡ್ಡ ಮರಗಳನ್ನು ಆದರ ಬೇರಿನ ಆಶ್ರಯದಲ್ಲಿ ಬೆಳೆಸಬೇಕಾದರೆ ಬಹಳ ವರ್ಷಗಳು ಬೇಕಾಗುತ್ತದೆ. ಇವತ್ತು ಗಂಧದ ಎಣ್ಣೆ ಕಾರ್ಖಾನೆ, ಮೈಸೂರು, ಶಿವಮೊಗ್ಗ ಹಾಳಾಗಿ ಹೋಯಿತು.

೨.೦೦ ಪಿ. ಎಂ.

(ಶ್ರೀಮತಿ ಶಕುಂತಲಾ ತುಕಾರಾಂ ಚೌಗುಲೆಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು).

ಇವತ್ತು ಮೈಸೂರಿನ ಗಂಧದ ಮರ ಕೇರಳಕ್ಕೆ ಹೋಗುತ್ತಿದೆ. ಪ್ರಪಂಚದಲ್ಲೇ ಖ್ಯಾತಿಯನ್ನು ಪಡೆದಿರತಕ್ಕಂಥಾದ್ದು ಈ ಮೈಸೂರು ಶ್ರೀಗಂಧದ ಮರ, ಇದು ಇವತ್ತು ಯಾವ ಮಟ್ಟಕ್ಕೆ ಬಂದಿದೆಯೆಂದರೆ

ಗಂಧದ ಎಣ್ಣೆಯ ತರಹ ಕೆಮಿಕಲ್ಸ್ ಹಾಕಿ ಮೋಸ ಮಾಡುತ್ತಾ ಇದ್ದಾರಂತೆ, ಅಷ್ಟೊಂದು ಡಿಮ್ಯಾಂಡ್ ಆಗಿದೆ, ಮಾನ್ಯ ರಾಚಯ್ಯನವರೆ ದೊಡ್ಡ ದೊಡ್ಡ ಸಮಾರಂಭಗಳಲ್ಲಿ ಮಂತ್ರಿಗಳಿಗೇ ಶಾಸಕರಿಗೆ ಕೆಲವು ಹೂವಿನ ಹಾರಗಳನ್ನು ಹಾಕುತ್ತಾರೆ. ಅದರಲ್ಲಿರತಕ್ಕಂಥಾದ್ದು ನಿಜವಾಗಲೂ ಗಂಧದ ವಾಸನೆ ಅಲ್ಲವಂತೆ. ಅದಕ್ಕೆ ಹಲವು ಕೆಮಿಕಲ್ಸ್ ಸ್ಪ್ರೇ ಮಾಡುತ್ತಾರೆ. ಅದೇ ಸ್ಮೆಲ್ ಬರುತ್ತದೆ. ಅದು ಒರಿಜಿನಲ್ ಅಲ್ಲ. ಆ ಗಂಧದ ಹಾರವನ್ನು ಇಟ್ಟುಕೊಂಡರೆ ಕೆಲವು ಕಾಲದಲ್ಲಿ ಅದರ ವಾಸನೆ ಹೋಗುತ್ತದೆ. ನಿಜವಾದ ಗಂಧದ ಮರದಲ್ಲಿ ಮಾಡಿತ್ತು ಅಂದರೆ ವರ್ಷಾನುಗಟ್ಟಲೆ ವಾಸನೆ ಹೋಗುವುದಿಲ್ಲ. ಇವತ್ತಿನ ದಿವಸ ಸೊರಬ, ಸಾಗರದಲ್ಲಿ ಗಂಧದ ಮರಗಳು ಸಂಪೂರ್ಣವಾಗಿ ನಾಶವಾಗಿದೆ, ಹೀಗಾದರೆ ಆರ್ಟಿಸಾನ್ಸ್ ಗತಿ ಏನು. ಮರ ಹೋದುದಕ್ಕೆ ಸರ್ಕಾರ ಸಂಪೂರ್ಣವಾಗಿ ಗೊಂದಲಕ್ಕೆ ಬಿದ್ದಿದೆ. ಮರ ಎಲ್ಲಾ ಹೋಯಿತು ಎಲ್ಲಿಂದ ತರಬೇಕು ಎಂದು ಆರ್ಟಿಸನ್ಸ್ ಇದ್ದಾರೆ. ಇವತ್ತು ಗಂಧದ ಮರದ ಸಂತತಿ ನಾಶವಾಗುತ್ತಿದೆ. ಇದರಿಂದ ಜೀವನ ಮಾಡತಕ್ಕಂಥ ನೂರಾರು ಕುಟುಂಬಗಳು ಸಾಗರ ಟೌನ್‌ನಲ್ಲಿವೆ. ಅವರನ್ನು ಗುಡಿಕಾರರು ಎಂದು ಕರೆಯುತ್ತಾರೆ. ಅವರದೇ ಆದಂಥ ಸೊಸೈಟಿ ದೊಡ್ಡ ಪ್ರಮಾಣದಲ್ಲಿ ಸಾಗರದಲ್ಲಿದೆ, ಸರ್ಕಾರದ ಧನಸಹಾಯದಿಂದ ಲಕ್ಷಗಟ್ಟಲೆ ಖರ್ಚು ಮಾಡಿ ಕಟ್ಟಿಸಿದ್ದಾರೆ. ಗಂಧದ ಮರದಲ್ಲಿ ಕೆತ್ತನೆ ಕೆಲಸ ಮಾಡತಕ್ಕವರು ಕುಮಟದಲ್ಲಿ ಹೆಸರು ವಾಸಿಯಾಗಿದ್ದಾರೆ. ಕುಮಟ ಸಾಗರ, ಸೊರಬದಲ್ಲೂ ಇದ್ದಾರೆ. ಇವರು ಎಷ್ಟೊಂದು ವಿಶ್ವವಿಖ್ಯಾತರಾಗಿದ್ದಾರೆಂದರೆ ಪರದೇಶದವರು ಈ ಬಗ್ಗೆ ನಕಾಶೆ ತಯಾರು ಮಾಡಿದ್ದಾರೆ ಬಾಂಬೆ, ಡೆಲ್ಲಿಯಲ್ಲಿ 5 ಸ್ಟಾರ್ ಹೋಟೆಲ್‌ಗಳಲ್ಲಿ ಇವರನ್ನು ಕರೆದುಕೊಂಡು ಹೋಗಿ ಕೆತ್ತನೆ ಯಾವ ರೀತಿ ಮಾಡುತ್ತಾರೆ ಎಂದು ತಿಳಿದುಕೊಳ್ಳುತ್ತಾ ಇದ್ದಾರೆ. ಈ ಕೆತ್ತನೆ ಕೆಲಸ ಮಾಡುತ್ತಿದ್ದ ಮನೆತನಗಳವರು ಮೊದಲು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದರು. ೧೯೬೭ರಲ್ಲಿ ನಾನು ಚುನಾಯಿತನಾಗಿ ಬಂದಾಗ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದರು. ಈಗ ಕೇಳಿದರೆ ಈಗ ನಮ್ಮಿಂದ ಜೀವನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಡಿಪೋನಿಂದ ಸಾಕಷ್ಟು ಪ್ರಮಾಣದಲ್ಲಿ ಮರ ಕೊಡುತ್ತಾ ಇಲ್ಲ, ರೇಟ್ ಜಾಸ್ತಿಯಾಗಿದೆ, ನಿಭಾಯಿಸುವುದಕ್ಕೆ ನಮ್ಮಿಂದ ಆಗುವುದಿಲ್ಲ ಎಂದು ಹೇಳುತ್ತಾರೆ. ಆಮೇಲೆ ಮರ ಏನು ಕದ್ದು ತಂದು ಕೊಡುತ್ತಾರೆ, ಅದನ್ನು ತೆಗೆದುಕೊಂಡು ಇವರು ಕೆತ್ತನೆ ಕೆಲಸ ಮಾಡುತ್ತಾರೆ ಎನ್ನುವ ಆಪಾದನೆ ಕೂಡ ಬಂತು. ಯಾರೇ ಇದ್ದರೂ ಕಾಡಿನಲ್ಲಿ ಮರಕ್ಕೆ ಒಬ್ಬೊಬ್ಬ ಗಾರ್ಡನ್ನು ಹಚ್ಚುವುದಕ್ಕಾಗುವುದಿಲ್ಲ. ಕಾಡು ವಿಶಾಲವಾದಪ್ರದೇಶವಾಗಿರುವುದರಿಂದ ಎಷ್ಟು ಕಾವಲು ಹಾಕಿದರೂ ಕಳ್ಳತನ ಮಾಡುವುದಕ್ಕೆ ಸಾಧ್ಯವಿರುತ್ತದೆ. ಅದು ಗಂಧ ಇರಬಹುದು, ನಾಟ ಇರಬಹುದು, ಅರಣ್ಯಕ್ಕೆ ಸಂಬಂಧಪಟ್ಟ ಯಾವುದೇ ವಸ್ತುವನ್ನು ಕಳ್ಳತನ ಮಾಡುವುದು ಬಹಳ ಸುಲಭ. ಎಷ್ಟು ಕಾವಲು ಹಾಕಿದರೂ ಕಳ್ಳತನ ಮಾಡುವುದು ಸುಲಭ, ಹಿಂದೆ ಹಳ್ಳಿ ಜನ ಅವರೇ ಕಾವಲು ಹಾಕುತ್ತಾ ಇದ್ದರು, ಆಗ ಯಾರೂ ಮುಟ್ಟುತ್ತಾ ಇರಲಿಲ್ಲ. ಹಿಂದೆ ಬಗಿನಿ ಮರಗಳು ಇದ್ದವು, ಅದನ್ನೆಲ್ಲಾ ಕಡಿದು ಕೊರಡು ಮಾಡಿಕೊಂಡಿದ್ದರು.

ಶ್ರೀ ಯು. ಭೂಪತಿ.— ನೀವು ಗಂಧದ ಮರಗಳ ಬಗ್ಗೆ ಮಾತನಾಡುತ್ತಿದ್ದೀರಿ, ಸಂತೋಷ. ನನ್ನ ತಾಲ್ಲೂಕಿನಲ್ಲಿ ಸಂಡೂರು ತಾಲ್ಲೂಕಿನಲ್ಲಿ ಗಂಧ ಜಾಸ್ತಿ ಇದೆ. ಗಂಧ ಕಳ್ಳಸಾಗಾಣಿಕೆ ಮಾಡುವುದನ್ನು ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ ಎಂದು ಮೆಚ್ಯೂರ್ಡ್ ಪ್ಲಾಂಟ್ಸನ್ನು ಅರಣ್ಯ ಇಲಾಖೆಯವರೇ ಕಡಿದು ಮಾರುತ್ತಾ ಇದ್ದಾರೆ. ಇದಕ್ಕೆ ಏನು ಹೇಳುತ್ತೀರಿ?

ಶ್ರೀ ಎಸ್. ಬಂಗಾರಪ್ಪ.— ಒಳ್ಳೆಯ ಕೆಲಸ ಮಾಡುತ್ತಾ ಇದ್ದಾರೆ.

ಶ್ರೀ ಯು. ಭೂಪತಿ.— ಹೀಗಾದರೆ ಕಾಡು ಉಳಿಯುವುದು ಹೇಗೆ? ಇರುವ ಕಾಡನ್ನು ರಕ್ಷಣೆ ಮಾಡಬೇಕಲ್ಲ.

ಶ್ರೀ ಎಸ್. ಬಂಗಾರಪ್ಪ.— ಅದನ್ನು ಕಡಿಯಲೇ ಬೇಕು.

ಶ್ರೀ ಯು. ಭೂಪತಿ.— ಮೆಚ್ಯೂರ್ಡ್ ಪ್ಲಾಂಟ್ ಕಳ್ಳಸಾಗಾಣಿಕೆಯಾಗಿದೆ.

ಶ್ರೀ ಎಸ್. ಬಂಗಾರಪ್ಪ.— ಮೆಚ್ಯೂರ್ಡ್ ಪ್ಲಾಂಟ್ ಇಲ್ಲ. ಸಣ್ಣ ಸಣ್ಣ ಮರಗಳನ್ನು ಮೆಚ್ಯೂರ್ಡ್ ಪ್ಲಾಂಟ್ ಎಂದು ಕಡಿಯುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಬರತಕ್ಕ ವರಮಾನ ಹಾಳಾಗುತ್ತಿದೆ.

ಶ್ರೀ ಬಿ. ರಾಚಯ್ಯ.— ಆರ್ಟ್ ವುಡ್ ಕಡಿಯುತ್ತಾರೆ.

ಶ್ರೀ ಬಾಗಲಕೋಟ್.— ಸಂಡೂರ್‌ನಲ್ಲಿ ಕಡಿದಂಥ ಶ್ರೀಗಂಧ ಮರ ಬಲಿತ ಮರಗಳಾಗಿದ್ದು ಸುಮಾರು ೯೦ ಲಕ್ಷ ರೂಪಾಯಿ ಬೆಲೆ ಬಾಳುವಂತಹುದ್ದು ಇವತ್ತು ಅದು ಅರಣ್ಯ ಇಲಾಖೆಯ ವಶದಲ್ಲಿದೆ,

(ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಎಸ್ ಬಂಗಾರಪ್ಪ.— ನೀವು ಹೇಳಿದ್ದಕ್ಕೂ ತಕರಾರು ಇಲ್ಲ. ಅವರು ಹೇಳಿದ್ದಕ್ಕೂ ತಕರಾರು ಇಲ್ಲ. ಬಲಿತ ಮರಗಳನ್ನು ಕಡಿಯಲೇಬೇಕು. ಅದನ್ನು ಕೆತ್ತನೆ ಕೆಲಸಕ್ಕೆ ಮತ್ತು ಎಣ್ಣೆ ತೆಗೆಯಲಿಕ್ಕೆ ಉಪಯೋಗ ಮಾಡಬೇಕು.
ಆದರೆ, ಬಲಿತ ಮರಗಳ ಹೆಸರಿನಲ್ಲಿ ಸಣ್ಣ ಸಣ್ಣ ಮರಗಳನ್ನು ಕಡಿದು ಮಾರಾಟ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ.

ಶ್ರೀ ಬಿ.ಎ. ಜೀವಿಜಯ.— ಬಲಿಯಂದೇ ಇರತಕ್ಕ ಮರಗಳನ್ನು ಅರಣ್ಯ ಇಲಾಖೆಯವರು ಕಡಿಯುವುದಕ್ಕೆ ಆಗುತ್ತದೆಯೋ?

ಶ್ರೀ ಎಸ್. ಬಂಗಾರಪ್ಪ.— ಅವರು ಹೇಳುವುದರಲ್ಲಿ ಅರ್ಥ ಇದೆ.

ಶ್ರೀ ಯು. ಭೂಪತಿ.— ಮೆಚ್ಯೂರ್ಡ್ ಪ್ಲಾಂಟ್ ಕಡಿದು ಬಡ್ಡೆ ಸಮೇತ ಹಾಗೆ ಬಿಟ್ಟರು. ಆರು ತಿಂಗಳಾದರೂ ಫಾರೆಸ್ಟ್ ರೇಂಜ್ ಆಫೀಸರ್ ಪೋಸ್ಟ್ ಮಾಡಲಿಲ್ಲ. ಹಗಲೊತ್ತಿನಲ್ಲಿಯೇ ದರೋಡೆ ನಡೆಯುವುದಕ್ಕೆ ಶುರು ಆಯಿತು. ಅಲ್ಲಿ ಹೇಳುವವರು ಇಲ್ಲ. ಕೇಳುವವರು ಇಲ್ಲ. ಚೆಕ್ ಪೋಸ್ಟ್‌ಗಳನ್ನು ಮಾಡಿದರೆ, ಕಂಟ್ರೋಲ್ ಮಾಡಬಹುದು.

ಶ್ರೀ ಜಿ. ಎಸ್. ಬಾಗಲಕೋಟ್.— ಸಂಡೂರಿನಲ್ಲಿರುವ ಅರಣ್ಯದಲ್ಲಿ ಗಂಧದ ಮರಗಳಿಗೆ ನಂಬರು ಹಾಕಿ, ಅವುಗಳನ್ನು ಕಡಿಯಲಾಗಿದ್ದು ಅವು ಇವತ್ತು ಅರಣ್ಯ ಇಲಾಖೆಯ ವಶದಲ್ಲಿಯೇ ಇವೆ. ಯಾವುದೇ ರೀತಿಯ ಅವ್ಯವಹಾರಕ್ಕೆ ಅವಕಾಶ ಇಲ್ಲ.

ಶ್ರೀ ಯು. ಭೂಪತಿ.— ತಾವುಗಳು ಮರಗಳಿಗೆ ನಂಬರು ಹಾಕಿದ್ದು ಒಪ್ಪುತ್ತೇನೆ. ಇವತ್ತು ನಂಬರ್ ಹಾಕಿದ ಮರಗಳು ಅಲ್ಲಿ ಉಳಿದಿದ್ದರೆ. ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ. ತಾವು ತೋರಿಸುತ್ತೀರಾ? ಹಗಲೊತ್ತಿನಲ್ಲಿಯೇ ದರೋಡೆ ಆಗುತ್ತದೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸದಸ್ಯರು ಹೇಳಿದ ವಿಚಾರದಲ್ಲಿ ಮಾನ್ಯ ರಾಚಯ್ಯನವರು ವಿಚಾರಣೆ ಮಾಡಿಸಬೇಕು.

ಶ್ರೀ ಬಿ. ರಾಚಯ್ಯ.— ಮಾಡಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮರದ ಬಡ್ಡೆಗಳಿಗೂ ಬಹಳ ಬೆಲೆ ಇದೆ. ಅವುಗಳನ್ನು ಕಳ್ಳತನ ಮಾಡಿ ತೆಗೆದುಕೊಂಡು ಹೋಗುತ್ತಾರೆ. ಈ ಹೆಸರಿನಲ್ಲಿ ಬಲಿಯದೇ ಇರತಕ್ಕ ಮರಗಳನ್ನು ಕಡಿಯುವುದಕ್ಕೂ ಅರಣ್ಯ ಇಲಾಖೆಯವರು ಅವಕಾಶ ಕೊಟ್ಟಿದ್ದಾರೆ. ತನಿಖೆ ಮಾಡಿಸಿ. ಇವತ್ತು ಗುಡಿ ಗಾರರ ಸಂತತಿ ನಾಶವಾಗುತ್ತಿದೆ. ಇವತ್ತು ಯಾರೂ ಈ ಕೆಲಸ ಮಾಡುವುದಕ್ಕಾಗುತ್ತಿಲ್ಲ. ವಿಧಾನ ಸೌಧದ ಬಾಗಿಲು, ನೀವು ಕೂತಿರತಕ್ಕ ಸಿಂಹಾಸನ, ಕ್ಯಾಬಿನೆಟ್ ಹಾಲ್‌ನ ಬಾಗಿಲು ಇವುಗಳನ್ನು ಮಾಡಿದವರು ಸೊರಬ ಮತ್ತು ಸಾಗರದ ಗುಡಿಗಾರರು. ದಾಖಲೆ ತೆಗೆದು ನೋಡಿ ಗೊತ್ತಾಗುತ್ತದೆ. ಒಂದು ಸಂತತಿಯನ್ನು ನಾಶವಾಗುವುದಕ್ಕೆ ಬಿಟ್ಟರೆ, ಮತ್ತೊಂದು ವಿಧಾನ ಸೌಧ ಕಟ್ಟಿದರೆ ಅಂತ ಬಾಗಿಲುಗಳನ್ನು ಮಾಡುವುದಕ್ಕೆ ಯಾರು ಇರುತ್ತಾರೆ. ? ಇವೊತ್ತು ಅವರ ಮಕ್ಕಳು ಏನಾಗಿದ್ದಾರೆ ಅದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಇವೊತ್ತು ಅವರಿಗೆ ಡಿಪೋದಿಂದ ಮರ ಸಪ್ಲೈ ಆಗುತ್ತಿಲ್ಲ, ಅವರಿಗೆ ಕನ್‌ಸೆಷನ್ ರೇಟಿನಲ್ಲಿ ಕೊಡಬೇಕಾಗುತ್ತದೆ, ನಾವು ಆ ವರ್ಗವನ್ನು ಉಳಿಸಿಕೊಳ್ಳಬೇಕಾಗುತ್ತದೆ. ಕಲೆ ಉಳಿಸಿಕೊಳ್ಳುವುದು ಕಷ್ಟ. ಅವರನ್ನು ನಾವು ಉಳಿಸಿಕೊಳ್ಳದೇ ಹೋದರೆ ಕದ್ದು ತಂದು ಮಾರಾಟ ಮಾಡತಕ್ಕವರಿಗೆ ಅನುಕೂಲವಾಗುತ್ತದೆ.

ಶ್ರೀ ಬಿ. ರಾಚಯ್ಯ.—ಹ್ಯಾಂಡಿಕ್ರಾಫ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮುಖಾಂತರ ಗುಡಿಗಾರರಿಗೆ ಸ್ಯಾಂಡಲ್‌ವುಡ್ ಕೊಡುತ್ತಿದ್ದೇವೆ. ನಾವು ಎಷ್ಟು ಕ್ವಾಂಟಿಟಿ ಕೊಡುತ್ತಿದ್ದೇವೆ

ಅದಕ್ಕಿಂತಲೂ ಜಾಸ್ತಿ ಅವರು ಉಪಯೋಗ ಮಾಡುತ್ತಿರುವುದರಿಂದ. ಅವರು ಬೇರೆಯವರ ಕಡೆಯಿ ಪ್ರೈವೇಟ್ ಪಾರ್ಟಿಯವರಿಂದ ತೆಗೆದುಕೊಂಡಿರಬಹುದು. ಅವರಿಗೆ ನಾವು ಎಷ್ಟು ವುಡ್ ಕೊಡುತ್ತೇವೆ ಅಷ್ಟು ವುಡ ನಲ್ಲಿ ವೇಸ್ಟೇಜ್ ಕಳೆದು ಎಷ್ಟು ಮಾರಾಟ ಮಾಡುತ್ತಾರೆ ಅದನ್ನು ಹ್ಯಾಂಡಿಕ್ರಾಫ್ಟ್ ಮಾರಾಟ ಮಾಡುವುದಾದರೆ ಅವರು ಹಿಡಿತಕ್ಕೆ ಸಿಕ್ಕುತ್ತಾರೆ. ಇದು ಇಲ್ಲದೇ ಹೋದರೆ ಕದ್ದು ಮಾರಾಟ ಮಾಡತಕ್ಕವರಿಂದ ತರಿಸಿಕೊಳ್ಳುತ್ತಾರೆ. ಇದರಿಂದ ಅರಣ್ಯದಲ್ಲಿರತಕ್ಕ ಗಂಧದ ಮರಗಳು ಹಾಳಾಗುತ್ತವೆ. ಆದ್ದರಿಂದ, ಈ ಒಂದು ಕನ್‌ಸೆಷನ್ ಕೊಡೋಣ ಎಂದು ತಂದಿದ್ದೇವೆ.

ಶ್ರೀ ಬಿ. ಎ. ಜೀವಿಜಯ.—ಕುಶಲ ಕೈಗಾರಿಕೆ ಮಾಡತಕ್ಕವರಿಗೆ ಮರಗಳನ್ನು ಸಪ್ಲೈ ಮಾಡುತ್ತಿಲ್ಲ ಎನ್ನುವ ಅಂಶವನ್ನು ಮಾನ್ಯ ಬಂಗಾರಪ್ಪನವರು ತಿಳಿಸಿದರು. ಈಗ ಹ್ಯಾಂಡಿಕ್ರಾಫ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಿಂದ ೨೫ ಪರ್‌ಸೆಂಟ್ ಸಬ್ಸಿಡಿ ಕೂಡ ಕೊಡುತ್ತಿದ್ದಾರೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಬಂಗಾರಪ್ಪನವರು ಹೇಳಿದಂಥ ಮೂಲ ಉದ್ದೇಶ ಏನೆಂದರೆ ನಾನು ಅರ್ಥಮಾಡಿಕೊಂಡಿರುವ ಹಾಗೆ ಹೇಳುವುದಾದರೆ, ಗಂಧದ ಗುಡಿ ಮೈಸೂರು ಎಂದು ಇತ್ತು, ಈಗ ಗಂಧದ ಮರ ಕಡಿಯುವ ಮೈಸೂರು ಎನ್ನುವ ಪರಿಸ್ಥಿತಿ ಬಂದಿದೆ, ಅದನ್ನು ತಪ್ಪಿಸಿ ಎಂದು ಹೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅದನ್ನು ತಮ್ಮ ಮಾನ್ಯ ಮಂತ್ರಿಗಳಿಂದಲೇ ಪರಿಶೀಲನೆ ಮಾಡಿಸಲಿಕ್ಕೆ ಹೇಳುತ್ತೇವೆ. ಇವೊತ್ತು ಹ್ಯಾಂಡಿಕ್ರಾಫ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮುಖಾಂತರ ಕೊಡತಕ್ಕದ್ದು ಸಾಕಾಗುವುದಿಲ್ಲ ಎನ್ನುವ ವಿಚಾರ ಇದೆ. ಇನ್ನು ಎರಡನೆಯ ವಿಚಾರ ಅಂದರೆ, ಮಾನ್ಯ ಜೀವಿಜಯ ಅವರು ಸಬ್ಸಿಡಿ ಕೊಡತಕ್ಕ ವಿಚಾರವನ್ನು ಹೇಳಿದರು, ಅದು ನನಗೆ ಗೊತ್ತಿದೆ, ಅದರ ಬಗ್ಗೆ ನಾನು ವಿವರಗಳನ್ನು ಹೇಳಲಿಕ್ಕೆ ಮರೆತಿದ್ದೇನೆ. ಈಗ ಆ ವಿವರಗಳು ಸಿಕ್ಕುತ್ತಿಲ್ಲ, ಅನಂತರ ತಮ್ಮ ಕಡೆ ಕಳುಹಿಸಿಕೊಡುತ್ತೇನೆ. ಏನಾದರೂ ಮಾಡಿ ಈ ಕಲೆಯನ್ನು ಉಳಿಸಿಕೊಳ್ಳತಕ್ಕಂಥ ಕೆಲಸ ಆಗಬೇಕು.

ಶ್ರೀ ಬಿ. ರಾಚಯ್ಯ.—ಹಾಗಾದರೆ ತಮ್ಮ ಊರಿಗೆ ಹೋಗೋಣ ಬರುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ತಾವು ಬರುವುದಾದರೆ ಸಂತೋಷ, ಸ್ವಾಗತ ಮಾಡುತ್ತೇವೆ. ಈಗ ಈ ಗುಡಿಗಾರರ ಪರಿಸ್ಥಿತಿ ಏನಾಗಿದೆ ಬೇರೆ ಕಡೆಗಳಿಗೆ ನೌಕರಿಗೆ ಹೋಗುತ್ತಿದ್ದಾರೆ. ಇವರೆಲ್ಲರೂ ನೌಕರಿಗೆ ಹೋದಮೇಲೆ ಇವರ ಅಪ್ಪ, ಅಮ್ಮ ಸತ್ತುಹೋದಮೇಲೆ ಮರವನ್ನು ತೆಗೆದುಕೊಂಡು ಹೋಗಿ ಒಂದು ಚೆಕ್ಕೆ ಮಾಡಿಕೊಡಿ ಅಂದರೂ ಯಾರೂ ತಮಗೆ ಸಿಕ್ಕುವುದಿಲ್ಲ. ಆದ್ದರಿಂದ, ಈ ವಿಚಾರದಲ್ಲಿ ಬಹಳ ಸೀರಿಯಸ್ ಆಗಿ ಗಮನವನ್ನು ಕೊಡಬೇಕು. ಅದೇ ರೀತಿ ಕಾರವಾರ ಜಿಲ್ಲೆಯ ಕುಮಟಾದಲ್ಲೂ ಸಹ ಗುಡಿಗಾರರು ಇದ್ದಾರೆ, ಅವರ ಬಗ್ಗೆಯೂ ಕೂಡ ಗಮನದಲ್ಲಿಟ್ಟುಕೊಂಡರೆ ಒಳ್ಳೆಯದು. ಇನ್ನು ಎರಡನೆಯದಾಗಿ, ಅನ್‌ಆಥರೈಸ್ಡ್ ಕಲ್ಟಿವೇಷನ್ ಬಗ್ಗೆ ಅನೇಕ ಸದಸ್ಯರು ಹೇಳಿದ್ದಾರೆ. ಹಿಂದೆ ಮಂತ್ರಿಗಳಾಗಿದ್ದಂಥ ಮಾನ್ಯ ಬಾಗಲಕೋಟೆಯವರು ಸಹ ಗ್ರೇಟೆಕ್ಕೆ ಮೊದಲು ಯಾರು ಯಾರು ಸಾಗುವಳಿ ಮಾಡುತ್ತಿದ್ದರು ಅದರ ಬಗ್ಗೆ ಅವರು ಸಚಿವರಾಗಿದ್ದಂಥ ಸಂದರ್ಭದಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಈ ವಿಚಾರದ ಬಗ್ಗೆ ಮಾನ್ಯ ರಾಚಯ್ಯನವರ ಹತ್ತಿರ ದೂರವಾಣಿ ಮುಖಾಂತರ ಮಾತನಾಡುವಾಗಲೂ ಸಹ ಅವರಿಗೆ ಹೇಳಿದ್ದೇನೆ. ಇವೊತ್ತು ಏನಾಗುತ್ತಿದೆ, ಸುಮಾರು ೩೩–೩೪ ಪರ್‌ಸೆಂಟ್ ಅರಣ್ಯ ಉಳಿಸಬೇಕೆಂಬುದು ರಾಷ್ಟ್ರದ ನೀತಿ ಹಾಗೂ ರಾಜ್ಯದ ನೀತಿ ಸಹ ಹೌದು. ಅರಣ್ಯವನ್ನು ಉಳಿಸಿಕೊಳ್ಳಬೇಕೆನ್ನುವ ಬಗ್ಗೆ ಪದೇ ಪದೇ ಪಬ್ಲಿಕ್ ಮೀಟಿಂಗ್‌ನಲ್ಲಿಯೂ ಸಹ ಹೇಳುತ್ತಿರುತ್ತೇವೆ. ರೈತರಿಗೆ ಬೇಕಾದಂಥ ಅನೇಕ ಸಲಕರಣೆಗಳು, ಅನೇಕ ವಸ್ತುಗಳು ಅವರಿಗೆ ಅಲ್ಲಲ್ಲೇ ಸಿಕ್ಕಬೇಕು ಎನ್ನುವ ವಿಚಾರವನ್ನು ಹೇಳುತ್ತಿರುತ್ತೇವೆ. ನಾವೇ ನಮ್ಮ ಕತ್ತನ್ನು ಕತ್ತರಿಸಲಿಕ್ಕೆ ಹೇಗೆ ಬರುತ್ತದೆ, ಬಡವರು ನಮಗೆ ಏನೂ ಇಲ್ಲ ಎಂದು ಕಳೆದ ೨೫–೩೦ ವರ್ಷಗಳಿಂದಲೂ ಸಾಗುವಳಿ ಮಾಡಿದ್ದಾರೆ. ಆದ್ದರಿಂದ ಆ ಜಮೀನನ್ನು ಅವರಿಗೆ ಮಂಜೂರು ಮಾಡುವುದಕ್ಕೆ ಬರುವುದಿಲ್ಲ. ಅದನ್ನು ಮಂಜೂರು ಮಾಡುವಂತಹ ಅಧಿಕಾರ ತಮ್ಮ ಹತ್ತಿರವೂ ಇಲ್ಲ. ಅದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಬೇಕಾಗುತ್ತದೆ. ತಮಗೂ ಕಾನೂನಿನ ತೊಡಕುಗಳು ಇವೆ. ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ಬಡವರು ಸಾಗುವಳಿ ಮಾಡುತ್ತಿದ್ದಾರೆ ಹಾಗೂ ದೊಡ್ಡ ದೊಡ್ಡ ರೈತರೂ ಕೂಡ ಸಾಗುವಳಿ ಮಾಡುತ್ತಿದ್ದಾರೆ ಆದರೆ ಈ ದೊಡ್ಡವರ ಮೇಲೆ ಯಾರೂ

ಕ್ರಮ ತೆಗೆದುಕೊಳ್ಳುವುದಿಲ್ಲ. ಆದರೆ ಬಡವರು ಮತ್ತೊಬ್ಬರು ಯಾರು ಸಾಗುವಳಿ ಮಾಡುತ್ತಿದ್ದಾರೆ, ಆ ಜಮೀನಿನಲ್ಲಿ ನಿಮ್ಮ ಪ್ಲಾಂಟೇಷನ್ ಕಾರ್ಪೊರೇಷನ್ ಮೂಲಕ ಅಥವಾ ಇಲಾಖೆಯ ಮೂಲಕ ನೀಲಗಿರಿ ಗಿಡವನ್ನು ಹಚ್ಚುವುದಕ್ಕೆ ಒಂದು ಸಾರಿ ಹೊರಟರು. ಆಗ ಅದರ ಬಗ್ಗೆ ದೊಡ್ಡ ಗೊಂದಲವೇ ಹಬ್ಬಿತು. ಅರಣ್ಯವನ್ನು ಬೆಳೆಸಬೇಕಾಗುತ್ತದೆ. ನಾವು ಬೇಡ ಅಂತ ಹೇಳುವುದಿಲ್ಲ. ಆದರೆ ಯಾರ್ಯಾರು ದೊಡ್ಡವರು ಅರಣ್ಯ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ, ಅಂತಹವರನ್ನು ಬಿಟ್ಟು, ಬಡವರು ಯಾರ್ಯಾರು ಸಾಗುವಳಿ ಮಾಡುತ್ತಿದ್ದಾರೆ, ಅಂತಹವರ ಜಮೀನಿನಲ್ಲಿ ಗಿಡವನ್ನು ಬೆಳೆಸುವುದಕ್ಕೆ ಹೋದರೆ ಹೇಗೆ ಸಾಧ್ಯ ? ಆ ಬಗ್ಗೆ ಹಿಂದೆಯೂ ಕೂಡ ಇದೇ ಸದನದಲ್ಲಿ ಅನೇಕ ಸಾರಿ ಪ್ರಶ್ನೆ ಬಂದಿದೆ. ತಾವೇ ಸಚಿವರಾಗಿ ಹೇಳಿದ್ದೀರಿ. ಶ್ರೀಮಾನ್ ಬಾಗಲಕೋಟೆಯವರೂ ಕೂಡ ಸಚಿವರಾಗಿ ಹೇಳಿದ್ದಾರೆ. ನಾವು ಸಚಿವರು ಇದ್ದಾಗ ಇಂತಹ ಪ್ರಸಂಗಗಳು ಬಂದಾಗ ಅದನ್ನು ನಿಲ್ಲಿಸಿದ್ದೆವು. ಆ ವಿಚಾರ ಬೇರೆ. ಆದರೆ ಇದರ ಬಗ್ಗೆ ಅಂತಿಮ ನಿರ್ಣಯ ಆಗುವವರೆಗೆ ಅವರನ್ನು ಅಲ್ಲಿಂದ ಎಬ್ಬಿಸುವುದಿಲ್ಲ ಎಂಬ ಒಂದು ನೀತಿ ಪ್ರಶ್ನೆಯನ್ನು ಮಾನ್ಯ ಬಾಗಲ್‌ಕೋಟೆಯವರು ಪ್ರಕಟ ಮಾಡಿದ್ದಾರೆ. ಅವರು ಏನು ಹೇಳಿದರು: ೧೯೭೮ನೇ ಇಸವಿಗಿಂತ ಮುಂಚೆ ಯಾರ್ಯಾರು ಬಡವರು ಅರಣ್ಯ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾರೆ, ಅವರನ್ನು ಅಲ್ಲಿಂದ ಒಕ್ಕಲೆಬ್ಬಿಸುವುದಿಲ್ಲ ಅಂತ. ಆದರೆ ದೊಡ್ಡ ದೊಡ್ಡವರು ಯಾರು ಇದ್ದಾರೆ, ಅವರಿಗೆ ಇದು ಅನ್ವಯವಾಗುವುದಿಲ್ಲ. ಆ ಮಾತು ಇಲ್ಲವೇ ಇಲ್ಲ. ಆದರೆ ಯಾರು ಬಡವರು, ನಿರ್ಗತಿಕರು, ಹರಿಜನ-ಗಿರಿಜನರು ಇದ್ದಾರೆ, ಯಾರು ಹಿಂದುಳಿದವರ್ಗದವರು ಇದ್ದಾರೆ, ಅಥವಾ ಅಲ್ಪಸಂಖ್ಯಾತರು ಇರಬಹುದು, ಬಡವರು ಯಾವ ಜಾತಿಯವರೇ ಆಗಿರಬಹುದು, ಅವರು ಮಾಡಿರಬಹುದು ಅಂತ ಇಟ್ಟುಕೊಳ್ಳೋಣ. ಅವರೂ ಕೂಡ ೧೯೭೮ನೇ ಇಸವಿಗಿಂತ ಮುಂಚಿತವಾಗಿಯೇ ಸಾಗುವಳಿ ಮಾಡುತ್ತಿದ್ದಾರೆ, ಇದರ ಬಗ್ಗೆ ಅಂತಿಮ ತೀರ್ಮಾನ ಆಗುವವರೆಗೆ ಅಲ್ಲಿಂದ ಅವರನ್ನು ಬಿಡಿಸುವುದಿಲ್ಲ ಎಂಬ ಮಾತನ್ನು ತಾವೇ ಹೇಳಿದ್ದೀರಿ. ಅದು ಈ ಮನೆಯ ದಾಖಲೆಯಲ್ಲಿದೆ. ಈ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅದನ್ನು ಒಪ್ಪುತ್ತೀರಾ ? ಬಿಡಿಸುವುದಿಲ್ಲ ಅಂತ. ಈ ಆಕ್ಟ್ ಆದ ಮೇಲೆ......

ಶ್ರೀ ಎಸ್. ಬಂಗಾರಪ್ಪ.—ಬಂದೆ, ಹೀಗೆ ಈ ರೀತಿ ರೈತರಿಗೆ ತೊಂದರೆ ಕೊಡುತ್ತಿದ್ದಾರೆ ಎಂಬುದಾಗಿ ನಿಮ್ಮ ಗಮನಕ್ಕೆ ತಂದಾಗ ಸ್ಟೇಯನ್ನೂ ಕೂಡ ಕೊಟ್ಟಿದ್ದೀರಿ. ಅಂದರೆ ಇದರ ಬಗ್ಗೆ ಮುಂದೆ ಅಂತಿಮ ತೀರ್ಮಾನ ಆಗುವವರೆಗೂ 'further operation of planting is stayed' ಅಂತ ಹೇಳಿದ್ದೀರಿ. ಮೊನ್ನೆ ಮೊನ್ನೆ ಶ್ರೀಮಾನ್ ರಾಚಯ್ಯನವರು ಈ ಖಾತೆಯ ಮಂತ್ರಿಗಳಾದ ಮೇಲೂ ಇಂತಹ ವಿಚಾರಗಳನ್ನು ತಮ್ಮ ಗಮನಕ್ಕೂ ತರಲಾಗಿದೆ. ಆದರೆ ಆ ಬಗ್ಗೆ ತಾವು ಹೇಳಿದಂತಹ ಉದ್ದೇಶ ಬಹಳ ಒಳ್ಳೆಯದು. ಅಂದರೆ ಪ್ರತಿಯೊಂದಕ್ಕೂ ಈ ರೀತಿ ಸ್ಟೇ ಕೊಟ್ಟುಕೊಂಡು ಹೋಗುವುದಾದರೆ, ಪ್ಲಾಂಟೇಷನ್ ಅನ್ನು ಬೆಳೆಸುವುದು ಹೇಗೆ ಎಂಬ ಮಾತನ್ನು ಹೇಳಿದ್ದೀರಿ ಅದು ಸರಿ. ಆದರೆ, ಇದರ ಬಗ್ಗೆ ಅಂತಿಮ ತೀರ್ಮಾನವಾಗುವವರೆಗೆ ಅವರನ್ನು ಅಲ್ಲಿಂದ ಒಕ್ಕಲೆಬ್ಬಿಸುವುದಿಲ್ಲ ಎಂಬ ಮಾತನ್ನು ಹೇಳಿದ್ದಾರೆ. It is an assurance given on the floor of the House. The entire Government will have to stick on to that. ಇದಕ್ಕೆ ಉತ್ತರವನ್ನು ಹೇಳಲೇಬೇಕಾಗುತ್ತದೆ. ಈ ವಿಚಾರವನ್ನೂ ಕೂಡ ತಮ್ಮ ಗಮನಕ್ಕೆ ತಂದ ಮೇಲೆ ಒಂದೆರಡು ಕೇಸುಗಳಲ್ಲಿ ಸ್ಟೇಯನ್ನು ಕೊಟ್ಟಿದ್ದೀರಿ. ಆದರೆ ತಾವು ಅಲ್ಲಿಂದ ವರದಿಯನ್ನು ತರಿಸಿಕೊಳ್ಳುತ್ತೇವೆಂದರೆ, ಅಷ್ಟರೊಳಗೆ ನಿಮ್ಮ ಇಲಾಖೆಯ ಅಧಿಕಾರಿಗಳು ಅಲ್ಲಿಗೆ ಹೋಗಿ ಗುಣಿ ತೋಡಿದು ಗಿಡವನ್ನು ನೆಟ್ಟುಬಿಟ್ಟಿರುತ್ತಾರೆ. ಅಲ್ಲಿಗೆ ಮುಗಿಯಿತು. ಸರ್ಕಾರದ ವಿರುದ್ಧ ಒಬ್ಬ ಬಡವ ಕೆಲಸ ಮಾಡುವುದಕ್ಕಾಗುತ್ತದೆಯೇ? ಇದರ ಬಗ್ಗೆ ಅಂತಿಮ ತೀರ್ಮಾನ ಆಗುವವರೆಗೂ ನೀವು ಅಲ್ಲೇ ಇರಬೇಕು ಎಂಬ ಭರವಸೆಯನ್ನು ಕೊಟ್ಟಿದ್ದೀರಿ. ಅದಕ್ಕೆ ವಿರುದ್ಧವಾಗಿ ನಡೆದು, ನಿಮ್ಮ ಪ್ಲಾಂಟೇಷನ್ ಕಾರ್ಪೊರೇಷನ್ ಮುಖಾಂತರ, ಅಥವಾ ಇಲಾಖೆಯ ಮುಖಾಂತರ ಮಾಡುತ್ತೇವೆಂದರೆ ಅದು ಎಷ್ಟು ಅಭಾಸವಾಗುತ್ತದೆ ? ನಿಜವಾಗಿಯೂ ನಿಮ್ಮ ಅಭಿಪ್ರಾಯ ಬಹಳ ಒಳ್ಳೆಯದು. ಅದನ್ನು ನಾನು ಒಪ್ಪುತ್ತೇನೆ, ಫಾರೆಸ್ಟನ್ನು ಉಳಿಸಬೇಕು. ಸುಮಾರಾಗಿ ನಾನು ಶಾಸಕನಾಗಿ ಬಂದ ಮೇಲೂ, ಬಹಳಷ್ಟು ಅರಣ್ಯ ಕಡಿತಲೆಯಾಯಿತು. ೧೦ ಪರ್ಸೆಂಟ್ ಮಾತ್ರ ಅರಣ್ಯ ಇತ್ತು ಆಗ. ನಮ್ಮ ಸಾಗರ, ಹೊಸನಗರ, ತೀರ್ಥಹಳ್ಳಿ, ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ

ಅದೇ ರೀತಿ ಕಾರವಾರ, ಕೊಡಗು, ಚಿಕ್ಕಮಗಳೂರು ಈ ಜಿಲ್ಲೆಗಳಲ್ಲೆಲ್ಲಾ, ಕಡಿತಲೆ ಮಾಡತಕ್ಕಂತದ್ದರ ಈ ಬಗೆತನ ಕಳೆದ ೧೫ ವರ್ಷಗಳಿಂದ ಪ್ರಾರಂಭವಾಯಿತು. ಈ ಒಂದು ಕಡಿತಲೆಯಿಂದ ಕಾಡು ಪ್ರಾಣಿಗಳೂ ಕ..ದ ಹೋಗಿಬಿಟ್ಟಿದ್ದವು. ಸರಿಯಾದ ಆನೆಯನ್ನು ನೋಡುವುದಕ್ಕಾಗುತ್ತಿರಲಿಲ್ಲ, ಹುಲಿಯನ್ನು ನೋಡುವುದಕ್ಕಾಗುತ್ತಿರಲಿಲ್ಲ, ಚಿರತೆಯನ್ನು ನೋಡುವುದಕ್ಕಾಗುತ್ತಿರಲಿಲ್ಲ, ಜಿಂಕೆಗಳನ್ನು ನೋಡುವುದಕ್ಕಾಗುತ್ತಿರಲಿಲ್ಲ. ಆದರೆ ಇವತ್ತು ಜಿಂಕೆಗಳ ಹಿಂಡು ಹಿಂಡೇ ಹುಟ್ಟಿ ಬರುತ್ತಿದೆ. ಅವುಗಳಿಗೆ ಮರ-ಗಿಡಗಳ ರಕ್ಷಣೆ ಬೇಕು. ಹುಲಿ ಕೂಡ ಕಾಡಿನಲ್ಲಿ ಹಸು ಅಥವಾ ಎಮ್ಮೆಯನ್ನು ಕೊಂದರೆ ಅದು ಒಮ್ಮೆಲೇ ತಿನ್ನುವುದಿಲ್ಲ ಸ್ವಲ್ಪ ತಿಂದು ಬಿಟ್ಟುಬಿಡುತ್ತದೆ. ಮಾರನೇ ದಿವಸ ಅದನ್ನೇ ಬಂದು ತಿನ್ನುತ್ತದೆ. ಜನರು ಏನು ಮಾಡುತ್ತಾರೆಂದರೆ, ಆ ಸತ್ತ ಹಸು ಅಥವಾ ಎಮ್ಮೆಯ ಮೇಲೆ ಪಾಲಿಡಾಲ್‌ನ್ನು ಹಾಕಿ ಹುಲಿಯನ್ನು ಸಾಯಿಸುತ್ತಿದ್ದರು ಕಾರಣ ಹುಲಿ ಗ್ಯಾರಂಟಿಯಾಗಿ ಬಂದೇ ಬರುತ್ತದೆಂದು ಅವರಿಗೆ ಗೊತ್ತಿರುತ್ತದೆ. ಉದಾಹರಣೆಗೆ ಹೇಳುವುದಾದರೆ, ಹೈಕ್ಲಾಸ್ ತಿಂಡಿ ಎಲ್ಲಿ ಸಿಕ್ಕುತ್ತದೆಯೋ ಅಲ್ಲಿಗೆ ನಾವು ಯಾವ ರೀತಿ ಹುಡುಕಿಕೊಂಡು ಹೋಗುತ್ತೇವೆಯೋ ಅದೇ ರೀತಿ ಎಮ್ಮೆ, ಎತ್ತು ಸತ್ತು ಬಿದ್ದಿದ್ದರೆ ಅಲ್ಲಿಗೆ ಹುಡುಕಿಕೊಂಡು ಹೋಗುವುದು ಹುಲಿಯ ಸ್ವಭಾವ. ಅಂಥ ಸಂದರ್ಭಗಳನ್ನು ಜನರು ಉಪಯೋಗಿಸಿಕೊಂಡು ಅದಕ್ಕೆ ಪಾಲಿಡಾಲ್ ಇವೇ ಮುಂತಾದ ವಿಷಗಳನ್ನು ಸಿಂಪಡಿಸಿ ಬಂದುಬಿಡುತ್ತಾರೆ. ಒಂದೇ ಬಾರಿಗೆ ೫-೬ ಹುಲಿಗಳು ಸತ್ತುಬಿದ್ದಿದ್ದ ವಿಚಾರ ತಿಳಿದಿರುತ್ತದೆ. ಅಸ್ಸಾಂನಲ್ಲಿ ಬ್ರಹ್ಮಪುತ್ರಾನದಿಯ ಪ್ರವಾಹದಿಂದಾಗಿ ಬಹಳಷ್ಟು ಕಾಡು ಪ್ರಾಣಿಗಳು ಸತ್ತು ಹೋದವು. ಕಾಡು ಕೋಣಗಳು, ಜಿಂಕೆಗಳು ಎಲ್ಲಾ ಹಿಂಡುಹಿಂಡಾಗಿ ಸತ್ತುಹೋದವು. ಎಷ್ಟೇ ಕಷ್ಟಪಟ್ಟರೂ ಅವುಗಳನ್ನು ಉಳಿಸುವುದಕ್ಕೆ ಸಾಧ್ಯವಾಗಲೇ ಇಲ್ಲ. ಏತಕ್ಕೆಂದರೆ ಅಸ್ಸಾಂ ಕಾಡು ಪ್ರದೇಶ ಅರ್ಧ ದಿಬ್ಬದಲ್ಲಿದ್ದರೆ ಎರಡನೆ ನಾಲ್ಕು ಭಾಗ ತಗ್ಗು ಪ್ರದೇಶದಲ್ಲಿದ್ದುದರಿಂದ ಈ ರೀತಿಯಾದ ಒಂದು ಹಾನಿಗೆ ಒಳಗಾಯಿತು. ಆದ್ದರಿಂದ ಈ ದೇಶದ ಪ್ರಧಾನ ಮಂತ್ರಿಗಳು ಅಲ್ಲಿ ಹೋಗಿ ನೋಡಿದಾಗ, ಎಷ್ಟು ಕೋಟಿ ರೂಪಾಯಿಗಳಾದರೂ ಕೊಡುತ್ತೇವೆ, ಈ ಜಾಗವನ್ನು ತೆಗೆದುಕೊಂಡು ವರ್ಲ್ಡ್ ಇಂಟರ್‌ನ್ಯಾಷನಲ್ ವೈಲ್ಡ್ ಲೈಫ್ ಮಾಡುವುದಾಗಿ ಹೇಳಿರುತ್ತಾರೆ, ಈ ರೀತಿ ಕಾಡಿನ ಅವಶ್ಯಕತೆ ಬಹಳವಾಗಿ ಇರುತ್ತದೆ. ಮಳೆ ಬರುವುದು ದೊಡ್ಡ ವಿಚಾರ. ನಿಜವಾಗಿಯೂ ಹೇಳುವುದಾದರೆ, ಈ ವರ್ಷ ಮಳೆ ಬಹಳವಾಗಿ ಬಂದಿದೆ. ಕಾಡಿನಿಂದ ಯಥೇಚ್ಛವಾಗಿ ಮಳೆ ಬರತಕ್ಕಂಥ ಪ್ರಮಾಣ ಏನು ಇದೆ ಇದು ಬೆಳೆಯ ಮೇಲೆ ತಿರುಗಿದೆ ಎನ್ನುವ ಒಂದು ಉದಾಹರಣೆ ಕೊಟ್ಟರೂ ಈ ದೃಷ್ಟಿಯಿಂದ ನಾನಾದರೂ ಹೇಳುವುದಿಷ್ಟೆ. ಕಾಡನ್ನು ಕಳೆದುಕೊಳ್ಳುವುದಕ್ಕೆ ನಮಗೆ ಇಷ್ಟವಿಲ್ಲ. ಮಳೆಯನ್ನೇ ಬಹಳವಾಗಿ ಅವಲಂಬಿಸಿಕೊಂಡಿದ್ದೇವೆ. ಆದರಿಂದಲೇ ಅಗ್ರಿಕಲ್ಚರ್, ಪವರ್ ಜನರೇಟರ್ ಅದರ ಮೇಲೆ ಅವಲಂಬಿತವಾಗಿದೆ. ಸಂಪೂರ್ಣವಾಗಿ ಫಾರೆಸ್ಟ್ ಮೇಲೆಯೇ ನಂಬಿಕೊಂಡಿರುವ ವಿಚಾರ. ಈ ವಿಚಾರದಲ್ಲಿ ಮಾನ್ಯ ಅಧ್ಯಕ್ಷರೇ, ಎಷ್ಟು ವಿಚಾರ ಹೇಳಿದರೂ ಅಷ್ಟು ವಿಚಾರವಿರುತ್ತದೆ. Everything is depending upon our Forests. ಎಲ್ಲಾ ಫಾರೆಸ್ಟ್ ಮೇಲೆ ನಿಂತಿದೆ. ಎಲ್ಲಾ ಕೈಗಾರಿಕೆಗಳು, ವ್ಯವಸಾಯ, ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಜನರಿಗೆ ಉದ್ಯೋಗವನ್ನು ಕೊಡತಕ್ಕಂಥದ್ದು ಇದೇ ಆಗಿರುತ್ತದೆ. ಉದ್ಯೋಗವನ್ನು ಕೊಡತಕ್ಕಂಥ ವಿದ್ಯುಚ್ಛಕ್ತಿ ಇಲ್ಲದೆ ಏನು ಕೆಲಸವನ್ನು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಫಾರೆಸ್ಟನ್ನು ಬೆಳೆಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಕೆ. ಎಚ್. ಬೀಳಗಿ.—ಮಾನ್ಯ ಸದಸ್ಯರಾದ ಬಂಗಾರಪ್ಪನವರು ಹೇಳಿದಹಾಗೆ ನಮ್ಮ ಕ್ಷೇತ್ರದಲ್ಲಿ ಬೇಕಾದಷ್ಟು ಕಾಡನ್ನು ಬೆಳೆಯಲು ಪ್ರಾರಂಭ ಮಾಡಿದ್ದಾರೆ. ಸರ್ಕಾರದವರು ಎಲ್ಲಾ ಸವಲತ್ತುಗಳನ್ನು ಕೊಟ್ಟಿದ್ದಾರೆ. ಮತ್ತೆ ಕಾಡನ್ನು ಬೆಳೆದವರಿಗೆ ಮೈನ್‌ಟೈನ್ ಮಾಡುವುದಕ್ಕೆ ಪ್ರಾವಿಸೋ ಮಾಡುತ್ತೇವೆಂದು ಹೇಳುತ್ತಾರೆ ಆದರೆ ಈ ಅಧಿಕಾರವನ್ನು ಕೊಟ್ಟರೆ ಬಹಳ ಕಷ್ಟವಾಗುತ್ತದೆ. Any land entrusted to the Government by order, awnership is transferred to the Forest Department.

SRI MALLIKARJUNA M. KHARGE.—But actual possession has not been given.

SRI K. S BEELAGI.—Proviso should be for any land which has been unauthorisedly cultivated by the poor people, SC/ST, is not

included in auy other land entrusted. Those cultivators who have been cultivating, they will be sent. Otherwise, it will be very difficult.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ ತುಂಬ ಎಚ್ಚರಿಕೆಯಿಂದ ಕೆಲಸ ಮಾಡುತ್ತಿದ್ದರು. ಈ ರಾಜ್ಯದಲ್ಲಿ ೫ ಕೋಟಿ ಕುಟುಂಬಗಳಲ್ಲಿ ಶೇಕಡ ೨೦ ರಷ್ಟು ಭಾಗ ಪರಿಶಿಷ್ಟ ಜಾತಿ ಮತ್ತು ಪಂಗಡಗಳವರು ಕಳೆದ ೧೫–೨೦ ವರ್ಷಗಳಿಂದ ಅನಧಿಕೃತವಾಗಿ ಆಥರೈಸ್ಡ್ ಆಗಿ ಫಾರೆಸ್ಟ್ ಕಲ್ಟಿವೇಷನ್ ಮಾಡುತ್ತಿದ್ದಾರೆ. ಅವರೆಲ್ಲರೂ ಇವತ್ತಿನ ದಿವಸ ಬೀದಿ ಪಾಲಾಗುತ್ತಾರೆ. ಮಾನ್ಯ ಸದಸ್ಯರು ಎಚ್ಚರಿಕೆಯಿಂದ ಅನುಭವದ ಮಾತನ್ನು ಹೇಳುವಾಗ ತಪ್ಪು ತಲೆಯಮೇಲೆ ತಾವು ಕಲ್ಲನ್ನು ಹಾಕಿಕೊಳ್ಳುವುದಕ್ಕೆ ಹೋಗುತ್ತಿದ್ದಾರೆ ಎನ್ನುವ ಎಚ್ಚರಿಕೆಯನ್ನು ಕೊಡಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ,— ಸಭಾಧ್ಯಕ್ಷರೇ, ನಾನು ಸ್ವಲ್ಪ ಜನರಲ್ ಆಗಿ ಹೇಳುತ್ತಿದ್ದೆ. ಈ ಎಲ್ಲಾ ಎಂಟ್ರಿಗಳು ಪ್ರತಿಯೊಂದಕ್ಕೂ ಇಂಟರ್‌ಲಿಂಕ್ ಆಗಿವೆ. ಚರ್ಚೆ ಮಾಡುವುದು. ಆಮೇಲೆ ತೆಗೆದು ಕೊಳ್ಳುವುದು ಈ ಪ್ರಶ್ನೆ ಬರುವ ಹಾಗೇ ಇಲ್ಲ ಈ ಫಾರೆಸ್ಟ್ ವಿಚಾರದಲ್ಲಿ. ಮಲೆನಾಡಿನಲ್ಲಿ ಫಾರೆಸ್ಟ್ ಏರಿಯ ಬಹಳ ಪ್ರಮುಖವಾದುದು. ಅದು ರಾಜ್ಯದ ಮತ್ತು ರಾಷ್ಟ್ರದ ಆಸ್ತಿಯೂ ಹೌದು, ಈ ಸಂದರ್ಭದಲ್ಲಿ ಹೇಳುತ್ತೇನೆ, ಮಾನ್ಯ ಸಚಿವರು ಹೇಳತಕ್ಕ ವಿಚಾರದಲ್ಲಿ ಅರ್ಥ ಇದೆ. ಒಂದೇ ಒಂದು ಲೀಗಲ್ ವಿಚಾರ ಏನು ಹೇಳಿದರು ಅದಕ್ಕೆ ಉತ್ತರಿಸುತ್ತಿದ್ದೆ. ೧೯೩೩ರಲ್ಲಿ ಅಥವಾ ೧೯೩೦ರಲ್ಲಿ ಒಂದು ಗೆಜೆಟ್ ನೋಟಿಫಿಕೇಷನ್ ಮಾಡಿದ್ದಾರೆ. ಗೆಜೆಟ್ ನೋಟಿಫಿಕೇಷನ್ ಮಾಡಿ ಕೆಲವು ಲ್ಯಾಂಡ್‌ಗಳು ಅವರಿಗೆ ಟ್ರಾನ್ಸ್‌ಫರ್ ಆಗಿವೆ ಎಂದು ಅದರಲ್ಲಿ ಹೇಳಿದ್ದಾರೆ. ೧೯೭೦ರಲ್ಲಿ ಅದಕ್ಕೆ ತಾಲ್ಲೂಕು ಮಟ್ಟದಲ್ಲಿ ಒಂದು ಕಮಿಟಿ ಮಾಡಿ ವರದಿಯನ್ನು ತೆಗೆದುಕೊಂಡು ಫಾರೆಸ್ಟ್‌ನಿಂದ ರೆವಿನ್ಯೂಗೆ ಮತ್ತು ರೆವಿನ್ಯೂಯಿಂದ ಫಾರೆಸ್ಟಿಗೆ ಟ್ರಾನ್ಸ್‌ಫರ್ ಮಾಡಬೇಕೆಂದು ಮಾಡಿದರು ಅಂತ ಕಾಣುತ್ತದೆ, ಆ ಸಂದರ್ಭದಲ್ಲಿ ಒಂದು ಕಮಿಟಿ ಮಾಡಿದ್ದರು. ಮಾಡಿದಾಗ ಏನಾಗಿದೆ ಎಂದರೆ ರೆಕಾರ್ಡ್ ಪ್ರಕಾರ ರೆವಿನ್ಯೂನಲ್ಲಿರತಕ್ಕ ನಂಬರ್‌ಗಳು ಫಾರೆಸ್ಟ್ ಇಲಾಖೆಗೆ ಹೋಗಿವೆ ಎಂಬ ಭಾವನೆ ಇದ್ದರೂ ರೆವಿನ್ಯೂನಲ್ಲಿ ಅವು ಹಾಗೇ ಉಳಿದಿವೆ. ಸರ್ವೇ ಸಾಮಾನ್ಯವಾಗಿ ಎಲ್ಲಾ ಜಿಲ್ಲೆಗಳಲ್ಲೂ ಹೀಗೆ ಆಗಿದೆ. ಫಾರೆಸ್ಟ್ ಇಲಾಖೆಗೆ ಹೋಗಲಿಲ್ಲ ಎಂಟ್ರಿ ಆಗಲಿಲ್ಲ, ರೆವಿನ್ಯೂ ಇಲಾಖೆಯ ದಾಖಲೆ ಫಾರೆಸ್ಟ್ ಇಲಾಖೆಯ ದಾಖಲೆಗೆ ಬರಲಿಲ್ಲ. ಹಾಗೇ ಉಳಿಯಿತು. ಕಾಂಗ್ರೆಸ್ ಸರ್ಕಾರ ಇದ್ದಾಗ ಭೂಮಿಯನ್ನು ಹಂಚುವುದಕ್ಕೆ ಪ್ರಾರಂಭ ಮಾಡಿದರು. ತಾಲ್ಲೂಕು ಮಟ್ಟದಲ್ಲಿ ಕಮಿಟೀಸ್ ಮಾಡಿದಾಗ ಅವೈಲಬಿಲಿಟಿ ಲಿಸ್ಟ್ ಎಂದು ಮಾಡಿ ಬಡವರಿಗೆ ಹಂಚಿದ್ದಾರೆ. ಹಂಚುವಾಗ from Revenue to Forest transfer ಮಾಡಿಯೇ ಬಿಟ್ಟರು. ನಾವು ಕೂಡ ಸೇರಿ ಮಂಜೂರ್ಮಾಡಿ ಪಟ್ಟಾ ಕೊಟ್ಟೆವು. ನನ್ನ ತಾಲ್ಲೂಕಿನಲ್ಲೂ ನಡೆದಿದೆ ಮತ್ತು ಎಲ್ಲಾ ಕಡೆಯೂ ನಡೆದಿದೆ. ಪಟ್ಟಾ ಕೊಟ್ಟ ಮೇಲೆ ಹಕ್ಕು ಅವರಿಗೆ ಹೋಯಿತು. Those lands, according to Forest Department, were transferred from Revenue to Forest and they were also listed under availability list. In the beginning Forest Department were not the members, ಆಗ ಇರಲಿಲ್ಲ, I do not think they were the members of the Committee, to represent their cases before the Committee. Later on, they have added a representative of Forest Department to the Committee ಲ್ಯಾಂಡ್ ಅಡ್ವೈಸರಿ ಕಮಿಟಿ, ಗ್ರಾಂಟ್ ಕಮಿಟಿ ಎಂದು ಹೆಸರು. ಅದಕ್ಕೆ ಸೇರಿಸಿದರು. ಈ ಒಂದು ತೊಂದರೆ ರೆವಿನ್ಯೂಯಿಂದ ಫಾರೆಸ್ಟಿಗೆ, ಫಾರೆಸ್ಟಿನಿಂದ ರೆವಿನ್ಯೂಗೆ ಟ್ರಾನ್ಸ್‌ಫರ್ ಮಾಡುವ ಸಂದರ್ಭದಲ್ಲಿ ಉಂಟಾಯಿತು. ಮೊದಲು ಇದು ಇರಲಿಲ್ಲ. ಯಾವ ಗ್ರಾಮ ಬಂತು. ಯಾವ ತಾಲ್ಲೂಕು ಹೋಯಿತು ಎಂದು ಫಾರೆಸ್ಟ್ ಇಲಾಖೆಯವರು ನಂಬರ್ ಹಿಡಿದುಕೊಂಡು ಕೂರುತ್ತಾರೆ. ಅದನ್ನು ಮಂಜೂರ್ಮಾಡುವುದಕ್ಕೆ ಬರುವುದಿಲ್ಲ, ಫಾರೆಸ್ಟ್ ಇಲಾಖೆಗೆ ಸೇರಿದ್ದು ಇಲ್ಲಿದೆ ಎಂದು ತೋರಿಸುತ್ತಾರೆ. ರೆವಿನ್ಯೂ ಇಲಾಖೆಯ ಮಾಹಿತಿ ಪ್ರಕಾರ ಪೂರ್ತಿ ಹಾಗೇ ಉಳಿದಿದೆ. There fore according to the Gazette Notification, what does it mean? Once it is issued, the ownership of that particular land is no doubt

from Revenue to Forest or Forest to Revenue Department, unless the actual possession is handed over to the Department, ಕಾನೂನು ಪ್ರಕಾರ ಅದು ಮುಕ್ತಾಯವಾಗುವುದಿಲ್ಲ. You know the consequences of it.

ಶ್ರೀ ಬಿ. ರಾಚಯ್ಯ.—ಫಾರೆಸ್ಟ್ ಆಫೀಸರನ್ನು ಕೇಳಿ ಅಸಿಸ್ಟೆಂಟ್ ಕಮೀಷನರ್ ಮಾಡಿರುತ್ತಾರೆ. ಯಾವ ಯಾವ ಸರ್ವೆ ನಂಬರ್ ಅನ್ ಅಥರೈಸ್ಡ್ ಕಲ್ಟಿವೇಷನ್‌ನಲ್ಲಿದೆ ಯಾವು ಯಾವುದನ್ನು ಟ್ರಾನ್ಸ್‌ಫರ್ ಮಾಡಬೇಕಾಗಿದೆ ಎಂಬುದನ್ನು ವಿಚಾರಣೆ ಮಾಡಿ ಅದನ್ನು ಕೂಡ ರೆಕಾರ್ಡ್ ಮಾಡಿಕೊಂಡು ಯಾರು ಅನ್ ಅಥರೈಸ್ಡ್ ಕಲ್ಟಿವೇಷನ್ ಮಾಡುತ್ತಿದ್ದಾರೆ. ಅವರ ಹೆಸರನ್ನು ಕೂಡ ದಾಖಲು ಮಾಡಿಕೊಂಡು ಸರ್ಕಾರಕ್ಕೆ ನೋಟಿಫಿಕೇಷನ್ನಿಗೆ ಕಳುಹಿಸುತ್ತಾರೆ. ಆ ಸಂದರ್ಭದಲ್ಲಿ ಕೆಲವು ನನಗೆ ಬಂದಿದೆ. ಅದಕ್ಕಿಂತ ಮುಂಚಿತವಾಗಿ ಬಾರದೆ ಇರುವುವು ಇವೆ. ಅದಕ್ಕೋಸ್ಕರ ೮ ಸಾವಿರ ಹೆಕ್ಟೇರ್‌ನಲ್ಲಿ ಎರಡೂವರೆ ಲಕ್ಷ ಹೆಕ್ಟೇರ್‌ನಷ್ಟು ಭೂಮಿ ನೋಟಿಫೈ ಆಗಿದೆ. ಉಳಿದದ್ದು ಆಗಿಲ್ಲ. ನೋಟಿಫೈ ಆಗತಕ್ಕ ಸಂದರ್ಭದಲ್ಲಿ ಯಾರ್‍ಯಾರು ೧೯೭೮ರಿಂದ ಆಚೆಗೆ ಅನ್ ಅಥರೈಸ್ಡ್ ಕಲ್ಟಿವೇಷನ್ (ಒತ್ತುವರಿ) ಮಾಡಿದ್ದಾರೆ ಅದನ್ನು ಬಿಟ್ಟು ಉಳಿದದ್ದನ್ನು ಮಾಡಬೇಕೆಂದು ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇವೆ.

೨-೩೦ ಪಿ. ಎಂ.

ಮಾನ್ಯ ಸಭಾಧ್ಯಕ್ಷರೇ ಈಗ ನಾನು ಈ ವಿಚಾರಕ್ಕೆ ವಿವರವಾಗಿ ಹೋಗುವುದಿಲ್ಲ. ಏಕೆಂದರೆ ಇದೊಂದು ಬಹಳ ದೊಡ್ಡದಾದ ಕಾಂಪ್ಲಿಕೇಟೆಡ್ ವಿಚಾರ Most of these lands have been transferred from Revenue to Forest rather than from Forest to Revenue Department. ತಮಗೆ ಗೊತ್ತಿರುವಂತೆ ರೆವಿನ್ಯೂ ಇಲಾಖೆಯಿಂದ ಅರಣ್ಯ ಇಲಾಖೆಗೆ ಬಹಳಷ್ಟು ಜಮೀನು ಹೋಗಿದೆ. ತಾವು ಹೇಳಿದಂತೆ ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರ್ ಯಾರಿರುತ್ತಾನೆ ಅವನು ಸರಿಯಾಗಿ ಕಂಳಿತುಕೊಂಡು ಇದಕ್ಕೆ ಒಂದು ಅಂತಿಮ ರೂಪವನ್ನು ಕೊಡದೇ ಹೋದರೆ ಮುಂದೆ ಬಹಳ ಕಷ್ಟವಾಗುತ್ತದೆ. ಈ ಸಮಸ್ಯೆ ಇದುವರೆಗೂ ಬಗೆಹರಿದಿಲ್ಲ, ಹಾಗೆಯೇ ಉಳಿದಿದೆ. ಜನರು ಮೊದಲಿನಿಂದಲೂ ಸಾಗುವಳಿಯನ್ನು ಮಾಡುತ್ತಿದ್ದರು. Majority of these lands in our Malnad area list are transferred. ಇದು ಹಾಗೆಯೇ ಇದೆ. ಎಂ.ಎಲ್.ಎ. ಇರುತ್ತಾರೆ, ಮಂತ್ರಿಗಳು ಇರುತ್ತಾರೆ. ಅವರ ಹತ್ತಿರ ಆ ಜನ ಬಂದು ಸ್ವಾಮಿ ನಾವು ಈ ಜಮೀನಿನಲ್ಲಿ ಪ್ಲಾಂಟೇಷನ್ ಮಾಡುತ್ತೇವೆಂದು ಹೇಳುತ್ತಾರೆ. ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಹೇಳಿದಂತೆ ಇದು ಬಹಳ ಕಾಂಪ್ಲಿಕೇಟೆಡ್ ಆಗಿದೆ. ಮುಂದೆ ಇದರಿಂದ ಇನ್ನೂ ಕಾಂಪ್ಲಿಕೇಷನ್ ಜಾಸ್ತಿಯಾಗುತ್ತದೆ. ತೊಂದರೆ ಇನ್ನೂ ಜಾಸ್ತಿಯಾಗುತ್ತದೆ. ತಾವೇನೋ ಕಾನೂನನ್ನು ಮಾಡಬಹುದು. ಆದರೆ ಅದನ್ನು ಜಾರಿಗೆ ಕೊಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಅನಧಿಕೃತ ಸಾಗುವಳಿಯನ್ನು ಖಾಯಂ ಮಾಡಬೇಕೆಂದು ಕಾನೂನಿನಲ್ಲಿ ಎಲ್ಲಿದೆ? No person just can enter into Forest and cultivate land. It is an offence. He can be prosecuted also under Forest Act and also along with other provisions of the IPC. ಮೊದಲಿನಿಂದಲೂ ಇದು ಇದ್ದೇ ಇದೆ. ಹೊಸದಾಗಿ ನೀವು ಏನನ್ನೂ ಮಾಡಬೇಕಾಗಿಲ್ಲ. ಇದರಲ್ಲಿ ಏನು ಹಾಕಿದ್ದಾರೆ?

> "any land in a reserved forest or protected forest, or any other land entrusted to the Forest Department for the purpose of afforestation."

ಶ್ರೀ ಬಿ. ರಾಚಯ್ಯ.— ಹಳ್ಳಿಗಳಲ್ಲಿ ಗೋಮಾಳ ಇದೆ, ಟ್ಯಾಂಕ್ ಬೆಡ್ಸ್ ಇದೆ, ಇವುಗಳನ್ನೆಲ್ಲಾ ನಾವು ಫಾರೆಸ್ಟ್ ಇಲಾಖೆಗೆ ವಹಿಸಿಕೊಟ್ಟು ನಿಮಗೆ ಇಂಥಿಂಥ ಜಾಗವನ್ನು ಬಿಟ್ಟುಕೊಟ್ಟಿದ್ದೇವೆ. ನೀವು ಇದರಲ್ಲಿ ಅರಣ್ಯವನ್ನು ಬೆಳೆಸಬಹುದೆಂದು ಅವರಿಗೆ ಹೇಳದಿದ್ದರೆ ಅವರಿಗೆ ಅದರ ಮೇಲೆ ಹಕ್ಕು ಬರುವುದಿಲ್ಲ. ವಿಶ್ವ ಬ್ಯಾಂಕ್‌ನಿಂದ ಸಾಲವನ್ನು ತೆಗೆದುಕೊಂಡು ಬಂದು ಸಾಮಾಜಿಕ ಅರಣ್ಯವನ್ನು

ಬೆಳೆಸುವುದಕ್ಕೆ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಖಾಲಿ ಇರತಕ್ಕ ಜಾಗಗಳನ್ನು ರೆವಿನ್ಯೂ ಇಲಾಖೆಯಿಂದ ಅರಣ್ಯ ಇಲಾಖೆಗೆ ವಹಿಸಿಕೊಡದಿದ್ದರೆ ಅವರು ಅಲ್ಲಿ ಗಿಡಗಳನ್ನು ನೆಡುವುದಕ್ಕೆ ಬರುವುದಿಲ್ಲ. ಹಾಕಿದ ಗಿಡಗಳನ್ನು ಅವರು ಕಾಯಬೇಕಾಗುತ್ತದೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಟ್ಯಾಂಕ್ ಬೆಡ್‌ನಲ್ಲಿ ನೆಟ್ಟಿದಂಥ ಗೋಬಳಿ ಗಿಡಗಳು ಬಹಳ ಚೆನ್ನಾಗಿ ಬೆಳೆದು ಬಂದುವು. ಆದರೆ ಅವುಗಳನ್ನು ಯಾರೋ ಕಡಿದುಕೊಂಡು ಹೋದರು. ಏಕೆಂದರೆ ಅವುಗಳನ್ನು ಕಾಯುವುದಕ್ಕೆ ತಕ್ಕ ವ್ಯವಸ್ಥೆ ಮಾಡಿಕೊಳ್ಳಬೇಕು. ನಾವು ಅರಣ್ಯ ಇಲಾಖೆಯವರಿಗೆ ಜಾಗವನ್ನು ವಹಿಸಿಕೊಡದಿದ್ದರೆ ಅವರು ಅಲ್ಲಿ ಏನನ್ನೂ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.— ಈಗ ಸಾಕಷ್ಟು ಪ್ರಮಾಣದಲ್ಲಿ ಪೆನಾಲ್ಟಿ ಮುಂತಾದ್ದು ಇದೆ ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಮ್ಮ ಮಲೆನಾಡಿನಲ್ಲಿ ಏನಾಗುತ್ತದೆ ಎಂದರೆ ಅಲ್ಲಿ Majority of the people take their births amidst trees and bushes. ಏಕೆಂದರೆ ಮನೆಯಿಂದ ಹೊರಗೆ ಕಾಲಿಟ್ಟರೆ ಅವನ ಸ್ನೇಹಿತರೇ ಮರಗಳು. ಆ ಮರಗಳನ್ನು ಬಿಟ್ಟರೆ ಅವನಿಗೆ ಸ್ನೇಹಿತರಿಲ್ಲ. ಅಂದ ಮೇಲೆ ಅವನಿಂದಲೇ ಈ ಕಾಡು ಉಳಿದಿರತಕ್ಕದ್ದು. ಅವನು ಇಲ್ಲದಿದ್ದರೆ ಅಲ್ಲಿ ಆ ಮರಗಳನ್ನು ಯಾವ ಫಾರೆಸ್ಟರೂ ಕೂಡ ಹೋಗಿ ಕಾಯುವುದಕ್ಕಾಗುತ್ತಿರಲಿಲ್ಲ. ಈಗ ಏನಾಗಿದೆ ಎಂದರೆ ನೀವು ಅಲ್ಲಿ ಕಾಲಿಟ್ಟರೆ ಕಾಲು ಕತ್ತರಿಸುತ್ತೇವೆಂದು ಹೇಳತಕ್ಕ ಪರಿಸ್ಥಿತಿಗೆ ಬಂದಿದೆ. ಮೊನ್ನೆ ಒಬ್ಬ ಫಾರೆಸ್ಟರು ನಮ್ಮ ಸೊರಬದಲ್ಲಿ ಬಂದೂಕನ್ನು ತೆಗೆದುಕೊಂಡು ಒಬ್ಬನನ್ನು ಹೊಡೆದು ಹಾಕಿದ್ದಾನೆ. ಒಂದು ವೇಳೆ ಅವನೇನಾದರೂ ಆ ಏಟಿನಲ್ಲಿ ಸತ್ತಿದ್ದಿದ್ದರೆ ಇವನು ಮರ್ಡರ್ ಕೇಸ್‌ನಲ್ಲಿ ಸಿಕ್ಕಿಹಾಕಿಕೊಳ್ಳುತ್ತಿದ್ದ.

ಅದು ಆಯಿತು. ಅದು ಮುಗಿದುಹೋದ ವಿಷಯ. ಫಾರೆಸ್ಟ್ ಉಳಿಸಬೇಕೆಂದು ಅವನು ಹೋಗಿಲ್ಲ. ತೆಗೆದುಕೊಂಡು ಹೋಗಿ ಹೊಡೆದ. ಆದುದರಿಂದ ಮಾನ್ಯ ಉಪಾಧ್ಯಕ್ಷರೇ, ಈ ಸಂದರ್ಭದಲ್ಲಿ ತಾವು ಈ ಜಮೀನು ಮತ್ತು ಮತ್ತೊಂದು ಹೇಳಬೇಕೆಂದರೆ ವಿವರ ಜಾಸ್ತಿ ಇದೆ. ಅದಕ್ಕೆ ಬಹಳ ಟೈಮ್ ಬೇಕಾಗುತ್ತದೆ. ಇದು ತಿದ್ದುಪಡಿ ಬಿಲ್ ಇದೆ. ಈಗ ನಾವು ಎತ್ತಿರತಕ್ಕ ವಿಚಾರಗಳ ಬಗ್ಗೆ ತಾವು ಗಮನ ಕೊಡಬೇಕು. ಯಾರು ೧೯೭೮ಕ್ಕಿಂತಲೂ ಹಿಂದೆ ಮಾಡಿದ್ದಾರೆ ಅವರಿಗೆ ಬಿಡಿಸುವುದಿಲ್ಲ ಎಂದು ಹೇಳಿದ್ದೀರಿ. ೧೯೭೮ರಿಂದ ಯಾರು ಸಾಗು ಮಾಡಿದ್ದಾರೆ ಅದಕ್ಕೆ ಸಮಿತಿ ಮಾಡಿ ವರದಿಯನ್ನು ತೆಗೆದುಕೊಂಡು ಒಂದು ತೀರ್ಮಾನ ತೆಗೆದುಕೊಂಡು ಅದರ ಪ್ರಕಾರ ಹೋಗೋಣ. ಇಷ್ಟು ಹೇಳಿ ಮಾನ್ಯ ಉಪಾಧ್ಯಕ್ಷರೇ, ಕೆಲವು ಕಾರಣದಿಂದ ಈ ಜನರಿಗೆ ತೊಂದರೆ ಕೊಡತಕ್ಕ ಕಾಲಂಗಳು ಏನು ಇವೆ ಅವನ್ನು ನಾನು ವಿರೋಧ ಮಾಡುತ್ತೇನೆ. ನಾನು ಕೆಲವು ಕಲಂಗಳನ್ನು ಸ್ವಾಗತ ಮಾಡುತ್ತೇನೆ. ಇವತ್ತು ಸಾಗು ಮಾಡತಕ್ಕ ಜನರನ್ನು ಒಕ್ಕಲು ಎಬ್ಬಿಸದೆ ಅವರ ಪರವಾಗಿ ಆಯಿತು ಎಂದು ಹೇಳಿದರೆ ಸಂತೋಷವಾಗುತ್ತದೆ. ನಿಜವಾಗಿ ಒಬ್ಬರಿಗೆ ತೊಂದರೆ ಕೊಡುವುದರಿಂದ ಏನೂ ಆಗುವುದಿಲ್ಲ. I hope you support the poor people. If you say until a final decision is taken as a matter of policy by the Government, certainly you will have all the support. Otherwise. How can I support this Bill? Therefore I oppose this Bill.

ಶ್ರೀ ಪಟಮಕ್ಕಿ ರತ್ನಾಕರ್ (ತೀರ್ಥಹಳ್ಳಿ).— ಮಾನ್ಯ ಅಧ್ಯಕ್ಷರೇ, ಮಾನ್ಯ ಅರಣ್ಯ ಸಚಿವರು ಮಂಡಿಸಿರತಕ್ಕ ಬಿಲ್ ಮೇಲೆ ಸ್ವಲ್ಪ ದೀರ್ಘವಾಗಿರತಕ್ಕ ಚರ್ಚೆ ನಡೆಯಿತು. ಮಾನ್ಯ ಬಂಗಾರಪ್ಪನವರ ಈ ವಿಚಾರದ ಬಗ್ಗೆ ಸ್ವಲ್ಪ ವಿವರವಾದ ಬೆಳಕನ್ನು ಚೆಲ್ಲಿದ್ದಾರೆ. ಅಧ್ಯಕ್ಷರೇ, ಇಲ್ಲಿ ತಮ್ಮ ಮುಖಾಂತರ ಸಚಿವರ ಗಮನಕ್ಕೆ ತರುವ ಅಂಶಗಳು ಎಂದರೆ ನಿಮ್ಮ ೬೪(ಎ) ಏನು ತಿದ್ದುಪಡಿ ಇದೆ ಅದನ್ನು ನಾವು ಅಂಗೀಕರಿಸುವುದರಿಂದ ಏನು ಸಾಧಕಬಾಧಕಗಳು ಇವೆ ಎಂಬುದನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ಅರಣ್ಯವನ್ನು ಬೆಳೆಸಬೇಕು, ಅರಣ್ಯ ನಮ್ಮ ಸಮಾಜದ ಹಿತದೃಷ್ಟಿಯಿಂದ ಅತ್ಯಂತ ಅಗತ್ಯ ಎನ್ನುವ ಭಾವನೆ ಜೊತೆ ಈ ರಾಜ್ಯದಲ್ಲಿ ಅರಣ್ಯ ಭೂಮಿಯನ್ನು ಸಾಗು ಮಾಡಿಕೊಂಡು ಹತ್ತಾರು ವರ್ಷಗಳಿಂದ ಅದರಿಂದ ಜೀವನ ಮಾಡಿಕೊಂಡು ಬಂದಿರತಕ್ಕ ರೈತ ಕುಟುಂಬಗಳನ್ನು ಕೂಡಾ ದೃಷ್ಟಿಯಲ್ಲಿ ಇಟ್ಟುಕೊಂಡು ಈ ವಿಷಯವನ್ನು ಪರಾಂಭರಿಸಬೇಕಾಗುತ್ತದೆ. ಅಧ್ಯಕ್ಷರೇ, ಇಲ್ಲಿ ಸ್ವಲ್ಪ ಗೊಂದಲ ಇದೆ. ಈಗಿನ ಮುಖ್ಯಮಂತ್ರಿಯವರು ಹಿಂದೆ ಒಂದು ಹೇಳಿಕೆಯನ್ನು ಪತ್ರಿಕೆಗಳಲ್ಲಿ ಕೊಟ್ಟರು. ಸುಮಾರು ೧೨ ಲಕ್ಷ ಎಕರೆ ಭೂಮಿಯನ್ನು ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ

ವರ್ಗಾವಣೆ ಮಾಡುತ್ತೇವೆ, ಈ ವರ್ಗಾವಣೆ ಮಾಡಿದ ಭೂಮಿಯನ್ನು ಮತ್ತೆ ಹಿಂದುಳಿದ ವರ್ಗದವರಿಗೆ ಪರಿಶಿಷ್ಟ ಜಾತಿ ಪಂಗಡದವರಿಗೆ ಮತ್ತು ಬಡವರಿಗೆ ಹಂಚಿಕೆ ಮಾಡುತ್ತೇವೆ ಎಂದು ಹೇಳಿದ್ದರು ಆ ಒಂದು ವಿಚಾರವನ್ನು ನಾವು ಸ್ವಾಗತ ಮಾಡಿದ್ದೆವು. ಆದರೆ ಇವತ್ತಿನ ದಿವಸ ಬಿಲ್‌ನ್ನು ಮಂಡನೆ ಮಾಡಿದ್ದಾರೆ ಅದನ್ನು ನೋಡಿದರೆ ಸ್ವಲ್ಪ ಗೊಂದಲ ಕೂಡಾ ಮಾನ್ಯ ಸದಸ್ಯರಲ್ಲಿ ಉಂಟಾಗಿದೆ ಅಧ್ಯಕ್ಷರೇ, 'ಸಿ' ಮತ್ತು 'ಡಿ' ಎಂದರೆ ಕೃಷಿಗೆ ಯೋಗ್ಯವಲ್ಲದ ಭೂಮಿಯಲ್ಲಿ ಕಾಡು ಬೆಳೆಸುವ ದೃಷ್ಟಿಯಿಂದ ಸರ್ಕಾರಕ್ಕೆ ವಹಿಸತಕ್ಕ ವಿಚಾರ. 'ಸಿ' ಮತ್ತು 'ಡಿ' ಭೂಮಿ ಕೃಷಿಗೆ ಯೋಗ್ಯವಲ್ಲವೆಂದು ವೈಜ್ಞಾನಿಕವಾಗಿ ಗುರ್ತಿಸಲಾಗಿದೆಯೇ ಎನ್ನುವ ವಿಚಾರ ಬಂತು. ಆಗ ಮಾನ್ಯ ಬೊಮ್ಮಾಯಿಯವರು ಹೇಳಿದರು, 'ಸಿ' ಅಂಡ್ 'ಡಿ' ಲ್ಯಾಂಡನ್ನು ನಾವು ಗುರ್ತಿಸುವಾಗ ವೈಜ್ಞಾನಿಕವಾಗಿ ಮಾಡದೇ ಇರುವುದರಿಂದ ಅದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕೊಟ್ಟಿದ್ದೇವೆ ಎನ್ನುವ ಮಾತನ್ನು ಹೇಳಿದರು. 'ಸಿ' ಮತ್ತು 'ಡಿ' ಭೂಮಿ ಕೂಡಾ ಕೃಷಿ ಯೋಗ್ಯ ಭೂಮಿಯಾಗಿದ್ದು ಅಲ್ಲಿ ಸಾಗುವಳಿ ಮಾಡಿರತಕ್ಕದ್ದು, ಮನೆಗಳನ್ನು ಕಟ್ಟಿ ರೈತರು ವಾಸ ಮಾಡುತ್ತಿರತಕ್ಕದ್ದನ್ನು ನಾವು ನೋಡಿದ್ದೇವೆ. ಈ ಸ್ಟೇಟ್ ಫಾರೆಸ್ಟ್‌ನಲ್ಲಿ ಹಾಗೂ ಮೈನರ್ ಫಾರೆಸ್ಟ್‌ನಲ್ಲಿ ಕೂಡ ಈ ಜನ ಹಲವಾರು ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಒಂದು ವಿಚಾರ ನಾನು ಹೇಳುವಂಥಾದ್ದು, ಹಿಂದೆಯೇ ಸುಮಾರು ೧೫-೨೦ ವರ್ಷಗಳ ಹಿಂದೆಯೇ ಈ ಬಗ್ಗೆ ನಾವು ಒಂದು ಸಮಗ್ರವಾದಂಥ ದೃಷ್ಟಿಕೋನವನ್ನು ಇಟ್ಟುಕೊಂಡು ಆ ಜನರನ್ನು ಈ ಅರಣ್ಯದಲ್ಲಿ ಸಾಗುವಳಿ ಮಾಡದೇ ಇರುವ ಹಾಗೆ ತಡೆ ತರಬೇಕಿತ್ತು. ಇವತ್ತು ಏನಾಗಿದೆ ಎಂದರೆ ೧೫-೨೦ ವರ್ಷಗಳಿಂದ ಈ ರೈತರು ಅಥವಾ ಕೂಲಿ ಮಾಡತಕ್ಕಂಥ ಜನ ಈ ಅರಣ್ಯದಲ್ಲಿ ಸಾಗುವಳಿ ಮಾಡಿಕೊಂಡು ಜಮೀನು ಹೊಂದಿರತಕ್ಕಂಥಾದ್ದು, ಮನೆಗಳನ್ನು ಕಟ್ಟಿಕೊಂಡು ತೆಂಗಿನ ಸಸಿ, ಅಡಿಕೆ ಸಸಿಗಳನ್ನು ಬೆಳೆಸಿರುವುದು ನಡೆದು ಹೋಗಿದೆ. ಈಗ ಅವರನ್ನು ಬಿಡಿಸತಕ್ಕದ್ದು ಬಹಳಷ್ಟು ಕಷ್ಟವಾಗುತ್ತದೆ. ಇವರನ್ನು ಬಿಡಿಸಲಿಕ್ಕೆ ಈ ಬಿಲ್‌ನಿಂದ ಸಹಾಯವಾಗುತ್ತದೆ ಎನ್ನುವುದಾದರೆ ನಿಜಕ್ಕೂ ನೀವು ಸ್ವಲ್ಪ ಈ ವಿಚಾರದಲ್ಲಿ ಗೊಂದಲಕ್ಕೀಡಾಗಿದ್ದೀರಿ ಎಂದು ಭಾವಿಸಬೇಕಾಗುತ್ತದೆ. ಆದ್ದರಿಂದ ಈ ವರ್ಗದ ಜನರಿಗೆ ರಕ್ಷಣೆ ಕೊಡತಕ್ಕಂಥ ದೃಷ್ಟಿಯನ್ನು ಇಟ್ಟುಕೊಂಡು ಈ ಬಿಲ್‌ನ್ನು ಸ್ವಲ್ಪ ತಿದ್ದುಪಡಿ ಮಾಡಿದರೆ ಅತ್ಯಂತ ಸೂಕ್ತವೆಂದು ನಾನು ಭಾವಿಸಿದ್ದೇನೆ. ಮತ್ತೊಂದು ಪ್ರಶ್ನೆ ಕೂಡ ಇಲ್ಲಿದೆ. ಈ ಸಿ ಅಂಡ್ ಡಿ ಲ್ಯಾಂಡ್ ಜೊತೆಗೆ ನಿಮ್ಮ ಎಂ.ಟಿ.ಎಂ.ನವರು ಮತ್ತು ಕೆಸಿಸಿಯವರೂ ಕೂಡ ರೈತರಿಗೆ ಒಂದು ಕಷ್ಟಕರವಾದಂಥ ಸಂದರ್ಭವನ್ನು ನಮ್ಮ ಹಳ್ಳಿಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ನಿರ್ಮಾಣ ಮಾಡಿದ್ದಾರೆ. ಅಲ್ಲಿ ಗೋಮಾಳಗಳಿವೆ. ಗ್ರಾಮಠಾಣಗಳಿವೆ, ಸೊಪ್ಪಿನ ಬೆಟ್ಟಗಳು ಏನಿವೆ ಅವೆಲ್ಲವನ್ನೂ ಕೂಡ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ರೈತರಿಗೆ ಬೇಕಾಗಿರತಕ್ಕಂಥ ಸೊಪ್ಪು ಅಥವಾ ಜಾನುವಾರುಗಳಿಗೆ ಮೇಯುವುದಕ್ಕೆ ತೊಂದರೆ ಮಾಡಿ ಈ ಗೊಂದಲದಲ್ಲಿ ನಾವು ಕಾಡನ್ನು ಬೆಳೆಸುತ್ತೇವೆ ಎನ್ನುವ ದೃಷ್ಟಿಕೋನವನ್ನು ಇಟ್ಟುಕೊಂಡು ಹೋದರೆ, ನಾವು ಸಮಾಜಕ್ಕೆ ಸ್ಪಷ್ಟವಾಗಿರತಕ್ಕಂಥ ಚಿತ್ರವನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈಗ ಮಾನ್ಯ ಮಂತ್ರಿಗಳು ಈ ಬಿಲ್‌ನ್ನು ಸ್ವಲ್ಪ ಸೂಕ್ಷ್ಮವಾಗಿ ಯೋಚನೆ ಮಾಡಿ ಈ ಅರಣ್ಯ ನೀತಿಯಿಂದ ಬಡವರ ಗುಡಿಸಲುಗಳಿಗೆ ಯಾವುದೇ ರೀತಿಯ ಮಾರಕವಾಗಬಾರದು, ಈ ನಿಟ್ಟಿನಲ್ಲಿ ಯೋಚನೆ ಮಾಡಬೇಕೆಂದು ಹೇಳಿ ತಾವು ಈ ದಿಕ್ಕಿನಲ್ಲಿ ಯೋಚನೆ ಮಾಡುತ್ತೀರೆಂದು ಭಾವಿಸಿ ಈ ಬಿಲ್‌ನ್ನು ನಾನು ವಿರೋಧಿಸಿ ನನ್ನ ಈ ಒಂದೆರಡು ಮಾತುಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

†ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಈ ಅರಣ್ಯ ಇಲಾಖೆಯ ಒಂದು ಕಾನೂನಿಗೆ ತಿದ್ದುಪಡಿಯನ್ನು ತಂದು ಮುಂದೆ ಬರುವಂಥ ವರ್ಷಗಳಲ್ಲಿ ಅರಣ್ಯ ನಾಶವಾಗಬಾರದು ಎನ್ನುವ ಉದ್ದೇಶ ಏನಿದೆ ಅದರ ಬಗ್ಗೆ ಯಾವುದೇ ಸದಸ್ಯರ ವಿರೋಧ ಇಲ್ಲ. ಆದರೆ ಪ್ರಶ್ನೆ ಆಗತಕ್ಕದ್ದು ಏನೆಂದರೆ ಯಾವ ಕೃಷಿ ಕಾರ್ಮಿಕರು ಬಡವರು ಕಳೆದ ೧೫-೨೦ ವರ್ಷಗಳಿಂದ ಈ ರೀತಿಯಲ್ಲಿ ಅರಣ್ಯ ಇಲಾಖೆಗೆ ಸೇರಿದಂಥ ಜಮೀನು ಇರಬಹುದು ಸಿ ಅಂಡ್ ಡಿ ಲ್ಯಾಂಡ್ ಇರಬಹುದು, ಒಂದೆರಡು ಎಕರೆ ಜಮೀನನ್ನು ಬಗರ್‌ಹುಕ್ಕುಂ ಸಾಗುವಳಿ ಮಾಡಿಕೊಂಡು ಜೀವನ ಏನು ಮಾಡುತ್ತಿದ್ದಾರೆ. ಆ ಬಡವನಿಗೆ ಆತನ ಜೀವನಕ್ಕೆ ಕುತ್ತು ತರುವಂಥ ಬಿಲ್ ಇದು. ಅದಕ್ಕಾಗಿ ನಾನು ವಿರೋಧ ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಮಾಜಿ ಕಂದಾಯ ಸಚಿವರು ಮತ್ತು ಹಾಲಿ ಮುಖ್ಯಮಂತ್ರಿಗಳೂ ಆದ ಶ್ರೀ ಬೊಮ್ಮಾಯಿಯವರು ೧೫-೪-೮೮ರಂದು ಪ್ರಜಾವಾಣಿಯಲ್ಲಿ ಒಂದು ವಿಶೇಷ ಹೇಳಿಕೆಯನ್ನು ಕೊಟ್ಟಿದ್ದಾರೆ, ಅದು ಹೀಗಿದೆ...

ಸಿ ಅಂಡ್ ಡಿ ಅರಣ್ಯ ಭೂಮಿ–ದಲಿತರಿಗೆ ಕೊಡಲು ಶೀಘ್ರವೇ ಆದೇಶ

ಜಿಲ್ಲೆಯಲ್ಲಿ ಹಿಂದಿನ ಸರ್ಕಾರ ಅರಣ್ಯ ಇಲಾಖೆಗೆ ವರ್ಗಾಯಿಸಿದ ೨೫ ಲಕ್ಷ ಎಕರೆ ಸಿ ಅಂಡ್ ಡಿ ಭೂಮಿಯನ್ನು ಕಂದಾಯ ಇಲಾಖೆಗೆ ವಾಪಾಸ್ಸು ತೆಗೆದುಕೊಂಡು ಭೂಹೀನ ದಲಿತರಿಗೆ ವಿತರಿಸಲಾಗುವುದು.

ಈಗ ಏನು ೨೫ ಲಕ್ಷ ಎಕರೆ ಹಿಂದಿನ ಸರ್ಕಾರ ವರ್ಗಾವಣೆ ಮಾಡಿದೆ ಇಲ್ಲಿ ದಲಿತರು ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ ಈ ಭೂಮಿಯನ್ನು ವಾಪಸ್ಸು ತಮ್ಮ ಇಲಾಖೆಗೆ ತೆಗೆದುಕೊಂಡು ಈ ಸಿ ಅಂಡ್ ಡಿ ಲ್ಯಾಂಡ್‌ನ್ನು ದಲಿತರಿಗೆ ಹಂಚುತ್ತೇವೆ ಎಂದು ಮಾಜಿ ಕಂದಾಯ ಸಚಿವರು ಮತ್ತು ಹಾಲಿ ಮುಖ್ಯಮಂತ್ರಿಗಳು ಕೊಟ್ಟಂಥ ಹೇಳಿಕೆ ಇದು. ಆಮೇಲೆ ಕೊಡಗು ಜಿಲ್ಲೆಗೆ ಹೋದರು. ದೇವರಕಾಡು ರಕ್ಷಣೆ ಮಾಡುತ್ತೇವೆ ಎಂದು ಹೇಳಿದರು. ಕೊಡಗು ಜಿಲ್ಲೆಯಲ್ಲಿ ಕಂದಾಯ ಇಲಾಖೆಯಿಂದ ೩೩೬೫.೫೦ ಹೆಕ್ಟೇರ್ ವಿಸ್ತೀರ್ಣದ ದೇವರಕಾಡು ರೆವಿನ್ಯೂ ಇಲಾಖೆಯಿಂದ ಅರಣ್ಯ ಇಲಾಖೆಗೆ ಹಸ್ತಾಂತರವಾಗಿದ್ದು ಈ ಕಾಡನ್ನು ರಕ್ಷಿಸುವುದರ ಜೊತೆಗೆ ಮರ ಕಡಿಯದಂತೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುವ ಭರವಸೆಯನ್ನು ಮಾನ್ಯ ಮಂತ್ರಿಗಳು ಹೇಳಿದರು. ಈ ರೀತಿ ಒಂದು ಕಡೆ ಹಿಂದಿನ ಸರ್ಕಾರ ಸಿ ಅಂಡ್ ಡಿ ಲ್ಯಾಂಡನ್ನು ವರ್ಗಾವಣೆ ಮಾಡಿದ್ದನ್ನು ವಾಪಸ್ಸು ತೆಗೆದುಕೊಂಡು ದಲಿತರಿಗೆ ಹಂಚುತ್ತೇವೆ ಎಂದು ಹೇಳಿದರು. ಸನ್ಮಾನ್ಯ ಕಂದಾಯ ಸಚಿವರು ಅರಣ್ಯ ಇಲಾಖೆಗೆ ಸೇರಿದಂಥ ಜಮೀನನ್ನು ಬಡವರಿಗೆ ಖಾಯಂ ಮಾಡುವ ಪ್ರಶ್ನೆ ಬಂದಾಗ ವಿರೋಧಪಕ್ಷದವರನ್ನು ಕರೆದಿರತಕ್ಕಂಥ ಸಂದರ್ಭದಲ್ಲಿ ನಾವು ಒತ್ತಾಯ ಮಾಡಿದ್ದೆವು. ಕೇವಲ ರೆವಿನ್ಯೂ ಇಲಾಖೆಗೆ ಸೇರಿದಂಥ ಜಮೀನನ್ನು ಒತ್ತುವರಿ ಮಾಡಿದಂಥ ಭೂಹೀನ ರೈತರಿಗೆ ಕೊಡುವುದರ ಜೊತೆಗೆ ಕಳೆದ ೧೫–೨೦ ವರ್ಷಗಳಿಂದ ಅರಣ್ಯ ಇಲಾಖೆಗೆ ಸೇರಿದ ಜಮೀನಿನಲ್ಲಿ ಬಗರ್‌ಹುಕುಂ ಸಾಗುವಳಿ ಮಾಡಿ, ಯಾವುದೇ ದಾಖಲೆ ಇಲ್ಲದಂಥ ಕಡು ಬಡವರಿಗೂ ಸಹ ಜಮೀನನ್ನು ಕೊಡಬೇಕಾಗುತ್ತದೆ ಎಂದು ನಾವು ಆಗ್ರಹಪಡಿಸಿದಾಗ ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಿಂದಿನ ಕಂದಾಯ ಮಂತ್ರಿಗಳು ಹೇಳಿದರು, ಬಹಿರಂಗವಾಗಿ ಹೇಳಿದರು, ಪತ್ರಿಕಾ ಹೇಳಿಕೆ ಕೊಟ್ಟರು. ನಮ್ಮ ಹತ್ತಿರವೂ ಸಹ ಹೇಳಿದರು. ಮತ್ತೆ ನಿನ್ನೆ, ಮೊನ್ನೆ ಚರ್ಚೆ ಮಾಡುವಾಗ ಹೇಳಿದ್ದಾರೆ, ನಾವು ಈಗಾಗಲೇ ಅರಣ್ಯ ಇಲಾಖೆಯಿಂದ ಲಕ್ಷಾಂತರ ಎಕರೆ ಸಿ ಅಂಡ್ ಡಿ ಲ್ಯಾಂಡ್‌ನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡುತ್ತಾ ಇರುವುದರಿಂದ, ಈಗಾಗಲೇ ಒತ್ತುವರಿ ಮಾಡಿದಂಥ ಅರಣ್ಯ ಇಲಾಖೆಗೆ ಸೇರಿದಂಥ ಜಮೀನನ್ನು ನಾವು ವಾಪಸ್ ಪಡೆಯುವುದಕ್ಕೆ ಅಡ್ಡಿ ಇಲ್ಲ. ಇದನು ವಾಪಸ್ ತೆಗೆದುಕೊಳ್ಳುತ್ತೇವೆ, ಯಾರಿಗೂ ಅನ್ಯಾಯವಾಗುವುದಿಲ್ಲ ಎನ್ನುವ ಮಾತನ್ನು ಹೇಳಿದರು. ತಾವು ತಂದಿರುವಂಥ ಅಮೆಂಡ್‌ಮೆಂಟ್‌ನಲ್ಲಿ, ೮ ಅಮೆಂಡ್‌ಮೆಂಟ್ ೬೪ ಎ ನಲ್ಲಿ, "or any land in a protected forest and certain other lands shall be inserted." Sub-clause (2)..."or any other land entrusted to the Forest Department for the purpose of offorestation shall be substitnted". ಎಂದು ಹೇಳಿದ್ದಾರೆ. ತಾವು ಬರತಕ್ಕಂತಹ ಎರಡು ಮೂರು ದಿವಸದಲ್ಲಿ, ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಸಿ ಅಂಡ್ ಡಿ ಲ್ಯಾಂಡ್ ಎಂದು ಗೋಮಾಳಗಳು ಇತ್ಯಾ ಬಡವರ ನಿವೇಶನಕ್ಕೋಸ್ಕರ ತಲೆ ತಲಾಂತರಗಳಿಂದ ಉಳಿಸಿಕೊಂಡು ಬರುವಂಥ ಜಮೀನುಗಳನ್ನು ಸ್ಥಳ ತನಿಖೆ ಮಾಡದೇ ಸಿ ಅಂಡ್ ಡಿ ಲ್ಯಾಂಡ್ ಉಳುಮೆಗೆ ಉಪಯೋಗವಿಲ್ಲ ಎಂದು ಹೇಳಿ ವರ್ಗಾವಣೆ ಮಾಡುವುದಕ್ಕೆ ಹೊರಟಿದ್ದೀರಿ,

ಈಗಲೂ ೪–೫ ಲಕ್ಷ ಬಡ ಹಿಂದುಳಿದ ಜನಗಳು, ಕೃಷಿ ಕಾರ್ಮಿಕರು ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದಾರೆ ನಿಮ್ಮ ಸ್ಟೇಟ್‌ಮೆಂಟ್‌ನಲ್ಲೂ ಒಪ್ಪಿದ್ದೀರಿ. ಸರ್ಕಾರ ಒಪ್ಪಿದೆ. ಮಾನ್ಯ ಜಿ.ಎಸ್ ಬಾಗಲಕೋಟೆಯವರು ಮಂತ್ರಿಗಳಾಗಿದ್ದಾಗ ಹೇಳಿಕೆ ಕೊಟ್ಟರು. ಆಗ ಕಾಂಗ್ರೆಸ್ ಮಿತ್ರರು ಗಲಾಟೆ ಮಾಡಿದ್ದರು. ಅರಣ್ಯ ಭೂಮಿಯನ್ನು ಒತ್ತುವರಿ ಸಕ್ರಮಕ್ಕೆ ಸಂಬಂಧಿಸಿದ ತಾಲ್ಲೂಕುಮಟ್ಟದ ಸಮಿತಿಗಳನ್ನು ಆದಷ್ಟು ಬೇಗ ರಚಿಸುತ್ತೇವೆ ಎಂದು ಹೇಳಿಕೆ ಕೊಟ್ಟಿದ್ದರು. ಈ ವಿಚಾರವನ್ನು ಎಲ್ಲಾ ವಿರೋಧಪಕ್ಷಗಳೂ ಹೇಳಿದಾಗ, ನಾವು ಸಮಿತಿ ಮಾಡುತ್ತೇವೆ ಎಂದು ಹೇಳಿಕೊಂಡು ಬಂದರು. ಇವತ್ತು ಸಮಿತಿ ಆಗಿ ಸ್ಥಳ ತನಿಖೆ ಆಗಲಿಲ್ಲ. ಈ ರೀತಿ ನೀವು ಶಾಸಕರನ್ನೊಳಗೊಂಡ ಸಮಿತಿ ಮಾಡುತ್ತೇವೆ. ಒತ್ತುವರಿ ಆಗಿರುವುದನ್ನು ತನಿಖೆ ಮಾಡಿ, ಬಡವನಿಗೆ ಅನ್ಯಾಯವಾಗದಂತೆ ಕಾನೂನು ತರುತ್ತೇವೆ ಎಂದು ಸರ್ಕಾರ ಹೇಳಿತ್ತು. ಇವತ್ತು ಯಾವ ತಾಲ್ಲೂಕಿನ ಶಾಸಕರು ಎದ್ದುನಿಂತು ಹೇಳುವ

ದಕ್ಕೆ ಸಿದ್ಧರಿದ್ದಾರೆ? ಕಳೆದ ೨ ವರ್ಷದಲ್ಲಿ ಯಾವ ಶಾಸಕ ಸಮಿತಿ ಅರಣ್ಯ ಇಲಾಖೆ ಅಧಿಕಾರಿಗಳ ಜೊತೆ ಹೋಗಿ ಸ್ಥಳ ತನಿಖೆ ಮಾಡಿ ಸಿ ಅಂಡ್ ಡಿ ಲ್ಯಾಂಡ್ ಇದು ಅಲ್ಲ, ಇದು ಹೌದು ಎಂಬುದನ್ನು ತನಿಖೆ ಮಾಡಿ ಸರ್ಕಾರಕ್ಕೆ ರಿಪೋರ್ಟ್ ಕೊಟ್ಟಿದೆ? ಒಂದುವೇಳೆ ಕೊಟ್ಟಿದ್ದರೆ ಅದನ್ನು ಇಲ್ಲಿ ಟೇಬಲ್ ಮೇಲೆ ಇಡಿ. ಚುನಾವಣೆಯಲ್ಲಿ ಓಟಿನ ಆಸೆಗೋಸ್ಕರ ಬಡವನಿಗೆ ಆಮಿಷ ಒಡ್ಡಿ ಅರಣ್ಯವನ್ನು ಲೂಟಿ ಮಾಡಿ ಎಂದು ಹೇಳಿ, ಇಲ್ಲಿ ಕುಳಿತಿರುವಂಥ ಸದನದ ಅನೇಕ ಜನ ಶಾಸಕರು ಮತ್ತು ಈ ಸದನದಲ್ಲಿ ಹಿಂದುಮುಂದು ಯೋಚನೆ ಮಾಡದೇ. ಯಾರು ೨ ಎಕರೆ ಜಮೀನು ಇಟ್ಟುಕೊಂಡು ಜೀವನ ಮಾಡಿಕೊಂಡು ಬದುಕುತ್ತಿದ್ದಾನೆ ಅಂತಹ ಬಡವನನ್ನು ಹೊರಹಾಕುವಂತಹ ಕಾನೂನನ್ನು ನಾನು ವಿರೋಧ ಮಾಡುತ್ತೇನೆ. ಇದರ ಅರ್ಥ ಅರಣ್ಯ ಬೆಳೆಯಬಾರದು ಎಂದಲ್ಲ, ಅರಣ್ಯ ಬೆಳೆಸಬೇಕೆಂಬ ನಿಮ್ಮ ಅಧಿಕಾರಿಗಳು ಸಿ ಅಂಡ್ ಡಿ ಲ್ಯಾಂಡನ್ನು ತೆಗೆದುಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ನಿಮ್ಮ ತಹಶೀಲ್ದಾರ್, ಜಿಲ್ಲಾಧಿಕಾರಿಗಳು ಸ್ಥಳ ತನಿಖೆ ಮಾಡದೇ ಸಿ ಅಂಡ್ ಡಿ ಲ್ಯಾಂಡನ್ನು ವರ್ಗಾವಣೆ ಮಾಡುತ್ತಿದ್ದಾರೆ. ಇವತ್ತು ಅವರು ಸ್ಥಳ ತನಿಖೆ ಮಾಡಿದ್ದಾರೆಯೋ ಅಲ್ಲಿರುವಂಥ ಬಡವನ ಸ್ಥಿತಿಯನ್ನು ತಿಳಿದುಕೊಂಡಿದ್ದಾನೆಯೇ? ನಿಮ್ಮ ಅಧಿಕಾರಿಗೆ ಅರಣ್ಯವನ್ನು ಬೆಳೆಸಬೇಕೆಂಬ ಆಸಕ್ತಿ ಇದ್ದರೆ. ಕೋಟ್ಯಾಂತರ ರೂಪಾಯಿಗಳ ಅರಣ್ಯ ನಾಶವಾಗುತ್ತಿದೆ. ಮಾನ್ಯ ಬಂಗಾರಪ್ಪನವರು ಹೇಳಿದಂತೆ ಈ ಸದನದಲ್ಲಿ ನೂರಾರು ಬಾರಿ ಹೇಳಿದ್ದೇವೆ. ಶಿಕಾರಿಪುರ ತಾಲ್ಲೂಕಿನ ಚಂದ್ರಕಲಾ ಫಾರೆಸ್ಟ್ ನಲ್ಲಿ ಪ್ರತಿನಿತ್ಯ ೨೫-೩೦ ಕೋಟಿ ರೂಪಾಯಿಗಳ ಗಂಧ ಲೂಟಿಯಾಗುತ್ತಿದೆ. ಲಾರಿಗಳನ್ನು ಹಿಡಿಯುವಂತಾದ್ದು ಪತ್ರಿಕೆಗಳಲ್ಲಿ ಬರುತ್ತಿದೆ, ಯಾವುದೇ ಅಧಿಕಾರಿ ಹೋರಾಟ ಮಾಡುತ್ತಿಲ್ಲ. ಅಧಿಕಾರಿಗೆ ಬೇಕಾದಂಥ ಅನುಕೂಲ ಮಾಡುತ್ತಾ ಇಲ್ಲ. ಹೇಗಿದೆ ನಿಮ್ಮ ಸರ್ಕಾರ? ಈಗ್ಗೆ ೧೫ ದಿವಸಗಳ ಹಿಂದೆ ಸಾಗರಕ್ಕೆ ಹೋಗಿದ್ದೆ. ಅಲ್ಲಿ ಒಬ್ಬ ಪ್ರಾಮಾಣಿಕ ಅರಣ್ಯ ಅಧಿಕಾರಿ ಇದ್ದರು ಅಲ್ಲಿರುವಂಥ ಪುಢಾರಿಗಳು, ಅರಣ್ಯ ಲೂಟಿ ಮಾಡಿ, ಸುಮಾರು ೫೦ ಲಕ್ಷ ರೂಪಾಯಿಗಳಿಗೂ ಹೆಚ್ಚಿನ ಹಾಲುಮಡ್ಡಿಯನ್ನು ಕಾನೂನು ಬಾಹಿರವಾಗಿ ತನ್ನ ಮನೆಯಲ್ಲಿ ಇಟ್ಟುಕೊಂಡಿದರು. ಈ ಅರಣ್ಯ ಇಲಾಖೆ ಅಧಿಕಾರಿ ಸ್ಥಳ ತನಿಖೆ ಮಾಡಿ ಅದನ್ನು ಅರೆಸ್ಟ್ ಮಾಡಿದರು. ಆದರೆ ಕೆಲವು ಪುಡಾರಿಗಳು. ಇವರನ್ನು ವರ್ಗಾವಣೆ ಮಾಡುತ್ತೇವೆ ಎಂದು ಮೆರವಣಿಗೆ ಮಾಡಿದರು. ನಾನು ಈ ವಿಚಾರವನ್ನು ಬಹಳ ದುಃಖದಿಂದ ಹೇಳುತ್ತೇನೆ ಪ್ರಾಮಾಣಿಕ ಅರಣ್ಯ ಇಲಾಖೆ ಅಧಿಕಾರಿಯನ್ನು, ಹಿರಿಯ ಅಧಿಕಾರಿಗಳ ಒತ್ತಡಕ್ಕೆ ಮಣಿದು ವರ್ಗಾವಣೆ ಮಾಡಿದರು. ಅರಣ್ಯವನ್ನು ಉಳಿಸುವ ಬಗ್ಗೆ ಮಾತನಾಡುತ್ತಾರೆ, ನಿಮಗೆ ಯಾವ ನೈತಿಕ ಹಕ್ಕಿದೆ? ಪ್ರಾಮಾಣಿಕ ಅಧಿಕಾರಿಗಳನ್ನು ಕೆಲಸ ಮಾಡುವುದಕ್ಕೆ ಬಿಡುವುದಿಲ್ಲ. ಅರಣ್ಯ ಲೂಟಿ ಆಗುತ್ತಿದ್ದರೂ, ಉಳಿಸುವುದಕ್ಕೆ ಯಾವುದೇ ಪ್ರಾಮಾಣಿಕ ಪ್ರಯತ್ನ ಆಗಲಿಲ್ಲ. ಯಾರು ಎರಡು ಹೊತ್ತಿನ ಗಂಜಿಗೋಸ್ಕರ ೨-೩ ಎಕರೆ ಅದು ಅರಣ್ಯ ಇಲಾಖೆಗೆ ಸೇರಿದ ಜಮೀನು ಇರಬಹುದು ರೆವಿನ್ಯೂ ಇಲಾಖೆಗೆ ಸೇರಿದ ಜಮೀನಿರಬಹುದು ಅದು ಭಗವಂತ ಕೊಟ್ಟಂಥ ಭೂಮಿ ಅಲ್ಲಿ ಉಳುಮೆ ಮಾಡುತ್ತಿರುತ್ತಾರೆ ಅವರಿಗೆ ಕಿರುಕುಳ ಕೊಡುತ್ತಿದ್ದೀರಿ ಈ ತರಹ ಖಾಲಿ ಇದ್ದ ಜಮೀನಿನಲ್ಲಿ ಅರಣ್ಯವನ್ನೂ ಬೆಳೆಸಲಿಲ್ಲ, ಇದ್ದ ಅರಣ್ಯವನ್ನೂ ರಕ್ಷಣೆ ಮಾಡಲಿಲ್ಲ. ಇಂತಹ ಖಾಲಿ ಇದ್ದ ಜಮೀನಿನಲ್ಲಿ ಎರಡು ಹೊತ್ತಿನ ಗಂಜಿಗೋಸ್ಕರ, ತನ್ನ ಹೊಟ್ಟೆ ಪಾಡಿಗೋಸ್ಕರ ೨ ಎಕರೆ ಜಮೀನನ್ನು ಬಗರ್‌ಹುಕುಂ ಸಾಗುವಳಿ ಮಾಡಿರುವುದು ಅನ್ಯಾಯವಲ್ಲ. ಜೊತೆಗೆ ಇಂತಹವನಿಗೆ ಕೆಲಸ ಕೊಡದೇ ಇರುವಂಥ ಸರ್ಕಾರ. ನಾನು ಪ್ಲಾಂಟರ್ಸ್‌ಗಳ ಜಮೀನು ಖಾಯಂ ಮಾಡಿ ಎಂದು ಹೇಳಲಿಲ್ಲ, ಜಮೀನು ಇರುವವರು ಒತ್ತುವರಿ ಮಾಡಿದ್ದರೆ, ಅವರನ್ನು ಗುಂಡಿಕ್ಕಿ ಕೊಲೆ ಮಾಡಿ ಎಂದು ಹೇಳುತ್ತೇನೆ.

ನಾಳೆ ಯಾವುದೇ ಬಡವ ಇರಬಹುದು, ಸಾಹುಕಾರ ಇರಬಹುದು, ಅವರು ಅರಣ್ಯ ಇಲಾಖೆಯ ಯಾವುದೇ ಜಮೀನಿನಲ್ಲಿ ಪ್ರವೇಶ ಮಾಡುವುದಕ್ಕೆ ವಿರೋಧ ಮಾಡುವ ವ್ಯಕ್ತಿ ನಾನು. ಆದರೆ ನಿಮ್ಮ ನೀತಿಯಿಂದ ರಾಜಕೀಯ ಕುತಂತ್ರದಿಂದ ಯಾವ ಬಡವ ಎರಡು ಹೊತ್ತಿನ ಗಂಜಿಗೋಸ್ಕರ ಎರಡು ಮೂರು ಎಕರೆ ಜಮೀನನ್ನು ಒತ್ತುವರಿ ಮಾಡಿಕೊಂಡಿರುವಂತಹ ಜಮೀನನ್ನು. ನೀವು ಸಿ ಅಂಡ್ ಡಿ ಲ್ಯಾಂಡ್ ಎಂದು ಕರೆದು, ಸರ್ವೆ ಮಾಡದೇ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿ ಹೊರದೇಶಗಳಿಂದ, ಅಂತರರಾಷ್ಟ್ರೀಯ ಸಂಸ್ಥೆಗಳಿಂದ ಹಾಗೂ ಬೇರೆ ಬೇರೆ ಕಡೆಯಿಂದ ಕೋಟಿಗಟ್ಟಲೆ ಹಣ ಬರುತ್ತದೆ, ಗಿಡನೆಡುತ್ತೇವೆಂದು ಅದನ್ನು ಲೂಟಿ ಮಾಡಬಹುದು, ದುಡ್ಡು ಮಾಡಬಹುದು ಎಂದು ಆಸಕ್ತಿ ಇಟ್ಟುಕೊಂಡು ಮುಂದೆ ಬರತಕ್ಕಂಥ ಕೆಲವು ಭ್ರಷ್ಟ ಅಧಿಕಾರಿಗಳು ಇದ್ದಾರೆ, ಭ್ರಷ್ಟ ರಾಜಕಾರಣಿಗಳು ಇದ್ದಾರೆ. ಇಂತಹ ಸಮಯದಲ್ಲಿ ನಾನು

ಸರಕಾರಕ್ಕೆ ಆಗ್ರಹ ಮಾಡುವುದು ಇಷ್ಟೇ. ಇವತ್ತು ನಾನೊಬ್ಬನೇ ಸದಸ್ಯ ಏನೂ ಮಾಡುವುದಕ್ಕೆ ಆಗದೇ ಇರಬಹುದು, ಆದರೆ ಮಾನ್ಯ ರಾಚಯ್ಯನವರಲ್ಲಿ ನಾನು ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ, ಇವತ್ತು ಒಬ್ಬ ಪರಿಶಿಷ್ಟ ಜಾತಿ ಮಂತ್ರಿಯಾಗಿ ತಾವು ಇಲ್ಲಿದ್ದುಕೊಂಡು, ಈ ದೇಶದಲ್ಲಿ ಶೇಕಡಾ ೭೫ ಭಾಗ ಹರಿಜನರು, ದೀನದಲಿತರು ಏನು ಬಗರ್‌ಹುಕುಮ್ ಸಾಗುವಳಿ ಮಾಡುತ್ತಿದ್ದಾರೆ, ಹಿಂದುಳಿದ ವರ್ಗದ ಬಡವರು ಏನು ಎರಡು ಮೂರು ಎಕರೆಯನ್ನು ಒತ್ತುವರಿ ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ, ಆ ಜಮೀನನ್ನು ವಾಪಸ್ ಕಿತ್ತುಕೊಳ್ಳುವುದಕ್ಕೆ ಹೊರಟಿರುವಂತಹ ನಿಮ್ಮ ನೀತಿಗೆ ಧಿಕ್ಕಾರ. ಆದುದರಿಂದ ನನ್ನ ಮನಸ್ಸು ಸಮಾಧಾನಕ್ಕೋಸ್ಕರ, ಕಡುಬಡವರಿಗೆ ನೀವು ಮಾಡುತ್ತಿರುವ ಅನ್ಯಾಯ ಇಡೀ ದೇಶಕ್ಕೆ ಗೊತ್ತಾಗಬೇಕೆಂಬ ದೃಷ್ಟಿಯಿಂದ ನಾನು ಇವತ್ತು ಮತ್ತು ನಾಳೆ ಎರಡು ದಿವಸ ಇಲ್ಲಿ ನಾನು ಧರಣಿ ಕುಳಿತುಕೊಳ್ಳುತ್ತೇನೆ. ನಾನು ವೆಲ್‌ನ ಒಳಗಡೆ ಬರುವುದಿಲ್ಲ. ನಾನು ಹೆಚ್ಚು ಮಾತನಾಡುವುದಕ್ಕೆ ಇಚ್ಛೆಪಡುವುದಿಲ್ಲ, ಇವತ್ತು ನಿಮ್ಮ ನೀತಿಯನ್ನು ಪ್ರತಿಭಟನೆ ಮಾಡುವುದಕ್ಕೋಸ್ಕರ ನಾನು ಧರಣಿ ಮಾಡುತ್ತೇನೆ. ಒಳಗಡೆ ವೆಲ್‌ನಲ್ಲಿ ನಾನು ಬಂದು ಕುಳಿತರೆ ಅದು ಕಾನೂನು ಬಾಹಿರವಾಗಬಹುದು. ಆದುದರಿಂದ ರಾಜ್ಯದ ಜನತೆಗೆ ಆಗುತ್ತಿರುವ ದ್ರೋಹವನ್ನು ಪ್ರತಿಭಟನೆ ಮಾಡುವುದಕ್ಕೋಸ್ಕರ ಹಾಗೂ ನನ್ನ ಮನಸ್ಸಿನ ಸಮಾಧಾನಕ್ಕೋಸ್ಕರ ನಾನು ಇಲ್ಲಿ ಧರಣಿ ಮಾಡುತ್ತೇನೆ. ಇವತ್ತು ಎಲ್ಲರಿಗೂ ಗೊತ್ತಿದೆ, ೩೫ ಸಾವಿರ ಜನ ಶಿವಮೊಗ್ಗದಲ್ಲಿ ಸೇರಿದ್ದರು. ಎಲ್ಲ ಪಕ್ಷಕ್ಕೆ ಸೇರಿದಂಥ ಕಡುಬಡವರು ಬಂದಿದ್ದರು. ಹೊನ್ನಾಳಿ ತಾಲ್ಲೂಕಿನಲ್ಲಿ ಯಾರು ಹತ್ತು ಹನ್ನೆರಡು ವರ್ಷದಿಂದ ಸಾಗುವಳಿ ಚೀಟಿ, ಪಹಣಿ ಇಟ್ಟುಕೊಂಡು ಸಾಗುವಳಿ ಮಾಡುತ್ತಿದ್ದಾರೋ ಆ ಜಮೀನಿನಲ್ಲಿ ಗಿಡ ನೆಡುವುದಕ್ಕೆ ಪ್ರಾರಂಭ ಮಾಡಿದಾಗ, ಅಲ್ಲಿ ಎಲ್ಲಾ ಪಕ್ಷದ ಸದಸ್ಯರೂ ಸೇರಿದ್ದರು. ನಿಮ್ಮ ಅಧಿಕಾರಿಗಳು ಗಿಡ ನೆಡುವುದಕ್ಕೆ ಪ್ರಾರಂಭ ಮಾಡಿದಾಗ ಅದನ್ನು ಪ್ರತಿಭಟನೆ ಮಾಡಿ, ಹೋರಾಟ ಮಾಡಿ ಬಡವರನ್ನು ಉಳಿಸಿದೆವು. ಬಡವರ ಜಮೀನನ್ನು ಉಳಿಸಿದೆವು. ಇದರಿಂದ ೨೫-೩೦ ಸಾವಿರ ಕುಟುಂಬಗಳು ಉಳಿದವು. ನಿಮ್ಮ ವರದಿ ಪ್ರಕಾರ ಅರಣ್ಯ ಇಲಾಖೆಯ ಜಮೀನಿನಲ್ಲಿ ಅನ್ ಆಥರೈಸ್ಡ್ ಕಲ್ಟಿವೇಷನ್ ಮಾಡಿದ್ದರು ಎಂದು ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು, ಅರಣ್ಯ ಇಲಾಖೆಯ ಜಮೀನನ್ನು ಈ ವರ್ಗದವರು ಒತ್ತುವರಿ ಮಾಡಿದ್ದರೆ, ಇವತ್ತು ಸಿ ಅಂಡ್ ಡಿ ಲ್ಯಾಂಡನ್ನು ಅರಣ್ಯ ಇಲಾಖೆಗೆ ಏನು ವರ್ಗಾವಣೆ ಮಾಡುತ್ತಿದ್ದೇವೆ ಅದನ್ನು ವಾಪಸ್ ಪಡೆಯುತ್ತೇವೆ ಮತ್ತು ಇವರಿಗೇ ಖಾಯಂ ಮಾಡುತ್ತೇವೆ ಎಂದು ಹೇಳಿದರು. ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಈ ಬಿಲ್‌ನ್ನು ತರುತ್ತೇವೆ, ಇದರ ಬಗ್ಗೆ ಚರ್ಚೆ ಮಾಡುತ್ತೇವೆ ಎಂದು ಕಳೆದ ಐದಾರು ದಿವಸಗಳಿಂದ ಹೇಳಿಕೊಂಡು ಬಂದವರು, ನಾಳೆ ವಿಧಾನಸಭೆ ಮುಗಿಯುತ್ತದೆ ಎಂದಾಗ ಈ ಬಿಲ್ಲನ್ನು ಸಭೆಯ ಮುಂದೆ ಇಟ್ಟಿದ್ದೀರಿ. ಇದು ಪಾಸಾಗುತ್ತದೆ ಎಂಬ ನಂಬಿಕೆ ನನಗೆ ಇಲ್ಲ. ಇದರ ಬಗ್ಗೆ ನಾನು ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆ ಪಾಪದ ಫಲವನ್ನು ನೀವು ಊಟ ಮಾಡುತ್ತೀರಿ. ಆದರೆ ಒಂದೇ ಒಂದು ನಿಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು, ಇದರಲ್ಲಿ ರಾಜಕಾರಣ ಇಲ್ಲ, ನಾನು ಒಬ್ಬ ಶಾಸಕ ಏನು ಮಾಡಬಲ್ಲೆ? ಅಕಸ್ಮಾತ್ ಜನಕ್ಕೆ ಅನುಕೂಲ ಸಿಕ್ಕಿತು ಎಂದರೂ ಕೂಡಾ ನಮ್ಮ ಪಕ್ಷದ ೫೦ ಜನ ಆರಿಸಿಬರುತ್ತಾರೆ ಎಂಬ ವಿಶ್ವಾಸ ನನಗೆ ಇಲ್ಲ, ಜನಕ್ಕೆ ಆ ಮಟ್ಟದ ಜಾಗೃತಿ ಬಂದಿದೆ ಎಂದು ನಾನು ತಿಳಿದುಕೊಂಡಿಲ್ಲ, ಎಲ್ಲಿಯವರೆಗೆ ನಾನು ಶಾಸಕನಾಗಿ ಇರುತ್ತೇನೆಯೋ ಅಲ್ಲಿವರೆಗೆ ಬಡವರ ವಿರೋಧಿಯಾದ ಇಂತಹ ಕಾನೂನನ್ನು ಮಾಡುವುದಕ್ಕೆ ಬಿಡುವುದಿಲ್ಲ. ಇದು ನಾಚಿಕೆಗೇಡು. ನಿಮ್ಮ ನೀತಿಗೆ ಧಿಕ್ಕಾರ ಎಂದು ಹೇಳುತ್ತೇನೆ. ಈ ಬಿಲ್ ನೀವು ಪಾಸ್ ಮಾಡಿಕೊಂಡು ಹೋಗುತ್ತೀರಿ ಎಂದು ಗೊತ್ತಿದೆ, ರಾಜ್ಯದ ಕಡುಬಡವರಿಗೆ, ದೀನದಲಿತರಿಗೆ ದ್ರೋಹ ಮಾಡುತ್ತಿರುವ ಈ ಬಿಲ್‌ನ್ನು ವಾಪಸ್ ಪಡೆಯಬೇಕೆಂದು ಒತ್ತಾಯ ಮಾಡಿ, ನನ್ನ ಸಮಾಧಾನಕ್ಕೋಸ್ಕರ, ರಾಜ್ಯದ ಕಡುಬಡವರಿಗೆ ಮಾಡುತ್ತಿರುವ ಅನ್ಯಾಯಕ್ಕೆ ಧಿಕ್ಕಾರ ಎಂದು ಹೇಳಿ, ಇವತ್ತು ನಾಳೆ ಈ ಸದನದಲ್ಲಿ ನಾನು ಧರಣಿ ಕುಳಿತುಕೊಳ್ಳುತ್ತೇನೆ. ಇವತ್ತು ವೆಲ್‌ನಲ್ಲಿ ನಾನು ಕುಳಿತುಕೊಳ್ಳುವುದಿಲ್ಲ, ವೆಲ್‌ನಲ್ಲಿ ಕುಳಿತುಕೊಂಡರೆ ನನಗೆ ರಕ್ಷಣೆ ಇಲ್ಲ ಎಂದು ಗೊತ್ತಿದೆ. ನೀವು ಮಾಡುತ್ತಿರುವ ದ್ರೋಹ ಜನರಿಗೆ ಅರ್ಥವಾಗಲಿ ಎಂದು ಹೇಳಿ, ಈ ಬಿಲ್‌ನ್ನು ವಾಪಸ್ ಪಡೆಯುವವರೆಗೆ ಇಲ್ಲೇ ಧರಣಿ ಕುಳಿತುಕೊಳ್ಳುತ್ತೇನೆ. ನಾನು ವೆಲ್‌ನ ಒಳಗಡೆ ಬರುವುದಿಲ್ಲ. ಈ ಬಿಲ್ಲನ್ನು ಪಾಸ್ ಮಾಡುವುದಕ್ಕೆ ಬಿಡುವುದಿಲ್ಲ. ಇದನ್ನು ಪ್ರತಿಭಟನೆ ಮಾಡುತ್ತಾ, ನಿಮ್ಮ ನೀತಿಗೆ ಧಿಕ್ಕಾರ ಎಂದು ಹೇಳುತ್ತಾ, ಧರಣಿ ಕುಳಿತುಕೊಳ್ಳುತ್ತೇನೆ. ನಾನು ನನ್ನ ಖುರ್ಚಿಯ ಮೇಲೆ ಕುಳಿತುಕೊಳ್ಳುವುದಿಲ್ಲ,

(ಮಾನ್ಯ ಸದಸ್ಯರಾದ ಶ್ರೀ ಬಿ. ಎಸ್. ಯಡಿಯೂರಪ್ಪನವರು ತಮ್ಮ ಸ್ಥಾನದ ಪಕ್ಕದಲ್ಲಿ ನೆಲದ ಮೇಲೆ ಧರಣಿ ಕುಳಿತುಕೊಂಡರು)

ಉಪಾಧ್ಯಕ್ಷರು.— ಮಾನ್ಯ ಯಡಿಯೂರಪ್ಪನವರೇ ದಯವಿಟ್ಟು ಮೇಲೆ ಬನ್ನಿ, ಮೇಲೆ ಕೂಡಿ.

ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).— ಮಾನ್ಯ ಯಡಿಯೂರಪ್ಪನವರೇ, ಏತಕ್ಕೆ ಹೀಗೆ ಮಾಡುತ್ತೀರಿ; ಚರ್ಚೆ ಮಾಡಿ ಬಿಲ್ಲನ್ನು ವಾಪಸ್ ತೆಗೆದುಕೊಳ್ಳುತ್ತಾರಂತೆ, ಮೇಲೆ ಕುಳಿತುಕೊಳ್ಳಿ.

ಶ್ರೀ ಯು. ಭೂಪತಿ (ಸಂಡೂರು).— ಬಿಲ್ ವಾಪಸ್ ತೆಗೆದುಕೊಳ್ಳುತ್ತಾರಂತೆ, ಮೇಲೆ ಬನ್ನಿ, ಅವರು ಏನೋ ನೋಡಿಲ್ಲ, ಅಕಸ್ಮಾತ್ ತಂದುಬಿಟ್ಟಿದ್ದಾರೆ, ವಾಪಸ್ ತೆಗೆದುಕೊಳ್ಳುತ್ತಾರೆ.

ಉಪಾಧ್ಯಕ್ಷರು.— ಮಾನ್ಯ ಯಡಿಯೂರಪ್ಪನವರೇ, ಮೇಲೆ ಕುಳಿತುಕೊಳ್ಳಿ. ಡಾ॥ ತಿಮ್ಮೇಗೌಡರೇ, ತಾವು ಮಾತನಾಡಿ.

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಹುಣಸೂರು).— ಮಾನ್ಯ ಸಭಾಧ್ಯಕ್ಷರೇ,

ಉಪಾಧ್ಯಕ್ಷರು.— ಮಾನ್ಯ ಯಡಿಯೂರಪ್ಪನವರೇ ಮೇಲೆ ಬನ್ನಿ, ನಿಮ್ಮ ಆಸನದ ಮೇಲೆ ಕುಳಿತುಕೊಳ್ಳಿ ದಯವಿಟ್ಟು.

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ಅಮೆಂಡ್‌ಮೆಂಟ್‌ಗಳನ್ನು ಚರ್ಚೆ ಮಾಡತಕ್ಕ ಕಾಲದಲ್ಲಿ ಹಲವಾರು ಜನ ಸ್ನೇಹಿತರು......

(ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಶ್ರೀ ಬಿ. ಎಂ. ಇದಿನಬ್ಬ.— ಅಧ್ಯಕ್ಷರೇ, ಸಭೆ ವ್ಯವಸ್ಥಿತವಾಗಿಲ್ಲ.

ಅಧ್ಯಕ್ಷರು.— ಅವರು ಧರಣಿ ಕುಳಿತಿದ್ದರೂ ಸಹ ಸಭೆ ಆರ್ಡರ್‌ನಲ್ಲಿ ಇದೆ.

ಶ್ರೀ ಕೆ. ಬಿ. ಶಾಣಪ್ಪ.— ಸನ್ಮಾನ್ಯ ಅಧ್ಯಕ್ಷರೇ, ಅವರ ಸಮಸ್ಯೆ ಹೇಳಿದ್ದಾರೆ. ಒಳಗಡೆ ಕುಳಿತು ತಾವೂ ಅದನ್ನು ಕೇಳಿದ್ದೀರಿ. ಸದಸ್ಯರು ಕೆಳಗೆ ಕುಳಿತುಕೊಂಡು ಈ ಪ್ರಕಾರ...

ಅಧ್ಯಕ್ಷರು.—ಒಬ್ಬ ಸದಸ್ಯರು ಕೆಳಗೆ ಕುಳಿತರೂ ಕೂಡಾ ಸಭೆ ಡಿಸ್‌ಆರ್ಡರ್ ಆಗುವುದಿಲ್ಲ. ಸಭೆ ಆರ್ಡರ್‌ನಲ್ಲಿ ಇದೆ.

ಶ್ರೀ ಕೆ.ಬಿ. ಶಾಣಪ್ಪ.—ಅದು ನಮಗೆ ಚೆಂದ ಕಾಣುವುದಿಲ್ಲ.

ಅಧ್ಯಕ್ಷರು.—ನಿಮಗೆ ಚೆಂದ ಕಾಣದೇ ಹೋದರೆ ನಾನು ಏನು ಮಾಡಬೇಕು ?

ಶ್ರೀ ಕೆ.ಬಿ. ಶಾಣಪ್ಪ.—ತಾವು ದಯವಿಟ್ಟು ಅವರಿಗೆ ಹೇಳಿ.

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ, ದಯವಿಟ್ಟು ಮೇಲೆ ಬಂದು ಕುಳಿತುಕೊಳ್ಳಿ. ಮೇಲೆ ಬಂದು ಕುಳಿತುಕೊಂಡು ಏನು ಹೇಳುವುದು ಇದ್ದರೆ ಹೇಳಿ, ಕೇಳುವುದು ಇದ್ದರೆ ಕೇಳಿ. ನಾನು ಹೇಳುವುದು ಹೇಳಿದ್ದೇವೆ. ಕೇಳದೇ ಇದ್ದರೆ ಏನು ಮಾಡೋಣ ?

ಶ್ರೀ ಯು. ಭೂಪತಿ.—ಸಭೆ ಟೆಕ್ನಿಕಲೀ ಡಿಸ್‌ಆರ್ಡರ್‌ನಲ್ಲಿ ಇರದೇ ಇರಬಹುದು. ಅದನ್ನು ಒಪ್ಪಿಕೊಳ್ಳುತ್ತೇನೆ, ಆದರೆ ಅದು ಈ ಮನೆಗೆ ಲಕ್ಷಣ ಅಲ್ಲ. ತಾವು ದಯವಿಟ್ಟು ಕನ್‌ವಿನ್ಸ್ ಮಾಡಬೇಕು. ಮಂತ್ರಿಗಳಿಗೆ ಹೇಳಬೇಕು. ಈ ಬಿಲ್ಲನ್ನು ವಾಪಸ್ ತೆಗೆದುಕೊಂಡುಬಿಡಿ ಎಂದು ಹೇಳಬೇಕು.

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ, ತಮ್ಮ ಸೀಟಿಗೆ ಬಂದು ಕುಳಿತುಕೊಳ್ಳಿ. ತಾವು ಕೂಡದೇ ಇದ್ದರೆ ಅನಿವಾರ್ಯವಾಗಿ ಸಭೆ ನಡೆಸಬೇಕಾಗುತ್ತದೆ.

ಶ್ರೀ ಯು. ಭೂಪತಿ.—ಮಾನ್ಯ ಮಂತ್ರಿಗಳಿಗೆ ವಾಪಸ್ ತೆಗೆದುಕೊಳ್ಳಿ ಎಂದು ತಾವು ಹೇಳಬೇಕು.

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ, ತಾವು ಸೀಟ್‌ಗೆ ಬಂದು ಕುಳಿತುಕೊಳ್ಳಿ. ನೀವು ನಿಮ್ಮ ಸೀಟಿಗೆ ಬರದಿದ್ದರೆ ನಾವು ಸಭೆ ನಡೆಸಬೇಕಾಗುತ್ತದೆ. ಮಾನ್ಯ ಯಡಿಯೂರಪ್ಪನವರೇ,

ತಾವು ತಮ್ಮ ಸೀಟ್‌ನಲ್ಲಿ ಒಂದು ಕುಳಿತುಕೊಳ್ಳಿ. ತಾವು ಈ ಕಡೆ ನೋಡುವುದಕ್ಕೂ ತಯಾರು ಇಲ್ಲ, ನಾನು ಏನು ಹೇಳುತ್ತೇನೆ ಎನ್ನುವುದನ್ನು ಕೇಳುವುದಕ್ಕೂ ತಯಾರು ಇಲ್ಲ. I am requesting the hon. member to take his seat.

SRI B.A. UMARABBA.—At the same time, I request your honour to advise the government to take his advice. ಅದನ್ನಾದರೂ ತಾವು ಮಾಡ ಬೇಕಲ್ಲಾ.

ಅಧ್ಯಕ್ಷರು.—ಬಡವರ ಬಗ್ಗೆ ನಮಗೂ ಕಾಳಜಿ ಇದೆ. ಬಡವರು ಅರಣ್ಯ ಪ್ರದೇಶದಲ್ಲಿ ಕಟ್ಟಿ ಕೊಂಡಿರುವ ಮನೆಯನ್ನು ವಕ್ಕಲೆಬ್ಬಿಸಬಾರದೆಂದು ಇದೆ. Government is taking the advise of all the hon. members. You take note of the advice of Sri Yediyurappa.

ಶ್ರೀ ಕೆ.ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ಇದರಿಂದ ಲಕ್ಷಾಂತರ ಜನ ಬಡವರಿಗೆ ಅನ್ಯಾಯ ವಾಗುತ್ತದೆ. ಇದು ಸರ್ಕಾರಕ್ಕೂ ಗೊತ್ತಿದೆ. ಸಿ ಅಂಡ್ ಡಿ ಲ್ಯಾಂಡ್ ಅನೇಕ ಕಡೆ ಇದೆ. ಇದರಿಂದ ತೊಂದರೆಯಾಗುತ್ತದೆ. ಆದ್ದರಿಂದ ವಾಪಸ್ಸು ತೆಗೆದುಕೊಳ್ಳಲಿ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ೧೯೭೮ರ ಆಚೆಗೆ ಯಾರ್‍ಯಾರು ಬಡವರು ಇಂತಹ ಜಮೀನನ್ನು ಒತ್ತುವರಿ ಮಾಡಿದ್ದಾರೋ ಯಾರ್‍ಯಾರು ಆಕ್ರಮಿಸಿಕೊಂಡಿದ್ದಾರೋ ಅದು ರಿಜರ್ವ್ ಫಾರೆಸ್ಟ್ ಬಿಟ್ಟು ಬೇರೆ ರೆವಿನ್ಯೂ ಲ್ಯಾಂಡ್ ಆಗಿರಬಹುದು ಅಥವಾ ಸಿ ಅಂಡ್ ಡಿ ಲ್ಯಾಂಡ್ ಆಗಿರ ಬಹುದು ಅಂತಹದ್ದನ್ನು ಒತ್ತುವರಿ ಮಾಡಿದ್ದರೆ ಅದನ್ನು ನಾವು ತೆಗೆದುಕೊಳ್ಳುವುದಿಲ್ಲ. ಈ ಆಕ್ಟ್ ಜಾರಿಗೆ ಬರತಕ್ಕಂಥಾದ್ದು ಮುಂದಿನ ಸಾಲಿನಿಂದ ಯಾರ್‍ಯಾರು ಆಕ್ಯುಪೈ ಮಾಡಿದ್ದಾರೆ, ಯಾರ್‍ಯಾರು ಅನ್ ಅಥರೈಜ್ಡ್ ಆಗಿ ಸಿ ಅಂಡ್ ಡಿ ಲ್ಯಾಂಡ್‌ನಲ್ಲಿ ಮತ್ತು ರೆವಿನ್ಯೂ ಲ್ಯಾಂಡ್‌ನಲ್ಲಿ ಇದ್ದಾರೋ ಅವರನ್ನು ಅಲ್ಲಿಯೇ ಕನ್‌ಫರ್ಮ್ ಮಾಡುತ್ತೇವೆ. ಯಾರನ್ನೂ ಅಲ್ಲಿಂದ ವಕ್ಕಲೆಬ್ಬಿಸುವುದಿಲ್ಲ. ಈ ಆಶ್ವಾಸನೆಯನ್ನು ನಾನು ಕೊಡುತ್ತಿದ್ದೇನೆ. ಮಾನ್ಯ ಸದಸ್ಯರಾದ ಶ್ರೀ ಯಡಿಯೂರಪ್ಪನವರು ಅವರ ಸ್ಥಾನಕ್ಕೆ ಬರಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಬಿ. ಶಾಣಪ್ಪ.—ಹಿಂದೆ ೧೯೭೮ ಎಂದು ಹೇಳಿದ್ದುಂಟು.

ಅಧ್ಯಕ್ಷರು.—ಮಾನ್ಯ ಮಂತ್ರಿಗಳೇ, ಮಾನ್ಯ ಯಡಿಯೂರಪ್ಪನವರು ಏನು ಸಲಹೆ ಕೊಟ್ಟಿ ದ್ದಾರೋ ಅದನ್ನು ಕನ್ಸಿಡರ್ ಮಾಡುತ್ತೇವೆಂದು ಹೇಳಿ. ಅಥವಾ ಕ್ಯಾಬಿನೇಟ್‌ನಲ್ಲಿ ಇಟ್ಟು ಎಕ್ಸಾಮಿನ್ ಮಾಡುತ್ತೇವೆಂದಾದರೂ ಹೇಳಿ.

ಶ್ರೀ ಬಿ. ರಾಚಯ್ಯ.—ಅವರು ಅನ್ಯಾಯವಾಗುತ್ತದೆಂದು ಭಾವಿಸಿದ್ದಾರೆ. ಆದರೆ ಅನ್ಯಾಯ ವಾಗುವುದಿಲ್ಲವೆಂದು ಹೇಳಿದ್ದೇನೆ.

ಶ್ರೀ ಯು. ಭೂಪತಿ.—ಕಾನೂನಿನಲ್ಲಿ ತೊಡಕು ಇದೆ. ಬಡವರಿಗೆ ಅನುಕೂಲವಾಗು ವುದಿಲ್ಲ.

ಅಧ್ಯಕ್ಷರು.—ಅಲ್ಲ ನೀವು ಇದನ್ನು ಎಕ್ಸಾಮಿನ್ ಮಾಡುತ್ತೇವೆಂದಾದರೂ ಹೇಳಿ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಎಲ್ಲಾ ಮಾನ್ಯ ಸದಸ್ಯರು ಹೇಳಿದಹಾಗೆ ಈ ಕಾಯ್ದೆ ಜಾರಿಗೆ ಬಂದರೆ ತೊಂದರೆ ಇದೆ. ಮತ್ತೆ ಅಂಕಿಅಂಶಗಳನ್ನು ನೋಡಿದರೆ ಧಾರವಾಡ ಜಿಲ್ಲೆಗೆ ಹೆಚ್ಚು ತೊಂದರೆ ಇದೆ. ಅದಕ್ಕೆ ತಾವು ಅವರಿಗೆ ಅಡ್ವೈಸ್ ಮಾಡಿ. ಕಾನೂನಿನಲ್ಲಿ ಏನಿದೆ ಎಂದರೆ in future it may come into force. That is not so. It is stated "any other land entrusted to forest department for the purpose of afforestation.". It means past tense. ಅದಕ್ಕೆ ವಾಪಸ್ ತೆಗೆದುಕೊಳ್ಳುವುದಕ್ಕೆ ಹೇಳಿ.

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ, ಸ್ವಲ್ಪ ಕೇಳಿ. ರೈತರ ಬಗ್ಗೆ ಬಡವರ ಬಗ್ಗೆ ನನಗೂ ಕಾಳಜಿ ಇದೆ. ನೀವೊಂದು ಕೆಲಸ ಮಾಡಿ. ಈ ಸಂಬಂಧವಾಗಿ ಒಂದು ಪಿಟೀಷನ್ ಕೊಡಿ.

ನಾಗಬೇಕು ಎಂದು ನಾನು ಪಿಟಿಷನ್ ಕಮಿಟಿಗೆ ಹಾಕುತ್ತೇನೆ. ಅವರು ಎನ್‌ಕ್ವೈರಿ ಮಾಡಿ ವರದಿ ಕೊಟ್ಟ ಮೇಲೆ ಸರ್ಕಾರದವರು ಅದರಂತೆ ಮಾಡುತ್ತಾರೆ.

ಶ್ರೀ ಯು. ಭೂಪತಿ.—ಪಿಟಿಷನ್ ಏತಕ್ಕೆ ಅಧ್ಯಕ್ಷರೇ ? ವಿರೋಧ ಪಕ್ಷದವರೆಲ್ಲರನ್ನು ಕರೆಸಿ ಈ ಬಗ್ಗೆ ಚರ್ಚೆ ಮಾಡಲಿ.

ಅಧ್ಯಕ್ಷರು.—ಪಿಟೀಷನ್ ಕಮಿಟಿಯವರಿಗೆ ಒಂದು ವಾರದಲ್ಲಿ ಎನ್‌ಕ್ವೈರಿ ಮಾಡಿ ಎಂದು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ನಾನು ಉತ್ತರ ಕೊಡತಕ್ಕಂಥ ಕಾಲದಲ್ಲಿ ಸೆಕ್ಷನ್ ...ಳರಲ್ಲಿ ಇರತಕ್ಕಂಥ "any other land entrusted to the forest department for the purpose of afforestation." ಇದನ್ನು ಓಮಿಟ್ ಮಾಡುವುದಕ್ಕೆ ಹೇಳುತ್ತೇನೆ. ...ಗ ಈ ಸಮಸ್ಯೆ ಉದ್ಭವವಾಗುವುದಿಲ್ಲ.

೩.೦೦ ಪಿ.ಎಂ.

ಅಧ್ಯಕ್ಷರು.— ಮಾನ್ಯ ಭೂಪತಿಯವರೇ, ಇನ್ನೂ ಏನಾದರೂ ಸಲಹೆ ಸೂಚನೆಗಳಿದ್ದರೆ ಅವರು ಒಂದು ಪಿಟಿಷನ್ ಕೊಡಲಿ. ಅದನ್ನು ಪಿಟಿಷನ್ ಕಮಿಟಿಗೆ ರೆಫರ್ ಮಾಡುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಮಾನ್ಯ ಸಚಿವರು ಮಾನ್ಯ ಯಡಿಯೂರಪ್ಪನವರು ಹೇಳಿರುವ ಪದಗಳನ್ನು ವಿತ್‌ಡ್ರಾ ಮಾಡಿಕೊಳ್ಳಲಾಗಿದೆಯೆಂದು ಹೇಳಿದ ಮೇಲೆ ಆಯಿತಲ್ಲಾ.

ಶ್ರೀ ಯು. ಭೂಪತಿ.— ಮಾನ್ಯ ಅಧ್ಯಕ್ಷರೇ, ತಾವು ಹೇಳುವುದು ನೂರಕ್ಕೆ ನೂರರಷ್ಟು ಸರಿಯಾಗಿದೆ. ಆದರೆ, ಇದರ ಬಗ್ಗೆ ಏನಾಗಿದೆ ಎಂದರೆ, ಸಂಬಂಧಪಟ್ಟ ಇಲಾಖೆಗಳ ಆಫೀಸರ್‌ಗಳಿಗೇ ಸಾಕಷ್ಟು ಕನ್‌ಫ್ಯೂಷನ್ ಇದೆ. ಸೆಕ್ರೆಟರಿಗಳಿಂದ ಹೋಗುವ ಸರ್ಕ್ಯುಲರ್‌ಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಡಿವಿಷನಲ್ ಲೆವಲ್ ಆಫೀಸರ್‌ಗಳಲ್ಲಿ ಬಹಳ ಕನ್‌ಫ್ಯೂಷನ್ ಆಗುತ್ತದೆ. ಈ ಬಿಲ್‌ನ್ನು ಇವತ್ತೇ ಪಾಸ್ ಮಾಡಿಕೊಳ್ಳಬೇಕೆಂದೇನೂ ಇಲ್ಲ. ನಾಳೆ ಬೇಕಾದರೆ ಪುನರ್ ಪರಿಶೀಲನೆ ಮಾಡಿಕೊಂಡು ಬರಲಿ. ಅಥವಾ ಮುಂದಿನ ಅಧಿವೇಶನದಲ್ಲಿ ಇದನ್ನು ಪಾಸ್ ಮಾಡಿಕೊಳ್ಳಲಿ. ಈ ಬಿಲ್‌ನ್ನು ಪುನಃ ಸದನದ ಮುಂದೆ ತರುವ ಮೊದಲು ವಿರೋಧ ಪಕ್ಷದವರನ್ನೂ ಕರೆದು ಮಾತನಾಡಿ ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದು.

ಶ್ರೀ ಬಿ. ರಾಚಯ್ಯ.— ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಏನು ಸಮಸ್ಯೆಯನ್ನು ಎತ್ತಿದ್ದಾರೋ ಅದನ್ನು ನಾನು ವಿತ್‌ಡ್ರಾ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.— ಮಾನ್ಯ ಯಡಿಯೂರಪ್ಪನವರೇ, ತಾವು ಹೇಳಿರುವ ವಿಷಯವನ್ನು ಮಾನ್ಯ ಮಂತ್ರಿಯವರು ವಾಪಸ್ ತೆಗೆದುಕೊಂಡಿದ್ದಾರೆ. ತಾವು ಇನ್ನು ಏನಾದರೂ ಹೇಳುವುದಿದ್ದರೆ, ಅನನ್ನು ಪಿಟಿಷನ್ ಮೂಲಕ ಕೊಡಿ. ಅದನ್ನು ನಾನು ಪಿಟಿಷನ್ ಕಮಿಟಿಗೆ ರೆಫರ್ ಮಾಡುತ್ತೇನೆ. ೮-೧೦ ದಿವಸಗಳೊಳಗೆ ಪಿಟಿಷನ್ ಕಮಿಟಿಯವರು ಪರಿಶೀಲನೆ ಮಾಡಿ ಒಂದು ರೆಕಮೆಂಡೇಷನ್ ಕೊಡಲಿ. ಆ ಮೇಲೆ ನೋಡೋಣ. ಈಗ ತಾವು ನಿಮ್ಮ ಸ್ಥಳಕ್ಕೆ ಬಂದು ಕೂಡಿ.

ಶ್ರೀ ಯು. ಭೂಪತಿ.— ಇಡೀ ಬಿಲ್‌ನ್ನು ವಿತ್‌ಡ್ರಾ ಮಾಡಿಕೊಳ್ಳಿ ಎಂದು ನಾವು ಹೇಳುತ್ತಿಲ್ಲ. ಇದರಲ್ಲಿ ಒಂದು ಕನ್‌ಫ್ಯೂಷನ್ ಏನಾಗಿದೆ ಎಂದರೆ,

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ಮಾನ್ಯ ಅಧ್ಯಕ್ಷರೇ. ಮಾನ್ಯ ಯಡಿಯೂರಪ್ಪನವರು ಹೇಳಿರುವ ಪದಗಳನ್ನು ವಿತ್‌ಡ್ರಾ ಮಾಡಿಕೊಳ್ಳುತ್ತೇನೆಂದು ಮಾನ್ಯ ಅರಣ್ಯ ಸಚಿವರು ಹೇಳಿರುವುದರಿಂದ ಪುನಃ ಪಿಟಿಷನ್ ಕೊಡುವ ಅಗತ್ಯ ಇಲ್ಲವೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು.— ಇನ್ನೂ ಏನಾದರು ಸಮಸ್ಯೆ ಇದ್ದರೆ, ಅವರು ಪಿಟಿಷನ್ ಕೊಡಲಿ. ಮಾನ್ಯ ಸಚಿವರು ಅದನ್ನು ಎಕ್ಸಾಮಿನ್ ಮಾಡುತ್ತಾರೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ಸಿ. ಮತ್ತು ಡಿ. ಲ್ಯಾಂಡ್‌ನಲ್ಲಿ ಯಾರಾದರೂ ಬಗರ್ ಹುಕುಂ ಸಾಗುವಳಿ ಮಾಡಿದ್ದರೆ ಅಂಥಾ ಲ್ಯಾಂಡ್‌ನ್ನು ಉಳಿಸಿಕೊಂಡು ಮಿಕ್ಕ ಲ್ಯಾಂಡನ್ನು ಅಫೋರ್

ಸ್ಟೇಷನ್ ಮಾಡುವುದಕ್ಕೆ ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಕೊಡಲಾಗುತ್ತದೆಂದು ಹೇಳಿದ್ದಾರೆ. ಈ ಬಿಲ್‌ನಲ್ಲಿ ಇರುವ ಒಂದು ವಾಕ್ಯದ ಬಗ್ಗೆ ನನಗೂ ಬಹಳ ತೀವ್ರವಾದ ಆಸಕ್ತಿ ಇತ್ತು. ಅದರ ಬಗ್ಗೆ ನಾನು ಮಾತನಾಡಬೇಕೆಂದು ಎದ್ದು ನಿಂತಿದ್ದೆ. ಮಾನ್ಯ ಸಚಿವರು, ಮಾನ್ಯ ಯಡಿಯೂರಪ್ಪನವರು ಸೂಚನೆ ನೀಡಿದ ಪ್ರಕಾರ ಆ ವಾಕ್ಯವನ್ನು ವಿತ್‌ಡ್ರಾ ಮಾಡಿಕೊಂಡಿದ್ದೇನೆ ಎಂದು ಹೇಳಿರುವುದರಿಂದ ಸರಿ ಹೋಯಿತು. ಸಿ. ಮತ್ತು ಡಿ. ಫಾರೆಸ್ಟ್ ಲ್ಯಾಂಡ್‌ನಲ್ಲಿ ಬಗರ್‌ಹುಕುಂ ಸಾಗುವಳಿಯಾಗಿದ್ದರೆ, ಆ ಲ್ಯಾಂಡನ್ನು ರೆವಿನ್ಯು ಡಿಪಾರ್ಟ್‌ಮೆಂಟ್‌ಗೆ ವರ್ಗಾವಣೆ ಮಾಡಿಕೊಡಬೇಕು. ಬಗರ್‌ಹುಕುಂ ಸಾಗುವಳಿ ಮಾಡಿರುವ ಲ್ಯಾಂಡನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಸೇರಿಸಿಕೊಂಡು ಬಿಟ್ಟಿದ್ದರೆ ಬಡ ರೈತರುಗಳಿಗೆ ಬಹಳ ಅನ್ಯಾಯ ಮಾಡಿದ ಹಾಗೆ ಆಗುತ್ತಿತ್ತು. ಮಾನ್ಯ ಸಚಿವರು ವಿತ್‌ಡ್ರಾ ಮಾಡಿಕೊಳ್ಳುವ ಬಗ್ಗೆ ಆಶ್ವಾಸನೆ ಕೊಟ್ಟಿರುವುದರಿಂದ ಮಾನ್ಯ ಯಡಿಯೂರಪ್ಪನವರು ಸಮಾಧಾನದಿಂದ ತಮ್ಮ ಸ್ಥಳಕ್ಕೆ ಬಂದು ಕುಳಿತುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎ. ಉಮರಬ್ಬ.— ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಮಾನ್ಯ ಸಚಿವರಾದ ರಾಚಯ್ಯನವರು ಒಂದು ಮಾತನ್ನು ಹೇಳಿದ್ದಾರೆ. ಯಾರಿಗೂ ಅನ್ಯಾಯ ಮಾಡುವ ಉದ್ದೇಶ ಸರ್ಕಾರಕ್ಕಿಲ್ಲ ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ವರ್ಗದ ಜನತೆಗಳಿಗೆ ಅನ್ಯಾಯ ಮಾಡುವುದಲ್ಲವೆಂದು ತಾವು ಹೇಳಿದ್ದೀರಿ. ಬಡ ಜನರಿಗೆ ಅನ್ಯಾಯ ಮಾಡುವಂತಹ ಒಂದು ಕೆಲಸವನ್ನು ಈ ಬಿಲ್ಲಿನ ಮೂಲಕ ಅವರು ತರಲಿಕ್ಕಿಲ್ಲ. ಇದೇ ಸಂದರ್ಭದಲ್ಲಿ ಮಾನ್ಯ ಯಡಿಯೂರಪ್ಪನವರು ಕುಳಿತಿದ್ದಾರೆ. ಅವರು ಎಷ್ಟರಮಟ್ಟಿಗೆ ಭಾವೋದ್ವೇಗಕ್ಕೆ ಒಳಗಾಗಿದ್ದಾರೆಂದರೆ, ಅವರು ಮಾತನಾಡುವಾಗ ಅವರ ಕಣ್ಣಲ್ಲಿ ನೀರು ಹನಿಗಳು ಸಹ ಬಂದುವು. ಇದನ್ನು ನೋಡಿದರೆ ಈ ವಿಚಾರದ ಬಗ್ಗೆ ಎಲ್ಲೋ ಒಂದು ಕಡೆ ಸಂದಾನದ ಬಗ್ಗೆ ಬಿಗಿ ಆಗಿದೆ ಎಂದು ವ್ಯಕ್ತವಾಗುತ್ತದೆ. ಬಿಲ್ ವಾಪಸ್ಸು ತೆಗೆದುಕೊಳ್ಳದೆ ಮಾನ್ಯ ಯಡಿಯೂರಪ್ಪನವರು ಬರುವುದಿಲ್ಲ, ಮಾನ್ಯ ಯಡಿಯೂರಪ್ಪನವರು ಬಾರದೆ ಈ ಬಿಲ್ ಏಕೋ ಮೂವ್ ಆಗುತ್ತಾ ಇಲ್ಲ. ಭವಿಷ್ಯ ನಿಮ್ಮ ಕೈಯಲ್ಲಿದೆ ನಾನು ವರ್ತಮಾನದ ವಿಚಾರ ಹೇಳಿದ್ದೇನೆ.

ಮೊನ್ನೆ ಶಿಕ್ಷಣ ಸಚಿವರು ಸದನದಲ್ಲಿ ಅಮೆಂಡ್‌ಮೆಂಟ್ ಬಿಲ್ಲನ್ನು ತಂದರು. ಆಗ ನಾವು ಅದರ ಬಗ್ಗೆ ಕೆಲವು ಲೋಪದೋಷಗಳನ್ನು ಹಾಗೂ ಅನುಮಾನಗಳನ್ನು ವ್ಯಕ್ತ ಮಾಡಿದ್ದೆವು. ಅದಕ್ಕೆ ಅವರು ಮನ್ನಣೆ ಕೊಟ್ಟು ಮತ್ತೊಮ್ಮೆ ಮಂಡಿಸುವ ಪ್ರಯತ್ನ ಮಾಡಿದ್ದರು. ಈ ಬಿಲ್‌ನಲ್ಲಿಯೂ ಕೂಡ ಹಾಗೆ ಏನಾದರೂ ಇದ್ದರೆ, ಈಗ ಸಧ್ಯಕ್ಕೆ ಈ ಬಿಲ್‌ನ್ನು ವಾಪಸ್ಸು ತೆಗೆದುಕೊಂಡು ಅಗತ್ಯವಿದ್ದರೆ ತಮ್ಮ ಚೇಂಬರ್‌ನಲ್ಲಿಯೋ, ಸಚಿವರ ಚೇಂಬರ್‌ನಲ್ಲಿಯೋ ಕುಳಿತುಕೊಂಡು ಈ ಬಗ್ಗೆ ಮಾತುಕತೆ ನಡೆಸಿ ಒಂದು ಇತ್ಯರ್ಥಕ್ಕೆ ಬರಬಹುದು.

ಅಧ್ಯಕ್ಷರು — ಮಾನ್ಯ ಸದಸ್ಯರು ಧರಣಿ ಕುಳಿತುಕೊಂಡರು ಎಂದು ಇವೊತ್ತಿನ ಬಿಲ್ಲನ್ನು ನಾಳೆ ಹಾಕುವುದಕ್ಕೆ ಬರುವುದಿಲ್ಲ. ಈಗಾಗಲೇ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದಾರೆ, ನಾನು ಕೂಡ ಆ ಬಗ್ಗೆ ಹೇಳಿದ್ದೇನೆ. ಅವರು ಏನಾದರೂ ಸಮಸ್ಯೆಗಳು ಆ ಬಗ್ಗೆ ಇದ್ದರೆ ಪಿಟಿಷನ್ ಕೊಡಲಿ. ಅದನ್ನು ಎಕ್ಸಾಮಿನ್ ಮಾಡುತ್ತೇನೆ. ಅವರು ರೆಕಮೆಂಡೇಶನ್ ಮಾಡುವುದಕ್ಕೆ ನಾನು ಹೇಳುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.— ಮಾನ್ಯ ಅಧ್ಯಕ್ಷರೇ, ತಾವುಗಳು ಈ ಬಿಲ್‌ನ ಬಗ್ಗೆ ಹೇಳಿದ್ದೀರಿ. ಬಿಲ್‌ನ ಉದ್ದೇಶ ಕೂಡ ನಮಗೆ ಗೊತ್ತಾಗಿದೆ. ಆದರೂ ಕೂಡ ಈ ಬಿಲ್‌ನ್ನು ಇನ್ನೂ ಸ್ವಲ್ಪ ಕ್ಲಾರಿಫಿಕೇಷನ್ ಜೊತೆಗೆ ತೆಗೆದುಕೊಂಡು ಬಂದರೆ, ನಾವೆಲ್ಲರೂ ಇದನ್ನು ಕುಳಿತು ಚರ್ಚೆ ಮಾಡಿ, ಯಾವ ವಿಷಯದಲ್ಲಿ ತರಾತುರಿ ಇದೆಯೆಂದು ತಿಳಿದುಕೊಂಡು ಸೂಕ್ತ ತಿದ್ದುಪಡಿ ಮಾಡುವುದಕ್ಕೆ ಅವಕಾಶ ಆಗುತ್ತದೆ. ಸಧ್ಯ ಈ ಬಿಲ್‌ನಲ್ಲಿ ಎಸ್.ಸಿ. ಮತ್ತು ಎಸ್.ಟಿ. ಯವರಿಗೆ, ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ತ್ರಾಸ ಇದೆ ಎಂದು ತಾವು ಹೇಳಿದ್ದೀರಿ. ಅದನ್ನೆಲ್ಲಾ ಡಿಲೀಟ್ ಮಾಡುತ್ತೇವೆ ಎಂದು ಕೂಡ ಹೇಳಿದ್ದಾರೆ. ಇಷ್ಟೆಲ್ಲಾ ಆದ ಮೇಲೆ ಅದಕ್ಕಾಗಿ ತಾವು ಇಷ್ಟು ಹರಿಬರಿ ಆಗಿ ಇದನ್ನು ಪ್ರೆಸ್ ಮಾಡಿ ಪಾಸ್ ಮಾಡುವ ಬದಲು ಇನ್ನೊಂದು ಸಲ ನಾವೆಲ್ಲರೂ ಕುಳಿತು ಚರ್ಚೆ ಮಾಡೋಣ, ಬಿಲ್‌ನ್ನು ವಿಥ್‌ಡ್ರಾ ಮಾಡುವುದು ಬೇಡ. ಗದ್ದಲದಲ್ಲಿ, ಗಡಿಬಿಡಿಯಲ್ಲಿ ಇದನ್ನು ಪಾಸ್ ಮಾಡುವುದು ಬೇಡ ಎಂದು ನನ್ನ ಅಭಿಪ್ರಾಯವಾಗಿದೆ,

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಅಧ್ಯಕ್ಷರೇ, ನಾನು ಪ್ರಾರಂಭ ಮಾಡುವಾಗಲೆ ಈ ಬಗ್ಗೆ ಹೇಳಿದ್ದೇನೆ. ಸೆಕ್ಷನ್ ೬೪ಎ ಇದು ಸ್ವಲ್ಪ ಕಾಂಪ್ಲಿಕೇಟೆಡ್ ಇದೆ ಎಂದು ಹೇಳಿದ್ದೇನೆ

ಅಲ್ಲಿಯ ಲಾಸ್ಟ್ ಸೆಂಟೆನ್ಸ್‌ನಲ್ಲಿಯೇ ಇದು ಸ್ವಲ್ಪ ಜಾಸ್ತಿ ಬರುವುದು. ವಿಶೇಷತಃ ಸಿ. ಮತ್ತು ಡಿ. ಕ್ಲಾಸ್ ಲ್ಯಾಂಡ್ ವಿಚಾರದಲ್ಲಿ ಈ ಸಮಸ್ಯೆಯು ಬರುತ್ತದೆ. ಆದುದರಿಂದ ಈ ಡಿಸ್‌ಕಷನ್ ಈಗ ಅಪೂರ್ಣವಾಗಿ ಇರಲಿ. ಬಿಲ್‌ನ್ನು ವಿಥ್‌ಡ್ರಾ ಮಾಡುವುದು ಬೇಡ. ನಾಳೆ ಬೇಕಾದರೆ ಲಾ ಡಿಪಾರ್ಟ್‌ಮೆಂಟ್‌ನವರ ಜೊತೆಗೆ ಕನ್ಸಲ್ಟ್ ಮಾಡಿ ಯಾವರೀತಿಯಾಗಿ ಈ ಸಿ ಮತ್ತು ಡಿ ಲ್ಯಾಂಡ್‌ನಲ್ಲಿ ಈಗಾಗಲೇ ಎನ್‌ಕ್ರೋಚ್‌ಮೆಂಟ್ ಮಾಡಿಕೊಂಡಿದ್ದವರಿಗೆ ಪರಿಹಾರ ಮಾಡುವುದಕ್ಕೆ ಸಾಧ್ಯ ಎಂದು ನೋಡಬಹುದಾಗಿದೆ. ಅಂಥವರು ಯಾರಿದ್ದಾರೆ, ಅವರಿಗೆ ಯಾವರೀತಿಯಾಗಿ ಬೆನಿಫಿಟ್ ಕೊಡಬೇಕೆಂದು ಯೋಚನೆ ಮಾಡಿ, ಅದಕ್ಕೆ ಬೇಕಾದರೆ ಒಂದು ಅಮೆಂಡ್‌ಮೆಂಟ್‌ನ್ನು ತಂದು, ಇಲ್ಲಿ ನಾಳೆಯೇ ಬೇಕಾದರೆ ಪಾಸ್ ಮಾಡೋಣ. ಆದುದರಿಂದ ಇದನ್ನು ಇನ್ನೊಮ್ಮೆ ರೀಕನ್ಸಿಡರ್ ಮಾಡಿ, ಇದನ್ನು ನಾವು ಬೇಸಿಕಲೀ ಮೊದಲು ರೈಸ್ ಮಾಡಿದ್ದೆವು. ಈಗ ಹಲವಾರು ಮಾನ್ಯ ಸದಸ್ಯರು ಈ ಸಮಸ್ಯೆಗಳ ಬಗ್ಗೆ ಮಾತನಾಡಿದ ಮೇಲೆ, ಚರ್ಚೆಯಾದ ಮೇಲೆ, ಇನ್ನೂ ಕೆಲವು ತೊಂದರೆಗಳು ಅದರಲ್ಲಿ ಇರುವುದು ಕಂಡು ಬಂತು. ಆದುದರಿಂದ ಈ ಬಗ್ಗೆ ಪುನಃ ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಸೆಕ್ಷನ್ ೭೯ಎನಲ್ಲಿ ಏನು ವಿಷಯಗಳು ಇದ್ದಾವೆ, ಅದರ ಬಗ್ಗೆ ಮಾನ್ಯ ಸದಸ್ಯರುಗಳು ಏನು ಆತಂಕವನ್ನು ವ್ಯಕ್ತಮಾಡಿದ್ದಾರೆ, ಆ ಬಗ್ಗೆ ನಾನು ಮೊದಲೇ ಅಧಿಕಾರಿಗಳನ್ನು ಕನ್‌ಸಲ್ಟ್ ಮಾಡಿದ್ದೆನು. ಇದರಿಂದ ಬಡವರಿಗೆ ತೊಂದರೆಯಾಗುವ ಬಗ್ಗೆ ಅವರಿಗೆ ಹೇಳಿದೆ. ಆ ಬಡವರ ಮನೆಯ ಮುಂದೆ ಫಾರೆಸ್ಟ್‌ನವರು ಬಂದು ತೊಂದರೆ ಕೊಡುತ್ತಿದ್ದಾರೆ ಎಂದು ಕಳೆದೆರಡು ತಿಂಗಳುಗಳಿಂದ ನನಗೆ ಜನರಿಂದ ಅರ್ಜಿಗಳು ಬರುತ್ತಿವೆ ಎಂಬ ವಿಷಯ ಗೊತ್ತಿದೆ. ಸಿ ಮತ್ತು ಡಿ ಲ್ಯಾಂಡ್‌ನ್ನು ಇವೊತ್ತು ಸುಮಾರು ೮ ಲಕ್ಷ ಹೆಕ್ಟೇರ್‌ಗಳನ್ನು ಟ್ರಾನ್ಸ್‌ಫರ್ ಮಾಡಬೇಕಾಗಿತ್ತು. ಆದರೆ ಈಗ ಆಕ್ಚುಯಲ್ ಆಗಿ ನೋಟಿಫೈ ಆಗಿರುವುದು ಕೇವಲ ಎರಡೂವರೆ ಲಕ್ಷ ಹೆಕ್ಟೇರ್‌ಗಳು ಮಾತ್ರ. ೫ ಜಿಲ್ಲೆಗಳಲ್ಲಿ ಅಧಿಕಾರಿಗಳನ್ನು, ತಾಲ್ಲೂಕು ವೈಸ್ ಎಂಎಲ್‌ಎಗಳನ್ನು ಮಾಡಿದ್ದೇವೆ ಅವರೂ ಕೂಡ ಹೋಗಿ ನೋಡುತ್ತಾರೆ. ಹಿಂದಿದ್ದನ್ನು ಹಾಗೆ ಉಳಿಸಿಕೊಳ್ಳಬೇಕು. ಅದನ್ನು ಬಿಡಿಸಿ ಕೊಳ್ಳುವುದಿಲ್ಲ, ಬೇರೆ ಎಲ್ಲರೂ ಇದರ ಬಗ್ಗೆ ಒಪ್ಪಿಗೆ ತಳೆದರೆ ಮಾತ್ರ ಮುಂದೆ ನೋಟಿಫಿಕೇಷನ್ ಇಶ್ಯೂ ಮಾಡಲಾಗುವುದು. ಇದು ಬಿಟ್ಟು ಬೇರೆ ಸೆಕ್ಷನ್‌ಗಳನ್ನು ಅಗತ್ಯವಾಗಿ ಮಾಡಬೇಕು. ೭೯(ಎ) ಅನ್ನು ಬಿಡುತ್ತೇನೆ. ಇಷ್ಟೆಲ್ಲಾ ಕಾಂಪ್ಲಿಕೇಷನ್ ಆಗುತ್ತದೆ ಅಂತ ಗೊತ್ತಿರಲಿಲ್ಲ. ಶ್ರೀ ಯಡಿಯೂರಪ್ಪನವರು ಬಡವರಿಗೆ ತೊಂದರೆಯಾಗುತ್ತದೆ ಅನ್ಯಾಯವಾಗುತ್ತದೆ, ಎಂದು ಇಷ್ಟು ಹೊತ್ತು ಇಲ್ಲಿ ಕುಳಿತುಕೊಂಡರು ನಾವು ಕೂಡ ಇಪ್ಪತ್ತು ಮೂವತ್ತು ವರ್ಷಗಳಿಂದ ಬಡವರಿಗೆ ಒಳ್ಳೆಯದಾಗಬೇಕೆಂದು ಇದನ್ನೇ ಮಾಡಿಕೊಂಡು ಬಂದಿದ್ದೇವೆ. ಅವರು ದಯವಿಟ್ಟು ತಮ್ಮ ಆಸನಕೇ ಬರಲಿ ಎನ್ನುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಯಡಿಯೂರಪ್ಪನವರನ್ನು ನಾನೂ ಕೇಳಿ ಕೊಳ್ಳುತ್ತೇನೆ, ೭೯(ಎ)ಅನ್ನು ಬಿಡುವುದಕ್ಕೆ ಒಪ್ಪಿದ್ದಾರೆ. ಬೇರೆ ಸೆಕ್ಷನ್‌ಗಳನ್ನು ಏನು ಫಾರ್ಮಾಲಿಟೀಸ್ ಇದೆಯೋ ಆ ಪ್ರಕಾರ ಅನುಷ್ಠಾನಗೊಳಿಸಿ. ಮಾನ್ಯ ಯಡಿಯೂರಪ್ಪನವರೇ, ನಿಮ್ಮ ಸಾಧನೆ ಆದಂತಾಯಿತಲ್ಲಾ. ಮುಂದೆ ಅಮೆಂಡ್‌ಮೆಂಟ್ ತಂದಾಗ ನಾವೂ ನೀವು ಎಲ್ಲಾ ಸೇರಿ ನೋಡೋಣ, ಬನ್ನಿ ಸೀಟಿಗೆ.

ಮಾನ್ಯ ಅಧ್ಯಕ್ಷರು.—ಬನ್ನಿ, ಎದ್ದು ಬನ್ನಿ ಮಾನ್ಯ ಯಡಿಯೂರಪ್ಪನವರೇ, ಮಾನ್ಯ ಭೂಪತಿಯವರೇ, ಅವರನ್ನು ಕರೆದುಕೊಂಡು ಬನ್ನಿ.

ಶ್ರೀ ಕೆ.ಬಿ. ಶಾಣಪ್ಪ.—ಅವರು ತಪಸ್ಸು ಕೂತಹಾಗಿದೆ, ಮೌನವ್ರತ ಹಿಡಿದಿದ್ದಾರೆ.

ಶ್ರೀ ಯು. ಭೂಪತಿ.—ಮಾಜಿ ಮುಖ್ಯಮಂತ್ರಿಗಳಂತೆ ಮೌನ ಮಾಡುತ್ತಿದ್ದಾರೆ.

ಅಧ್ಯಕ್ಷರು.—೭೯(ಎ) ಬಿಡುತ್ತಾರಲ್ಲಾ, ಬನ್ನಿ.

ಶ್ರೀ ಬಿ. ಎ. ಉಮರಬ್ಬ.—ತುಂಬಾ ಕಾರ್ಯಕಲಾಪಗಳು ಇರುವುದರಿಂದ ಕಾಲ ವ್ಯರ್ಥ ಮಾಡುವುದು ಬೇಡ.

ಅಧ್ಯಕ್ಷರು.—ಅವರು ಕೇಳುವುದಿಲ್ಲ ಅಂದರೆ ಏನು ಮಾಡುವುದು ?

ಶ್ರೀ ಬಿ. ಎಸ್. ಯಡ್ಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಪ್ರಾಮಾಣಿಕವಾಗಿ ಒಂದು ಮಾತನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ನನ್ನೊಬ್ಬನಿಗೇ ಬಡವರ ಬಗ್ಗೆ ಕಳಕಳಿ ಇದೆ ಅಂತ ಆ ರೀತಿ ಕೂತು ಜನತೆಯ ಗಮನ ಸೆಳೆಯಬೇಕೆಂಬ ಸ್ವಾರ್ಥದಿಂದ ನಾನು ಕೂರಲಿಲ್ಲ. ನನ್ನ ಉದ್ದೇಶ ಏನೆಂದರೆ ಸಂಬಂಧಪಟ್ಟ ಮಂತ್ರಿಗಳು, ಅಧಿಕಾರಿಗಳು ಈ ತರಹ ಬಿಲ್ ಅನ್ನು ತರುವ ಮುಂಚೆ ಯೋಚನೆ ಮಾಡಿ ಅದು ಬಡವರ ಮೇಲೆ ಎಷ್ಟರಮಟ್ಟಿಗೆ ಪರಿಣಾಮವಾಗುತ್ತದೆ ಎಂಬ ಚಿಂತನೆ ಮಾಡದೆ ತಂದಿರುವುದರಿಂದ ನಾವು ಅದನ್ನು ಪ್ರತಿಭಟಿಸದಿದ್ದರೆ ಲಕ್ಷಾಂತರ ಜನರ ಹಿತ ಕಾಯುವುದಕ್ಕೆಂದು ಬಂದ ಚುನಾಯಿತ ಪ್ರತಿನಿಧಿಗಳು ಕರ್ತವ್ಯ ಲೋಪ ಮಾಡಿದಂತಾಗುತ್ತದೆ ಎಂಬುದು. ಈಗ ಯಾವುದೋ ಒಂದು ಶಬ್ದ ತೆಗೆದುಹಾಕುವುದರಿಂದ ಪರ್ಪಸ್ ಪೂರೈಸುವುದಿಲ್ಲ. ನನ್ನ ಉದ್ದೇಶ ಅರಣ್ಯ ಉಳಿಯಬೇಕು, ಅದರಲ್ಲಿ ಯಾರೂ ಪ್ರವೇಶ ಮಾಡಬಾರದು. ಆದರೆ ಈಗಾಗಲೇ ಯಾರು ಸಣ್ಣ ಪ್ರಮಾಣದಲ್ಲಿ ಹತ್ತಾರು ವರ್ಷಗಳಿಂದ ಬಡವರು ಅಲ್ಲಿದ್ದಾರೋ ಅವರು ಬೀದಿ ಪಾಲಾಗಬಾರದು. ಇದರ ಬಗ್ಗೆ ಯೋಚಿಸಿ. ಇಡೀ ರಾಜ್ಯದ ರಕ್ಷಣೆ ನಾನು ಮಾಡುತ್ತೇನೆ ಎಂಬ ಹಠಮಾರಿತನ ನನಗೇನೂ ಇಲ್ಲ, ಅದು ಸಾಧ್ಯವೂ ಇಲ್ಲ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ಇಂಥಾ ಶಾಸನಗಳನ್ನು ತರಬಾರದೆಂದು ಮತ್ತು ಸ್ಪೆಸಿಫಿಕ್ಕಾಗಿ ೬೪(ಎ)ಗೆ ಸಂಬಂಧಪಟ್ಟ ಹಾಗೆ ಅನೇಕ ಸಾರಿ ನಾನು ಮುಖ್ಯಮಂತ್ರಿಗಳ ಹತ್ತಿರ ಮತ್ತು ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಮಾತನಾಡಿ, ಪತ್ರಿಕಾ ಹೇಳಿಕೆ ಕೊಟ್ಟೆ, ಅರಣ್ಯ ಉಳಿಸುವ ಭರದಲ್ಲಿ ಬಡವ ಬೀದಿಪಾಲಾಗಬಾರದೆಂದು ನಾನು ಅಲ್ಲಿ ಕುಳಿತೆ.

ಯಾವುದೇ ಜನರ ಮನಸ್ಸಿಗೆ ನೋವು ಉಂಟು ಮಾಡಬೇಕೆಂಬ ಉದ್ದೇಶ ನನಗೆ ಇಲ್ಲ. ತಾವು ಇದರ ಬಗ್ಗೆ ಮತ್ತೊಮ್ಮೆ ಆಲೋಚನೆ ಮಾಡಿ, ಯಾವುದೋ ಕಾರಣಕ್ಕಾಗಿ ೧-೨ ಎಕರೆ ಜಮೀನನ್ನು ಅವನು ಮಾಡುತ್ತಿದ್ದರೆ ಅದು ಅರಣ್ಯ ಇಲಾಖೆಯ ಭೂಮಿ ಇರಬಹುದು, ಸಿ ಅಂಡ್ ಡಿ, ಇರಬಹುದು ಇಲ್ಲವೇ ರೆವಿನ್ಯೂ ಲ್ಯಾಂಡ್ ಇರಬಹುದು ಅವನಿಗೆ ಧಕ್ಕೆಯಾಗದ ರೀತಿಯಲ್ಲಿ ಅವರಿಗೆ ರಕ್ಷಣೆ ಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ನಾನು ಅಲ್ಲಿ ಕುಳಿತುಕೊಂಡು ಯಾರ ಮನಸ್ಸಿಗೂ ನೋವು ಉಂಟು ಮಾಡಬೇಕೆಂಬ ಉದ್ದೇಶ ನನ್ನದಲ್ಲ. ಮಾನ್ಯ ಸಚಿವರು ಪುನಃ ಇದರ ಬಗ್ಗೆ ಯೋಚನೆ ಮಾಡುತ್ತೇವೆಂದು ಹೇಳಿದ್ದಾರೆ ಅದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಪ್ರತಿಯೊಂದು ಇಲಾಖೆಯಲ್ಲಿ ಕನ್‌ಸಲ್ಟೇಟೀವ್ ಕಮಿಟಿ ಎಂದು ಮಾಡಿದ್ದಾರೆ...

(ಗೊಂದಲ)

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಅದು ಎಲ್ಲಿ ಇದೆ. ಕನ್ಸಲ್ಟೇಟೀವ್ ಕಮಿಟಿ ಎಂದು ಮಾಡಿದ್ದೀರಿ. ಆದರೆ ಒಂದು ಸಲ ಆ ಸಭೆ ನಡೆದಿಲ್ಲ ಅದನ್ನು ಏಕೆ ಇಟ್ಟಿದ್ದೀರಿ ?

ಅಧ್ಯಕ್ಷರು.—ಎಲ್ಲಾ ಮಂತ್ರಿಗಳು ಕೂಡ ತಮ್ಮ ತಮ್ಮ ಇಲಾಖೆಯಲ್ಲಿ ಕನ್ಸಲ್ಟೇಟೀವ್ ಕಮಿಟಿಯ ಸಭೆಗಳನ್ನು ಕರೆಯಿರಿ, ಅದು ಬಹಳ ಒಳ್ಳೆಯದು. ಅದರಲ್ಲಿ ಈ ಕಡೆಯವರು ಆ ಕಡೆಯವರೂ ಇದ್ದಾರೆ, ಅವರ ಸಲಹೆ ಸೂಚನೆಗಳನ್ನು ತೆಗೆದುಕೊಳ್ಳಿ.

ಶ್ರೀ ಬಿ. ರಾಚಯ್ಯ.—ಕರೆಯುತ್ತೇವೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಹುಣಸೂರು).—ಮಾನ್ಯ ರಾಚಯ್ಯನವರು ಒಂದು ತಿದ್ದುಪಡಿಯನ್ನು ವಾಪಸ್ ತೆಗೆದುಕೊಂಡು ಬಡವರಿಗೆ ಇರತಕ್ಕಂತಹ ಜಮೀನಿಗೆ ತೊಂದರೆಯಾಗದ ಹಾಗೆ ಮಾಡಿದ್ದಾರೆ ಅವರಿಗೆ ನಾನು ಆಭಾರಿಯಾಗಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ ಬಿಜಾಪುರ ಕಾಲೋನಿ ಎಂದು ಇದೆ ಮತ್ತು ಧಾರವಾಡದಿಂದ ಬಂದಿರತಕ್ಕಂತಹ ಜನರ ಕಾಲೋನಿ ಕೂಡ ಇದೆ ಅವರು ಸಿ ಅಂಡ್ ಡಿ ಲ್ಯಾಂಡಿನಲ್ಲಿ ಜಮೀನನ್ನು ಸಾಗುವಳಿ ಮಾಡಿಕೊಂಡಿದ್ದಾರೆ. ತಾವು ಇದನ್ನು ತಂದಿದ್ದರೆ ಅವರು ಹೊರಗಡೆ ಹೋಗತಕ್ಕಂತಹ ಪರಿಸ್ಥಿತಿ ಬಂದಿತ್ತು ಅದನ್ನು ನಾನು ವಿರೋಧ ಮಾಡೋಣವೆಂದು ಅಂದುಕೊಂಡಿದ್ದೆ ಅಷ್ಟರಲ್ಲಿ ತಾವು ವಾಪಸ್ ತೆಗೆದುಕೊಂಡಿದ್ದೀರಿ. ಫಾರೆಸ್ಟ್ ಕಮಿಟಿ ಮಾಡಿದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ ಮಾಡದಿದ್ದರೆ ಅದನ್ನು ದಯಮಾಡಿ ಮಾಡಬೇಕು. ಪ್ರತಿ ತಾಲ್ಲೂಕಿನಲ್ಲಿ ರೆವಿನ್ಯೂ ಇಲಾಖೆಯಲ್ಲಿನ ಜಮೀನನ್ನು ಬಡವರಿಗೆ ಹಂಚುವುದಕ್ಕೆ ಜಮೀನು ಬಿಡಬೇಕೆಂದು ಹೇಳಿದ್ದೆ ಅದು ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಹಿಂದೆ ಮಂತ್ರಿಗಳು ಇದರ ಬಗ್ಗೆ ಆಶ್ವಾಸನೆ ಕೊಟ್ಟಿದ್ದರ

ಅದರ ಬಗ್ಗೆ ನನಗೆ ಕಾಗದ ಬಂದಿಲ್ಲ. ಯಾವ್ಯಾವ ತಾಲ್ಲೂಕಿನಲ್ಲಿ ಕಮಿಟಿಗಳು ಆಗಿಲ್ಲ ಅಲ್ಲಿ ಮಾಡಬೇಕು. ಇನ್ನು ಹುಣಸೂರಿನಲ್ಲಿರುವ ಮೇಧರ್ ಜನಾಂಗದವರಿಗೆ ಬೊಂಬುಗಳನ್ನು ನೀಡುತ್ತಿಲ್ಲ. ೫೦ ಪರ್ಸೆಂಟ್ ಬೊಂಬನ್ನು ಪೇಪರ್ ಮಿಲ್‌ನವರಿಗೆ ನೀಡುತ್ತಿದ್ದಾರೆ. ಮೇಧರ್ ಸಂಘದವರು ಹೋಗಿ ಜಿಲ್ಲಾ ಅರಣ್ಯಾಧಿಕಾರಿಗಳನ್ನು ಕೇಳಿದರೆ ನಿಮಗೆ ಬೊಂಬುಗಳನ್ನು ಕೊಡುವುದಕ್ಕಾಗುವುದಿಲ್ಲ ಈ ಕಸುಬನ್ನು ಬಿಟ್ಟು ಬೇರೆ ಕಸುಬನ್ನು ಅವಲಂಬನೆ ಮಾಡಿಕೊಳ್ಳಿ ಎಂದು ಬುದ್ಧಿವಾದವನ್ನು ಹೇಳಿಕಳಿಸಿದ್ದಾರೆ. ಆ ಜನರು ನನ್ನ ಹತ್ತಿರ ಬಂದು ಪ್ರಸ್ತಾಪ ಮಾಡಿದ್ದಾರೆ. ಈ ಮಿಲ್‌ಗಳವರಿಗೆ ಕೊಡುವುದಕ್ಕೋಸ್ಕರ ಬೊಂಬುಗಳನ್ನು ಬೆಳೆಸಿ ಕೊಡುವುದಕ್ಕಾಗುತ್ತದೆ ಅದೇ ತಲೆ ತಲಾಂತರದಿಂದ ಅದೇ ಕಸುಬನ್ನು ಅವಲಂಬನೆ ಮಾಡಿಕೊಂಡಿರುವವರಿಗೆ ಬೊಂಬುಗಳನ್ನು ನೀಡುವುದಿಲ್ಲವೆಂದು ಹೇಳಿದರೆ ಹೇಗೆ? ಅವರನ್ನೇ ಕರೆದು ಹೇಳೋಣ ವೆಂದು ಮಾಡಿದ್ದೆ ಆದರೆ ಅವರು ಸಿಗಲಿಲ್ಲ. ಯಾರು ನನ್ನ ಹತ್ತಿರ ಬಂದಿದ್ದರು ಅವರು ಕೈಯಲ್ಲಿಯೇ ಪತ್ರವನ್ನು ಬರೆದು ಕಳಿಸಿದ್ದೇನೆ. ಹುಣಸೂರು ಮತ್ತು ಪಕ್ಕದಲ್ಲಿರತಕ್ಕಂತಹ ಕೊಡಗು ಜಿಲ್ಲೆಯಲ್ಲಿ ಒಳ್ಳೆಯ ಬೊಂಬುಗಳು ಇದೆ ಅದನ್ನು ಆ ಕಸಬು ಮಾಡತಕ್ಕಂತಹವರು ಯಾರಿದ್ದಾರೆ ಅವರಿಗೆ ಕೊಡಬೇಕು ಅದನ್ನು ಬಿಟ್ಟು ಬೊಂಬು ಇಲ್ಲ ಬೇರೆ ಕಸುಬನ್ನು ಮಾಡಿಕೊಳ್ಳಿ ಎಂದು ಹೇಳಿದರೆ ಅದು ತಪ್ಪಾಗುತ್ತದೆ. ನೇರವಾಗಿ ತಮಗೆ ಇದು ಈ ದಿವಸದ ಚರ್ಚೆಗೆ ಸಂಬಂಧಪಡದಿದ್ದರೂ ಕೂಡ ಅಂತಹ ಅರಣ್ಯಾಧಿಕಾರಿಗಳು ಇದ್ದರೆ ಅವರಿಗೆ ಬುದ್ಧಿ ಹೇಳಿ ಅವರ ಮನೋಭಾವನೆ ಬದಲಾವಣೆಯಾಗುವ ರೀತಿಯಲ್ಲಿ ಮಾಡಬೇಕೆಂದು ತಮ್ಮ ಮೂಲಕ ಸಚಿವರಲ್ಲಿ ವಿನಂತಿಸುತ್ತೇನೆ. ೨೫ ಸಾವಿರ ಎಕರೆ ಕಾಡು ಹೋಗಿದೆ. ಇದರಲ್ಲಿ ೧೦ ಸಾವಿರ ಎಕರೆ ಟಿಬೆಟಿಯನ್ಸ್‌ಗೆ ಹೋಗಿದೆ ಉಳಿದ ೧೫ ಸಾವಿರ ಬೇರೆಯವರಿಗೆ ಹೋಗಿದೆ. ಹಿಂದೆ ಹುಣಸೂರಿನಲ್ಲಿ ೩೫ ರಿಂದ ೪೦ ಇಂಚು ಮಳೆಯಾಗುತ್ತಿತ್ತು ಈಗ ೧೦ ಇಂಚು ಮಳೆ ಬೀಳುತ್ತಿದೆ. ಆದುದರಿಂದ ಇನ್ನು ಮುಂದೆ ಈ ರೀತಿ ಯಾರ್ಯಾರು ಬಗರ್ ಹುಕುಂ ಮಾಡಿಕೊಂಡಿದ್ದಾರೆ, ಅವರಿಗೆ ಜಮೀನನ್ನು ಖಾಯಂ ಮಾಡತಕ್ಕಂಥದ್ದನ್ನು ಏನು ಸರ್ಕಾರದವರು ಮಾಡಿದ್ದಾರೆ. ಅದನ್ನು ಬಿಟ್ಟು ಮಿಕ್ಕ ಈ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿರತಕ್ಕಂಥ ಲ್ಯಾಂಡ್ ಏನು ಇದೆ, ಈ ಸಿ. ಅಂಡ್ ಡಿ. ಲ್ಯಾಂಡನ್ನು ಬಿಟ್ಟು ಮಿಕ್ಕಿದ್ದನ್ನು ಸಂರಕ್ಷಣೆ ಮಾಡತಕ್ಕಂಥ ಕೆಲಸವನ್ನು ಸರ್ಕಾರದವರು ಕಟ್ಟುನಿಟ್ಟಾಗಿ ಮಾಡಬೇಕು. ಕೆಲವು ಅಧಿಕಾರಿಗಳು ಏನಾದರೂ ಇದರ ಬಗ್ಗೆ ಸರ್ಕಾರದ ಉದ್ದೇಶವನ್ನು ಮೊಟಕು ಮಾಡತಕ್ಕಂಥ ಅಧಿಕಾರಿಗಳು ಇದ್ದರೆ ಅವರಿಗೆ ಶಿಕ್ಷೆಯನ್ನು ಕೂಡಾ ಮಾಡಬೇಕು. ನಮ್ಮ ತಾಲ್ಲೂಕಿನಲ್ಲಿ ಸಾಲುಮರಗಳು ಒಂದು ಕೂಡಾ ಉಳಿದುಕೊಂಡಿಲ್ಲ. ಅರ್ಜಿ ತೆಗೆದುಕೊಳ್ಳುವುದು, ಅದು ಬಿದ್ದು ಹೋಗುತ್ತದೆ ಎಂದು ಆಫೀಸ್‌ನಲ್ಲಿ ಕುಳಿತುಕೊಂಡು ಅದನ್ನು ಹರಾಜು ಮಾಡುವುದು, ಇದನ್ನು ಮಾಡುತ್ತಿದ್ದಾರೆ, ಇದು ಕೂಡಾ ನಡೆದಿದೆ. ಸಾಲುಮರಗಳನ್ನು ನೆಡಿ ಎಂದು ಹೇಳತಕ್ಕಂಥ ರೀತಿ ಒಂದು ಕಡೆ, ಇಂಥ ಅಧಿಕಾರಿಗಳು ಇದನ್ನು ಹರಾಜು ಮಾಡಿ ಬೇರೆಯವರಿಗೆ ಅನುಕೂಲ ಮಾಡಿಕೊಡುವುದು ಇನ್ನೊಂದು ಕಡೆಯಲ್ಲಿ ನಡೆಯುತ್ತಿದೆ. ಈ ರೀತಿಯ ಅಧಿಕಾರಿಗಳೆಲ್ಲಾ ಇದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಒಂದು ಗಂಡು ಆನೆ ಸತ್ತು ಹೋಯಿತು, ಸತ್ತು ಹೋಗಿದ್ದ ದಂತವನ್ನು ತೆಗೆದುಕೊಂಡು ಹೋದರು. ಹೆಣ್ಣು ಆನೆಯ ತಲೆಯನ್ನು ಅಲ್ಲಿ ಇಟ್ಟು ಬಿಟ್ಟರು. ಮೂರು ತಿಂಗಳು ಆದಮೇಲೆ ದನಕಾಯುವ ಹುಡುಗರಿಗೆ ಗೊತ್ತಾಯಿತು. ಅಲ್ಲಿ ಫಾರೆಸ್ಟ್‌ನವರು ಹೋಗಿ ನೋಡಿದ ಮೇಲೆ ಡಾಕ್ಟರು ಕೂಡಾ ಹೇಳಿದ್ದಾರೆ, ಇದು ದೇಹ ಮಾತ್ರ ಗಂಡು ಆನೆಯದು, ತಲೆ ಹೆಣ್ಣು ಆನೆಯದು ಎಂದು ಹೇಳಿದ್ದಾರೆ. ಅಂದರೆ ದಂತವನ್ನು ತೆಗೆದುಕೊಂಡು ಹೋಗುವುದಕ್ಕೆ ಈ ರೀತಿ ಮಾಡಿದ್ದಾರೆ. ಬಹುಶಃ ಇದನ್ನು ಯಾರೇ ಮಾಡಿದ್ದರೂ ಕೂಡಾ ಅರಣ್ಯ ಇಲಾಖೆಯವರ ಒಂದು ಶಾಮೀಲು ಇಲ್ಲದೇ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ನಾನು ನಿಯಂತ್ರಣಾಧಿಕಾರಿಗಳಿಗೆ ಕಾಗದವನ್ನು ಬರೆದೆ, ಸಂಬಂಧಪಟ್ಟ ಅಧಿಕಾರಿಗಳಿಗೆಲ್ಲಾ ಕಾಗದವನ್ನು ಬರೆದೆ. ಅವರು ಇಲ್ಲ, ಟ್ರೈನಿಂಗ್ ಹೋಗಿದ್ದಾರೆ, ಇಲ್ಲ ಎನ್ನುವ ಒಂದು ಉತ್ತರ ಬಂತು. ಶ್ರೀಮಾನ್ ರಾಚಯ್ಯನವರು ಹಿಂದೆ ಅರಣ್ಯ ಮಂತ್ರಿಗಳಿದ್ದರು, ಅವರಿಗೆ ಅಧಿಕಾರಿಗಳು ಏನೇನು ಮಾಡುತ್ತಾರೆ ಎನ್ನುವುದು ಗೊತ್ತಿದೆ, ಅಂಥವರಿಗೆ ಶಿಕ್ಷೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅರಣ್ಯದಲ್ಲಿರತಕ್ಕಂಥ ಪ್ರಾಣಿಗಳ ಸಂರಕ್ಷಣೆ ಅರಣ್ಯ ಸಂರಕ್ಷಣೆ ಇವೆಲ್ಲವನ್ನೂ ಮಾಡುವುದಕ್ಕೆ ಯಾವ ಅಧಿಕಾರಿಗಳು ಶಾಮೀಲಾಗಿ ಸರ್ಕಾರದ ಉದ್ದೇಶಕ್ಕೆ ಮೊಟಕನ್ನು ಮಾಡುತ್ತಿದ್ದಾರೆ ಅಂಥವರಿಗೆ ಕೂಡಾ ಶಿಕ್ಷೆಯನ್ನು ಮಾಡತಕ್ಕಂಥ ಕೆಲಸವನ್ನು ಶ್ರೀಮಾನ್ ರಾಚಯ್ಯನವರು ಅದನ್ನು ಮಾಡಬೇಕೆಂದು ಹೇಳುತ್ತೇನೆ. ಶ್ರೀಮಾನ್ ರಾಚಯ್ಯನವರು ಬಹಳ ಅನುಭವ ಇರತಕ್ಕಂಥವರು ಅದನ್ನು ಮಾಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮೇಧರಿಗೆ ಏನೊಂದು ಅನ್ಯಾಯವಾಗುತ್ತಿದೆ, ಅವರಿಗೆ ಬೊಂಬನ್ನು ಕೊಡಲಿಕ್ಕೆ

ಆಗದೇ ಕಸುಬನ್ನೇ ಬದಲಾವಣೆ ಮಾಡಿ ಎಂದು ಹೇಳತಕ್ಕಂಥ ಅಧಿಕಾರಿಗಳಿಗೆ ಸರಿಯಾದ ತಿಳುವಳಿಕೆಯನ್ನು ಕೊಡಬೇಕು ಎಂದು ಹೇಳುತ್ತೇನೆ. ಇದು ನಮ್ಮ ತಾಲ್ಲೂಕಿನಲ್ಲಿ ಒಂದೇ ಕಡೆ ಅಲ್ಲ, ಬೇರೆ ಕಡೆಯಲ್ಲಿಯೂ ಕೂಡಾ ಮೇಧರುಗಳಿಗೆ ಇದೇ ರೀತಿಯಲ್ಲಿ ತೊಂದರೆಯನ್ನು ಮಾಡಿರಬಹುದು, ಈ ಬಿಲ್ಲಿನ ಒಂದು ತಿದ್ದುಪಡಿಯನ್ನು ರಾಚಯ್ಯನವರು ವಾಪಸ್ಸು ತೆಗೆದುಕೊಂಡಿದ್ದಾರೆ, ಬಡವರಿಗೆ ಧೈರ್ಯ ಬರುವ ರೀತಿಯಲ್ಲಿ ಮಾಡಿ ಅವರಿಗೆ ಬಗರ್‌ಹುಕುಂನಲ್ಲಿ ಲ್ಯಾಂಡ್ ಸಿಗುವ ರೀತಿಯಲ್ಲಿ ಮಾಡತಕ್ಕಂಥದ್ದು ಅಲ್ಲದೇ ಈ ಬಿಲ್ಲಿನ ಒಂದು ತಿದ್ದುಪಡಿಯನ್ನು ವಾಪಸ್ ತೆಗೆದುಕೊಂಡಿದ್ದಾರೆ, ಅವರಿಗೆ ಮತ್ತೊಮ್ಮೆ ನಮ್ಮೆಲ್ಲರ ಪರವಾಗಿ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಮಲ್ಲಪ್ಪನವರೇ ಮಾತನಾಡಿ. ಮೂರು ಮಿನಿಟ್‌ನಲ್ಲಿ ಹೇಳಿ.

ಶ್ರೀ ಕೆ. ಮಲ್ಲಪ್ಪ (ಮಾಯಕೊಂಡ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಅನಧಿಕೃತವಾಗಿ ಸಾಗುವಳಿ ಮಾಡುವಂಥ ಜಮೀನುಗಳನ್ನು ಯಾರು ಮಾಡುತ್ತಿದ್ದರು, ಅವರಿಂದ ಅನಧಿಕೃತವಾಗಿ ಕೆಲವರುಗಳು ಹಣವನ್ನು ಕೊಟ್ಟು ತೆಗೆದುಕೊಂಡಿರತಕ್ಕಂಥದ್ದು ಅಂಥ ಸಾಕಷ್ಟು ಉದಾಹರಣೆಗಳು ಇದ್ದಾವೆ, ಆದರೆ ಈ ಒಂದು ಸಂದರ್ಭದಲ್ಲಿ ಈ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತಮ್ಮ ಮೂಲಕ ತರುತ್ತಿದ್ದೇನೆ, ಅನಧಿಕೃತವಾಗಿ ತೆಗೆದುಕೊಂಡಿರತಕ್ಕಂಥ ಜಮೀನನ್ನು ಬಹಳ ಜನರು ತೆಗೆದುಕೊಂಡಿದ್ದಾರೆ, ಅಂಥವರಲ್ಲಿ ಯಾರು ಮೊದಲು ಅನಧಿಕೃತವಾಗಿ ಸಾಗುವಳಿ ಮಾಡುವಂಥದ್ದನ್ನು ತೆಗೆದುಕೊಂಡಿದ್ದಾರೆ, ಅವರಿಗೆ ಪುನಃ ವಾಪಸ್ಸು ಹೋಗತಕ್ಕಂಥ ರೀತಿಯಲ್ಲಿ ಮಾಡಬೇಕು. ಸಾಕಷ್ಟು ಜನರು ಮಾರಾಟ ಮಾಡಿದ್ದಾರೆ. ಸ್ವಾಧೀನ ಅವರ ಕಡೆಯಲ್ಲಿರುವುದನ್ನು ಮತ್ತೆ ಸಾಗುವಳಿ ಮಾಡತಕ್ಕಂಥವರ ಕೈಗೆ ಕೊಡಿಸಬೇಕು. ಈ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಸುಮಾರು ೧೪ ಜನ ಮಾನ್ಯ ಶಾಸಕರು ಈ ಅರಣ್ಯ ಕಾಯ್ದೆಯ ತಿದ್ದುಪಡಿಯ ಮೇಲೆ ಮಾತನಾಡಿದ್ದಾರೆ. ಅವರೆಲ್ಲರಿಗೂ ಕೂಡಾ ನನ್ನ ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಬಹುಶಃ ಮಾತನಾಡಿದವರೆಲ್ಲರೂ ಕೂಡಾ ಈ ತಿದ್ದುಪಡಿಗಳ ವಿಷಯದಲ್ಲಿ ಇದು ಅಗತ್ಯವಾಗಿದೆ ಎಂದು ಒಪ್ಪಿಕೊಂಡರೂ ಕೂಡಾ ಒಂದು ವಿಷಯದಲ್ಲಿ ಮಾತ್ರ ಎಲ್ಲರೂ ಏಕಾಭಿಪ್ರಾಯವನ್ನು ವ್ಯಕ್ತಪಡಿಸಿದರು. ಮಾನ್ಯ ಖರ್ಗೆಯವರು ಈ ಮಸೂದೆಯ ಮೇಲೆ ಚರ್ಚೆ ಮಾಡಿದಂಥ ಸಂದರ್ಭದಲ್ಲಿ ೬೪ (ಎ) ರ ವಿಷಯದಲ್ಲಿ ಇನ್ನೂ ಕೂಡಾ ಅನುಮಾನ ಇದೆ, ಎಷ್ಟರಮಟ್ಟಿಗೆ ಬಡವರಿಗೆ ನ್ಯಾಯ ದೊರಕುತ್ತದೆ ಎನ್ನುವುದನ್ನು ತಿಳಿದುಕೊಳ್ಳಬೇಕು, ಸರ್ಕಾರದ ಈ ಉದ್ದೇಶ ಅರಣ್ಯ ಬೆಳೆಸಬೇಕು ಎನ್ನತಕ್ಕಂಥದ್ದು ಕಡಿಮೆಯಾಗಕೂಡದು, ಇವೆರಡನ್ನು ನೋಡಿದರೆ ಬಡವರಿಗೆ ನ್ಯಾಯ ಸಿಗಬೇಕು ಮತ್ತು ಅರಣ್ಯ ಕೂಡಾ ಸರಿಯಾಗಿ ಬೆಳೆಯಬೇಕು ಎಂದು ಹೇಳಿದ್ದಾರೆ. ಶ್ರೀಮಾನ್ ಭೂಪತಿಯವರು ಕೂಡ ತಮ್ಮ ಸೊಂಡೂರು ತಾಲ್ಲೂಕಿನಲ್ಲಿ ಗಂಧದ ಮರಗಳನ್ನು ಚಿಕ್ಕ ವಯಸ್ಸಿನಲ್ಲಿ ಕಡಿದು ಹಾಕಿ ಬೇರು ಬಿಟ್ಟಿದ್ದು ಹಾಗೇನೇ ಎಲ್ಲಾ ಕಳ್ಳತನ ಆಗಿದೆ ಎಂದು ಹೇಳಿದರು. ಶ್ರೀ ಬಾಗಲಕೋಟೆಯವರು ಅರಣ್ಯ ಸಚಿವರು ಆಗಿದ್ದಾಗ ಅಲ್ಲಿಗೆ ಹೋಗಿ ಸ್ಥಳ ಪರೀಕ್ಷೆ ಮಾಡಿ ಅಲ್ಲಿರತಕ್ಕ ಗಂಧದ ಮರಗಳು ಎಷ್ಟು ಇದೆ, ಅದಕ್ಕೆ ನಂಬರ್‌ಗಳನ್ನು ಹಾಕಿ ಯಾವ ಯಾವ ವಯಸ್ಸು ಆಗಿರತಕ್ಕ ಮರಗಳು ಇದ್ದಾವೆ ಅದನ್ನು ಪಟ್ಟಿ ಮಾಡಿ ಕಡಿಸಿ ಇವೊತ್ತು ತರೀಕೆರೆ ಡಿಪೋನಲ್ಲಿ ಇಟ್ಟಿದ್ದಾರೆ. ಅವು ಸುಮಾರು ೬೪ ಲಕ್ಷ ರೂಪಾಯಿ ಬೆಲೆ ಬಾಳತಕ್ಕಂಥ ಮರಗಳು. ಆದ್ದರಿಂದ ಅರಣ್ಯ ಇಲಾಖೆಯವರು ಕಳ್ಳತನವನ್ನು ಮಾಡಿದರು ಎನ್ನುವ ಬದಲು ಅರಣ್ಯ ಇಲಾಖೆಯವರು ಕಳ್ಳತನವನ್ನು ತಪ್ಪಿಸುವುದಕ್ಕೋಸ್ಕರ ವಯಸ್ಸಾಗಿರತಕ್ಕ ಮರಗಳನ್ನು ಅಲ್ಲಿ ಇಡಿಸಿದ್ದಾರೆ. ಇಷ್ಟು ಕೋಟಿಗಟ್ಟಲೆ ರೂಪಾಯಿ ಉಳಿತಾಯ ಆಗಿದೆ ಅಲ್ಲದೇ ಶ್ರೀಮಾನ್ ಭೂಪತಿಯವರು ಬಡವರ ವಿಷಯದಲ್ಲಿ ಅನುಕಂಪ ತೋರಿಸಿದ್ದನ್ನು ನೋಡಿದರೆ ಸಂತೋಷವಾಗುತ್ತದೆ. ಶ್ರೀಮಾನ್ ಶಂಕರ್‌ರವರು ಮನೆಯ ಮುಂದೆ ಅರಣ್ಯ ಇಲಾಖೆಯವರು ಗಿಡ ಹಾಕುತ್ತಾರೆ ನಮಗೆ ತೊಂದರೆಯಾಗುತ್ತದೆ ಎಂದು ಹೇಳಿದ್ದಾರೆ. ಈ ಸಿ ಅಂಡ್ ಡಿ ಲ್ಯಾಂಡ್‌ಗಳ ಬಗ್ಗೆ ಪುನರ್ ಪರಿಶೀಲನೆ ಮಾಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿರುವುದರಿಂದ ಅವರ ಆ ಆದೇಶದ ಪ್ರಕಾರ ಸಿ ಅಂಡ್ ಡಿ ಲ್ಯಾಂಡ್‌ಗಳು ಏನಿದೆ. ಅದು ಕೃಷಿಗೆ ಯೋಗ್ಯವಾಗಿರತಕ್ಕ ಎಳನೆಯ ದರ್ಜೆ ಭೂಮಿ ಎಂದು ಹೇಳಿ ಲೆಕ್ಕ, ಆದರೂ ಕೆಲವು ಭೂಮಿಗಳನ್ನು ಜನ ಕೃಷಿ ಮಾಡಿ ೭೮ ರಿಂದ ಆಚೆಗೆ ಬೆಳೆ ತೆಗೆಯಲಾಗುತ್ತಿದೆ. ಅದನ್ನು ಅವರಿಗೇ ಖಾಯಂ ಮಾಡುತ್ತೇವೆಂದು ಹೇಳಿದ್ದಾರೆ.

ಆದ್ದರಿಂದ ಬಡವರಾಗಿರತಕ್ಕವರು ೧೯೮೪ ವರೆಗೆ ಕೂಡ ಕೃಷಿ ಮಾಡಿದವರು ಯಾರು ಇದ್ದಾರೆ, ಅವುಗಳನ್ನು ಗಮನಿಸಿ ಅವರು ಬಡವರಾಗಿದ್ದ ಪಕ್ಷದಲ್ಲಿ ಆ ಭೂಮಿಯನ್ನು ಅವರಿಗೇ ಕೊಡತಕ್ಕದ್ದು. ಸಿ ಅಂಡ್ ಡಿ ಲ್ಯಾಂಡ್‌ನಲ್ಲಿ ಮಾಡಿರತಕ್ಕದ್ದು ಆಗಲಿ ಅಥವಾ ಗೋಮಾಳದಲ್ಲಿ ಮಾಡಿರತಕ್ಕದ್ದು ಆಗಲಿ ಅಥವಾ ನಮ್ಮ ಎಕ್ಸೈಜ್ ಇಲಾಖೆಯಲ್ಲಿ, ಅಮೃತ್ ಮಹಲ್ ಕಾವಲ್‌ನಲ್ಲಿ ಸಾಗುವಳಿ ಮಾಡಿದ್ದರೆ ಅದನ್ನು ಖಾಯಂ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ ಆ ಹೇಳಿಕೆಯಲ್ಲಿ ಯಾವುದೇ ಬದಲಾವಣೆ ಇಲ್ಲ. ಸರ್ಕಾರ ಆ ಪ್ರಕಾರ ಯೋಚನೆ ಮಾಡುತ್ತಿದೆ. ಶ್ರೀಮಾನ್ ಕೆ.ಹೆಚ್. ಪಾಟೀಲರವರು ಅರಣ್ಯ ಅಭಿವೃದ್ಧಿ ವಿಷಯದಲ್ಲಿ ಅತ್ಯಂತ ಕಳಕಳಿಯ ಮನವನ್ನು ತಿಳಿಸಿದ್ದಾರೆ. ಇಂಡಿಯಾ ದೇಶದಲ್ಲಿ ಸುಮಾರು ೩೩ ಪರ್ಸೆಂಟ್ ನಷ್ಟು ಅರಣ್ಯ ಭೂಮಿ ಇರಬೇಕೆಂದು ಇದೆ, ಆದರೆ ನಮ್ಮ ರಾಜ್ಯದಲ್ಲಿ ಶೇಕಡ ೨೨ ರಷ್ಟು ಮಾತ್ರ ಅರಣ್ಯ ಭೂಮಿ ಇದೆ. ಕೆಲವು ಜಿಲ್ಲೆಯಲ್ಲಿ ಕಡಿಮೆ ಇದೆ. ೧೩ ಪರ್ಸೆಂಟ್ ಇದೆ ಎಂದು ಅವರು ಹೇಳಿದ್ದಾರೆ. ನಮ್ಮಲ್ಲಿ ೨೨ ಪರ್ಸೆಂಟ್ ಇದೆ. ಇತ್ತೀಚಿಗೆ ಪ್ರತಿ ಮಂಡಲ್ ಪಂಚಾಯತ್‌ನಲ್ಲಿರತಕ್ಕ ಭೂಮಿ ಎಷ್ಟು ಇದೆ ಅಲ್ಲಿ ಸಾಮಾಜಿಕ ಅರಣ್ಯವನ್ನು ಬೆಳೆಸುವುದಕ್ಕೋಸ್ಕರ ವರ್ಲ್ಡ್ ಬ್ಯಾಂಕ್‌ನಿಂದ ಹಣವನ್ನು ಪಡೆದುಕೊಂಡು ಎನ್. ಆರ್. ಈ. ಪಿ. ಆಗಲಿ ಅಥವಾ ಆರ್. ಎಲ್. ಈ. ಜಿ. ಪಿ. ಆಗಲಿ ಬೇರೆ ಇಲಾಖೆಗಳಲ್ಲಿ ಹಣ ಪಡೆದುಕೊಂಡು ಅದರಲ್ಲಿ ಸುಮಾರು ೨೫ ರಷ್ಟು ಭಾಗ ಹಣವನ್ನು ಇದಕ್ಕೆ ಖರ್ಚು ಮಾಡುತ್ತಿದ್ದೇವೆ. ಮತ್ತು ವರ್ಲ್ಡ್ ಬ್ಯಾಂಕಿನಿಂದ ಹಣ ಪಡೆದ ಮೇಲೆ ಖರ್ಚು ಮಾಡಿ ಉರುವಲುಗೋಸ್ಕರ ಜನರಿಗೆ ಬೇಕಾಗುವ ಮರ ಮುಟ್ಟುಗಳನ್ನು ಮಂಡಲ್‌ದಲ್ಲಿಯೇ ಸಿಗುವ ವ್ಯವಸ್ಥೆ ಆಗಬೇಕೆಂಬ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಬಹಳ ಮಟ್ಟಿಗೆ ಜಿಲ್ಲಾ ಪರಿಷತ್ತು, ಹಾಗೂ ಮಂಡಲ್ ಪಂಚಾಯತ್‌ನವರು ಹೆಚ್ಚು ಆಸಕ್ತಿಯಿಂದ ಕೆಲಸ ಮಾಡಿಕೊಂಡು ಬಂದಿದ್ದಾರೆ. ಹಿಂದಿನ ಅರಣ್ಯ ಮಂತ್ರಿಗಳಾಗಿದ್ದ ಶ್ರೀ ಜೀವಿಜಯರು ಹಾಗೂ ಶ್ರೀ ಬಾಗಲಕೋಟ್‌ರವರು ೪ ಮತ್ತು ೧೭ ನೋಟಿಫಿಕೇಷನ್ ಲಾಭದಿಂದ ಸಂಪೂರ್ಣವಾಗಿ ರಿಸರ್ವ್ ಫಾರೆಸ್ಟ್ ಎಂದು ಆಗುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಅದು ನಿಜ. ಎಂಟು ಲಕ್ಷ ಹೆಕ್ಟೇರ್ ಭೂಮಿಯನ್ನು ಇವೊತ್ತು ಸಿ ಆಂಡ್ ಡಿ ಲ್ಯಾಂಡ್ ಎಂದು ಸರ್ಕಾರ ಆಕ್ಟ್ ಪ್ರಕಾರ ವರ್ಗ ಮಾಡಿದ್ದೇವೆ ಅದನ್ನು ರಿಸರ್ವ್ ಫಾರೆಸ್ಟ್ ಆಗಿಲ್ಲ. ಪುನರ್ ಪರಿಶೀಲನೆ ಕಾಲ ಬಂದಿರುವುದರಿಂದ ಅದನ್ನು ಪುನರ್ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೇವೆ. ಮಾನ್ಯ ಬಂಗಾರಪ್ಪನವರು ಮತ್ತು ಡಾ. ತಿಮ್ಮೇಗೌಡರು ಗಂಧದ ಕೆತ್ತನೆ ಮಾಡತಕ್ಕ ಗುಡಿಗಾರರ ವಿಷಯದಲ್ಲಿ, ಗಂಧದಮರ ಮತ್ತು ಬೆತ್ತ ಉಪಯೋಗಿಸತಕ್ಕವರು ಯಾರು ಆದಿಯಿಂದ ಈ ಕಸುಬನ್ನು ಮಾಡಿಕೊಂಡು ಇದ್ದಾರೆ ಅವರಿಗೆ ಬಿದಿರು ಆಗಲಿ ದಂತ ಆಗಲಿ ಇವುಗಳನ್ನು ಕೊಡುವುದರಲ್ಲಿ ಆದ್ಯತೆ ಕೊಡಬೇಕೇ ವಿನಹ ಕೇವಲ ಕಾರ್ಖಾನೆಗೋಸ್ಕರ ರಿಸರ್ವ್ ಮಾಡುವುದು ತಪ್ಪು ಎಂದು ಹೇಳಿದ್ದಾರೆ, ಆ ಮಾತನ್ನು ನಾನು ಒಪ್ಪುತ್ತೇನೆ. ಅವರುಗಳಿಗೆ ಹ್ಯಾಂಡಿಕ್ರಾಫ್ಟ್ ಆಸೋಸಿಯೇಷನ್ ಮುಖಾಂತರ ಗಂಧದ ಕೊರಡುಗಳನ್ನು ಮತ್ತಿತರ ಮರ ಮುಟ್ಟುಗಳನ್ನು ಕೊಡುತ್ತಿದ್ದಾರೆ, ಅದನ್ನು ಕಡಿಮೆ ಬೆಲೆಗೆ ಕೊಡುತ್ತಿದ್ದಾರೆ. ಅವರುಗಳು ಕೆಲಸವನ್ನು ಮುಂದುವರೆಸಿಕೊಂಡು ಹೋಗಲು ಪರಿಹಾರವನ್ನು ಕೊಡಬೇಕೆಂದು ಮಾಡುತ್ತಿದ್ದೇವೆ. ಹುಣಸೂರು ತಾಲ್ಲೂಕಿನಲ್ಲಿರತಕ್ಕ ಯಾವ ಅಧಿಕಾರಿ ಬಿದಿರನ್ನು ಕೊಡುವುದಿಲ್ಲ. ಎಂದು ಹೇಳಿದ್ದಾರೆ, ಅವರಿಗೆ ನಾವು ತಿಳುವಳಿಕೆ ಕೊಡುತ್ತೇವೆ.

೩-೩೦ ಪಿ.ಎಂ.

ಮತ್ತೆ ಇತ್ತೀಚಿಗೆ ಈ ಆನೆಗಳ ಪೋಚಿಂಗ್ ನಡೆಯುವುದು ಸಾಕಷ್ಟು ಕಡಿಮೆ ಆಗಿದೆ. ಇದರ ಬಗ್ಗೆ ಈ ಹಿಂದೆ ಅಧಿಕಾರದಲ್ಲಿದ್ದವರು ಸಾಕಷ್ಟು ಬಿಗಿಯಾದ ಕ್ರಮಗಳನ್ನು ತೆಗೆದುಕೊಂಡಿದ್ದರಿಂದ ಇದು ಕಡಿಮೆ ಆಗಿದೆ. ಅದಕ್ಕಾಗಿ ನಾನು ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಮೊದಲು ಅರಣ್ಯ ಸಂರಕ್ಷಣೆ ಬಗ್ಗೆ ಮತ್ತು ವನ್ಯಜೀವಿಗಳ ಸಂರಕ್ಷಣೆ ಬಗ್ಗೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರು ಅದನ್ನು ಇನ್ನೂ ತೀವ್ರಗೊಳಿಸಲು ನಮ್ಮ ಇಲಾಖೆಯ ಅಧಿಕಾರಿಗಳಿಗೆ ಆದೇಶ ಕೊಡುತ್ತೇನೆ. ಅಲ್ಲದೆ Statement of Objects and Reasons ನಲ್ಲಿ ೫ ಕಾರಣಗಳನ್ನು ಏನು ಕೊಡಲಾಗಿದೆ ಅದರಲ್ಲಿ ಒಂದನ್ನು ಕೈಬಿಡಬೇಕೆಂದು ಮಾನ್ಯ ಸದಸ್ಯರೆಲ್ಲರೂ ಒತ್ತಾಯ ಮಾಡಿದ್ದಾರೆ. ಈ ತಿದ್ದುಪಡಿ ಮಸೂದೆಯನ್ನು ಇಲ್ಲಿ ಮಂಡನೆ ಮಾಡುವ ಸಂದರ್ಭದಲ್ಲಿ ಇದರ ಬಗ್ಗೆ ಸಂಪೂರ್ಣವಾಗಿರತಕ್ಕಂಥ ಚಿತ್ರ ನನ್ನ ಮನಸ್ಸಿನಲ್ಲಿರಲಿಲ್ಲ. ಈಗ ನಾವು ಸೆಕ್ಷನ್ ೬೪-(ಎ)ಗೆ ಅಮೆಂಡ್

ಮೆಂಟ್ ಸೆಕ್ಷನ್ ೮ ಎಂದು ಏನು ಇಲ್ಲಿ ತಂದಿದ್ದೇವೆ, ಇದರ ಬಗ್ಗೆ ಸಾಕಷ್ಟು ಗೊಂದಲವಿರುವ ಕಾರಣ ಇದನ್ನು ಕೈಬಿಡೋಣ ಎಂದು ನಾನು ನನ್ನ ಅಧಿಕಾರಿಗಳಿಗೆ ಹೇಳಿದೆ ಮತ್ತು ಇಲ್ಲಿ ಮಾನ್ಯ ಸದಸ್ಯರೆಲ್ಲರೂ ಇದರ ಬಗ್ಗೆ ಒತ್ತಾಯ ಮಾಡಿದ್ದರಿಂದ ಇದನ್ನು ಡಿಲೀಟ್ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇದನ್ನು ಬಿಟ್ಟರೆ ಇನ್ನುಳಿದಿರತಕ್ಕಂಥ ತಿದ್ದುಪಡಿಗಳಿಗೆ ಹೆಚ್ಚಿನ ರೀತಿಯ ಬೆಂಬಲ ಮಾನ್ಯ ಸದಸ್ಯರಿಂದ ಸಿಕ್ಕಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಈ ತಿದ್ದುಪಡಿ ಮಸೂದೆಯನ್ನು ಪಾಸ್ ಮಾಡುವುದರಿಂದ ಇನ್ನೂ ಚೆನ್ನಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಇದರಲ್ಲಿ ಅಧಿಕಾರಿಗಳ ಹೆಸರುಗಳನ್ನು ಬದಲಾವಣೆ ಮಾಡುವಂತಹ ತಿದ್ದುಪಡಿ ಸಹ ಇದೆ. ಆದ್ದರಿಂದ ಇದನ್ನು ಸಹ ಇದರಲ್ಲಿ ಅಳವಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಅರಣ್ಯ ಇಲಾಖೆಗೆ ಸೇರಿದ ನಿಗಮಗಳು ಏನಿವೆ. ಅವು ಮಾರಾಟ ಮಾಡಿದ ವಸ್ತುಗಳ ಮೇಲೆ ತೆರಿಗೆಯನ್ನು ವಸೂಲಿ ಮಾಡಲು ಈ ತಿದ್ದುಪಡಿ ಮಸೂದೆಯಿಂದ ಅನುಕೂಲವಾಗುತ್ತದೆ. ಮುಖ್ಯವಾಗಿ ಈ ಹಿಂದಿನ ಗುಂಡೂರಾವ್ ಅವರ ಮಂತ್ರಿಮಂಡಲದವರು ಕೆಲವೊಂದು ರಿಯಾಯಿತಿಗಳನ್ನು ಕೊಡುವ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದ್ದರು ಅದನ್ನು ನಾವು ರ್‍ಯಾಟಿಫೈ ಮಾಡುತ್ತಿದ್ದೇವೆ. ಒಟ್ಟಿನಲ್ಲಿ ಎಲ್ಲ ದೃಷ್ಟಿಯಿಂದಲೂ ಈ ತಿದ್ದುಪಡಿ ಮಸೂದೆಯನ್ನು ಮಾನ್ಯ ಸದಸ್ಯರು ಸ್ವಾಗತ ಮಾಡಿದ್ದಾರೆ. ಇದರ ಚರ್ಚೆಯಲ್ಲಿ ಭಾಗವಹಿಸಿದವರೆಲ್ಲರೂ ಇದಕ್ಕೆ ಸಂಪೂರ್ಣವಾದ ಬೆಂಬಲವನ್ನು ಕೊಟ್ಟಿದ್ದಾರೆ, ಅದಕ್ಕಾಗಿ ಅವರೆಲ್ಲರಿಗೂ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕೊನೆಯದಾಗಿ ಇದಕ್ಕೆ ಮಾನ್ಯ ಸಭೆ ಒಪ್ಪಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ :

"೧೯೮೭ನೇ ಇಸವಿಯ ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ ೨ ರಿಂದ ೭

ಅಧ್ಯಕ್ಷರು.—ಖಂಡ ೨ಕ್ಕೆ ಮಾನ್ಯ ಮಂತ್ರಿಗಳು ತಿದ್ದುಪಡಿಯನ್ನು ಕೊಟ್ಟಿದ್ದಾರೆ. ಈಗ ಮಾನ್ಯ ಮಂತ್ರಿಗಳು ತಿದ್ದುಪಡಿಯನ್ನು ಮಂಡಿಸಬೇಕು.

SRI B. RACHAIAH.—Sir, I beg to move that "That in sub-clause (1), for the words "Principal Chief Conservator" "Additional Chief Conservator", the words "Principal Chief Conservator", "Chief Conservator", "Additional Chief Conservator" shall be substituted."

(ತಿದ್ದುಪಡಿಯನ್ನು ಮಂಡಿಸಲಾಯಿತು)

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಇದು ಆಡಳಿತಾತ್ಮಕವಾದ ಒಂದು ಬದಲಾವಣೆ ಆಗಿದೆ. ಆದ್ದರಿಂದ ಇದನ್ನು ಮಾನ್ಯ ಸಭೆ ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ,

In sub-clause (1), for the words "Principal Chief Conservator" "Additional Chief Conservator" the words "Principal Chief Conservator" Chief Conservator", Additional Chief Conservator" shall be substituted."

Motion was adopted and

ಖಂಡ 2 ವಿಧೇಯಕದ ಅಂಗವಾಯಿತು.

ಅಧ್ಯಕ್ಷರು.—''ಖಂಡ ೨ ರಿಂದ ೭ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೭ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ–8

ಅಧ್ಯಕ್ಷರು.—ಮಾನ್ಯ ಶ್ರೀ ಆರ್. ವೆಂಕಟರಾಮಯ್ಯನವರು ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ. ಅವರು ತಿದ್ದುಪಡಿಯನ್ನು ಮಂಡಿಸಬೇಕು.

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

8ನೇ ಖಂಡವನ್ನು ಹಿಂದಕ್ಕೆ ತೆಗೆದುಕೊಳ್ಳುವುದು

ಅಧ್ಯಕ್ಷರು.—ಮಾನ್ಯ ಅರಣ್ಯ ಮಂತ್ರಿಯವರು ಸಹ ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ. ಅವರು ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಬಿ. ರಾಚಯ್ಯ.—''ಕ್ಲಾಸ್–೮ಕ್ಕೆ ತಿದ್ದುಪಡಿಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

''೮ನೇ ಖಂಡವನ್ನು ಹಿಂದಕ್ಕೆ ತೆಗೆದುಕೊಳ್ಳುವುದು''

8ನೇ ಖಂಡವನ್ನು ಹಿಂತೆಗೆದುಕೊಳ್ಳಲು ಅನುಮತಿ ನೀಡಲಾಯಿತು.

ಖಂಡ 9 ರಿಂದ 14 ರವರೆಗೆ

ಅಧ್ಯಕ್ಷರು.—ಪ್ರಸಾವವೇನೆಂದರೆ,

''ಖಂಡ ೮ ರಿಂದ ೧೪ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೮ ರಿಂದ ೧೪ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

''ಮೊದಲನೇ ಖಂಡ ಹೆಸರು ಮತ್ತು ಅಪರಣಿಕೆಗಳು ವಿಧೇಯಕದ ಭಾಗವಾಗಿರುತ್ತದೆ''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

(ಮೊದಲನೇ ಖಂಡ, ಹೆಸರು ಮತ್ತು ಅವರಣಿಕೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ೧೯೮೭ನೇ ಇಸವಿಯ ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕವನ್ನು ಸಭೆಯು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''೧೯೮೭ನೇ ಇಸವಿಯ ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿತು.